16 June 2026 Tuesday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ನಮ್ಮ ಬದುಕಿನಲ್ಲಿ ನಾವು ಸಂಗ್ರಹಿಸ
ಬೇಕಾಗಿದ್ದು ಸಂತೋಷದ
ಕ್ಷಣಗಳನ್ನೇ ಹೊರತು ದುಬಾರಿ
ಮಾತುಗಳನ್ನಲ್ಲ!

–ಸ್ನೇಹಾ ಆನಂದ್

info.varthaman@gmail.com



ನೀರಿನ ಸಮಸ್ಯೆ ನಿವಾರಣೆಗೆ ಶಾಸಕ ಜಿಟಿಡಿ ಸೂಚನೆ — ಪುಟ ಸಂ. 2



ಸಾಹಿತ್ಯವನ್ನು ಹೆಚ್ಚು ಜನರು ಓದುವಂತಾದಾಗ ಸಾರ್ಥಕತೆ — ಪುಟ ಸಂ. 3



ಶಾಸಕ ಇಕ್ಬಾಲ್ ಹುಸೇನ್ ಆರೋಗ್ಯ ಸ್ಥಿರ, ವೈದ್ಯರ ನಿಗಾದಲ್ಲಿ ಶಾಸಕರು — ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 199 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ಸರ್ಕಾರ ದಿವಾಳಿ: ಕಾರಜೋಳ

**ಶಿವಮೊಗ್ಗ:** ಕಳೆದ ಮೂರು ವರ್ಷಗಳಲ್ಲಿ ಸರ್ಕಾರ ಆರ್ಥಿಕವಾಗಿ ದಿವಾಳಿಯಾಗಿದೆ. ಸಂಪನ್ಮೂಲ ಕ್ರೋಢೀಕರಿಸುವಲ್ಲಿ ವಿಫಲವಾಗಿದೆ. ಹೀಗಾಗಿ ಗ್ಯಾರಂಟಿ ಯೋಜನೆಗಳನ್ನು ಪರಿಷ್ಕರಿಸುವ ನೆಪದಲ್ಲಿ ಜನರಿಗೆ ಮೋಸ ಮಾಡಲು ಹೊರಟಿದೆ ಎಂದು ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ ಆಕ್ರೋಶ ವ್ಯಕ್ತಪಡಿಸಿದರು.



ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಇಬ್ಬರೂ ಸೇರಿ ಚುನಾವಣೆ ಸಂದರ್ಭದಲ್ಲಿ ಪಕ್ಷದ ಪ್ರಣಾಳಿಕೆ ಬಿಡುಗಡೆ ಮಾಡಿ ಎಲ್ಲ ಹೆಣ್ಣುಮಕ್ಕಳಿಗೆ ಗೃಹಲಕ್ಷ್ಮಿ ಯೋಜನೆಯಡಿ 2 ಸಾವಿರ ನೆರವು, ಮಹಿಳೆಯರಿಗೆ ಉಚಿತ ಬಸ್, ಎಲ್ಲರಿಗೂ ಉಚಿತ ವಿದ್ಯುತ್, ನಿರುದ್ಯೋಗಿಗಳಿಗೆ ಮಾಸಾಶನದ ಆಸೆ ತೋರಿಸಿ ಬಡವರ ಮನಗೆದ್ದು ಅಧಿಕಾರಕ್ಕೆ ಬಂದಿದ್ದರು. ಈಗ ಪರಿಷ್ಕರಣೆ ಹೆಸರಲ್ಲಿ ಗೃಹಲಕ್ಷ್ಮಿ ಯೋಜನೆಗೆ ಕುತ್ತು ತರಲು ಹೊರಟಿದ್ದಾರೆ ಎಂದು ಟೀಕಿಸಿದರು.

ಪರಿಶಿಷ್ಟರ ಕಲ್ಯಾಣಕ್ಕೆ ಮೀಸಲಿಟ್ಟಿದ್ದ ಎಸ್ ಇಪಿ–ಟಿಎಸ್‌ಪಿ ಹಣವನ್ನು ಹಿಂದಿನ ಸರ್ಕಾರದ ಅವಧಿಯಲ್ಲಿ ಬೇರೆ ಉದ್ದೇಶಕ್ಕೆ ಬಳಸಿಕೊಂಡು ಅನುದಾನವನ್ನು ದುರುಪಯೋಗ ಮಾಡಿಕೊಂಡರು. ಆ ಹಣವನ್ನು ಪರಿಶಿಷ್ಟರ ಶಿಕ್ಷಣ, ಉದ್ಯೋಗ, ವಸತಿ ಉದ್ದೇಶಕ್ಕೆ ಬಳಸದೆ ಸಮುದಾಯಕ್ಕೆ ಅನ್ಯಾಯ ಮಾಡಲಾಗಿದೆ ಎಂದು ದೂರಿದರು.

## ಶಾಸಕ ಇಕ್ಬಾಲ್ ಹುಸೇನ್‌ಗೆ ಎದೆನೋವು: ಆಸ್ಪತ್ರೆಗೆ ದಾಖಲು

**ಬೆಂಗಳೂರು:** ರಾಮನಗರ ಶಾಸಕ ಇಕ್ಬಾಲ್ ಹುಸೇನ್ ಅವರಿಗೆ ಎದೆನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಬೆಂಗಳೂರಿನ ವೈದೇಹಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಕಳೆದ ಎರಡು ದಿನಗಳಿಂದ ಎದೆನೋವು ಕಾಣಿಸಿಕೊಂಡಿದ್ದರಿಂದ ಇಕ್ಬಾಲ್ ಹುಸೇನ್ ಆಸ್ಪತ್ರೆಗೆ ದಾಖಲಾಗಿದ್ದರು. ವೈದ್ಯರು ಅವರ ಆರೋಗ್ಯ ತಪಾಸಣೆ ನಡೆಸಿ ಆಂಜಿಯೋಗ್ರಾಂ ಪರೀಕ್ಷೆ ಮಾಡಿದ್ದಾರೆ. ಇಕ್ಬಾಲ್ ಹುಸೇನ್ ಅವರಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯ ಡಾ. ಶ್ರೀನಿವಾಸ್ ಮಾತನಾಡಿ, ಆಂಜಿಯೋಗ್ರಾಂ ವೇಳೆ ರಕ್ತನಾಳಗಳಲ್ಲಿ ಬ್ಲಾಕ್





## ಎಚ್‌ಡಿಕೆ ಶಬರಿಮಲೆ ಯಾತ್ರೆ

**ಬೆಂಗಳೂರು:** ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಶಬರಿಮಲೆ ಯಾತ್ರೆ ಕೈಗೊಂಡಿದ್ದಾರೆ. ಸೋಮವಾರ ಬೆಳಗಿನ ಜಾವವೇ ಕೊಚ್ಚಿನ್ ನಗರದ ಶ್ರೀ ಸುಬ್ರಮಣ್ಯ ಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ ಶ್ರೀ ಅಯ್ಯಪ್ಪ ಸ್ವಾಮಿ ಮಾಲೆ ಧರಿಸಿ ನಂತರ ದೇಗುಲದಲ್ಲಿಯೇ ಇರುಮುಡಿ ಹೊತ್ತು ಶಬರಿಮಲೆಗೆ ಯಾತ್ರೆ ಹೊರಟರು.




ಸೋಮವಾರ ಮಧ್ಯಾಹ್ನದ ಹೊತ್ತಿಗೆ ಪಂಪಾ ನದಿ ತೀರವನ್ನು ಸೇರಿದ ಸಚಿವರು ತದನಂತರ ಪುಣ್ಯ ಸ್ನಾನ ಮಾಡಿ ಶಬರಿಮಲೆ ಹತ್ತಿಲಿದ್ದಾರೆ. ಅಯ್ಯಪ್ಪ ಸನ್ನಿಧಿಯಲ್ಲಿ ಪಡಿ ಪೂಜೆಯಲ್ಲಿ ಪಾಲ್ಗೊಳಿರುವ ಸಚಿವರು ನಂತರ ಅಯ್ಯಪ್ಪ ಸ್ವಾಮಿಗೆ ಪುಷ್ಪ ಅಭಿಷೇಕದಲ್ಲಿ ಭಾಗಿಯಾಗಲಿದ್ದಾರೆ. ಕುಮಾರಸ್ವಾಮಿ ಕೇಂದ್ರ ಸಚಿವರಾದ ನಂತರ ಶಬರಿಮಲೆಗೆ ಕೈಗೊಂಡ ಮೊದಲ ಯಾತ್ರೆ ಇದಾಗಿದೆ. ಇದಕ್ಕೂ ಮೊದಲು ಅವರು ಹಲವಾರು ಬಾರಿ ಅಯ್ಯಪ್ಪನ ಸನ್ನಿಧಿಗೆ ಯಾತ್ರೆ ಕೈಗೊಂಡಿದ್ದಾರೆ.

ಪುಟ 2ಕ್ಕೆ

## ಇಂದಿರಾ ಲಂಕೇಶ್ ನಿಧನ

**ಬೆಂಗಳೂರು:** ಖ್ಯಾತ ಸಾಹಿತಿ ದಿ. ಪಿ.ಲಂಕೇಶ್ ಪತ್ನಿ, ಲೇಖಕಿ ಇಂದಿರಾ ಲಂಕೇಶ್ (84) ಅವರು ವಯೋಸಹಜ ಕಾಯಿಲೆಯಿಂದ ಸೋಮವಾರ ಬೆಳಗ್ಗೆ ನಿಧನರಾದರು.



ಬೆಂಗಳೂರಿನ ರಾಜಾಜಿನಗರದಲ್ಲಿರುವ ತಮ್ಮ ನಿವಾಸದಲ್ಲಿ ಇಂದಿರಾ ಅವರು ಕೊನೆಯುಸಿರೆಳೆದರು. ಅವರ ನಿಧನದಿಂದ ಕನ್ನಡ ಸಾಹಿತ್ಯ ಮತ್ತು ಪತ್ರಿಕೋದ್ಯಮದ ಮತ್ತೊಂದು ಮಹತ್ವದ ಕೊಂಡಿ ಕಳಚಿದಂತಾಗಿದೆ.

ಕನ್ನಡ ಪತ್ರಿಕೋದ್ಯಮದಲ್ಲಿ ಹೊಸ ಇತಿಹಾಸ ಸೃಷ್ಟಿಸಿದ 'ಲಂಕೇಶ್ ಪತ್ರಿಕೆ'ಯ ಆರಂಭದ ದಿನಗಳಿಂದಲೂ ಇಂದಿರಾ ಅವರು ಪತಿ ಪಿ.ಲಂಕೇಶ್ ಅವರಿಗೆ ಬೆನ್ನೆಲುಬಾಗಿ ನಿಂತಿದ್ದರು. ಕೇವಲ ವೈವಾಹಿಕ ಜೀವನದಲ್ಲಷ್ಟೇ ಅಲ್ಲದೆ, ಪತ್ರಿಕೆಯ ಆಡಳಿತ, ಮುನ್ನಡೆ ಹಾಗೂ ಪ್ರಕಾಶನದ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದ ಹೆಗ್ಗಳಿಕೆ ಇವರದ್ದಾಗಿದೆ.

2000ನೇ ಇಸವಿಯಲ್ಲಿ ಪಿ.ಲಂಕೇಶ್

ಪುಟ 2ಕ್ಕೆ

## ಬಾಲಕೃಷ್ಣಗೆ ಸಚಿವ ಸ್ಥಾನ ಸಿಗದೆ ಹತಾಶೆ: ಅಶೋಕ್



**ಬೆಂಗಳೂರು:** ಕಾಂಗ್ರೆಸ್ ಶಾಸಕ ಎಚ್.ಸಿ.ಬಾಲಕೃಷ್ಣ ಮತ್ತು ಬಿಜೆಪಿ ನಾಯಕ ಆರ್. ಅಶೋಕ್ ನಡುವೆ 'ಬಿಡದಿ ಟೌನ್‌ಶಿಪ್' ಭೂಸ್ವಾಧೀನ ವಿಚಾರವಾಗಿ ತೀವ್ರ ರಾಜಕೀಯ ಜಟಾಪಟಿ ನಡೆದಿದೆ.

ಕಳೆದ ಮೂರು ವರ್ಷಗಳಿಂದ ಡಿ.ಕೆ ಶಿವಕುಮಾರ್ ಮುಖ್ಯಮಂತ್ರಿ ಆಗಬೇಕೆಂದು ಪ್ರತಿಪಾದಿಸುತ್ತಾ, ನಿರಂತರವಾಗಿ ಮಾಧ್ಯಮಗಳಿಗೆ ಹೇಳಿಕೆ ನೀಡುತ್ತಾ ಒಂಟಿ ಕಣ್ಣಿನಿಂದ ಕಣ್ಣೀರು ಸುರಿಸುತ್ತಿದ್ದ ಮಾಗಡಿ ಶಾಸಕ ಬಾಲಕೃಷ್ಣ, ಈಗ ಸಚಿವ ಸ್ಥಾನ ಸಿಗದ ಕಾರಣ ಹತಾಶೆಯಿಂದ ವಿರೋಧ ಪಕ್ಷದ ನಾಯಕರನ್ನು ಅವಮಾನಿಸುತ್ತಿದ್ದಾರೆ ಎಂದು ಪ್ರತಿಪಕ್ಷ ನಾಯಕ ಆರ್ ಅಶೋಕ್ ಸೋಮವಾರ ವಾಗ್ದಾಳಿ ನಡೆಸಿದ್ದಾರೆ.

ನೀನೇನು ಕುಬೇರನ ಅಥವಾ ಟಾಟಾ–ಬಿರ್ಲಾ ಮಗನಾ, ನೀನು ಮಂತ್ರಿ ಆದ ಮೇಲೆಯೇ ತಾನೇ ಇಷ್ಟೊಂದು ಆಸ್ತಿ ಮಾಡಿದ್ದು. ನಾನು ಎಲ್ಲೂ ಹಣವನ್ನು ಪಡೆದಿಲ್ಲ ಎಂದು ಪ್ರಮಾಣ ಮಾಡಿ ಎಂದು ಅಶೋಕ್ ಅವರಿಗೆ ಬಾಲಕೃಷ್ಣ ಅವರು ಸವಾಲು ಹಾಕಿದ್ದರು.

ಬಾಲಕೃಷ್ಣ ಹೇಳಿಕೆಗೆ ತಿರುಗೇಟು ನೀಡಿರುವ ಅಶೋಕ್ ಅವರು, ನನ್ನನ್ನು ನಿಂದಿಸುವ ಮೂಲಕ ಅಥವಾ ವೈಯಕ್ತಿಕ ದಾಳಿ ಮಾಡುವ ಮೂಲಕ ಸಚಿವ ಸ್ಥಾನ ಪಡೆಯಬಹುದು ಎಂದುಕೊಂಡಿದ್ದಾರೆ. ನಿಮ್ಮದು ಎಲುಬಿಲ್ಲದ ನಾಲಿಗೆ ಎಂದು ಟೀಕಿಸಿದ್ದಾರೆ.

ಅವರ ಮೂರು ವರ್ಷಗಳ ಅಚಲ ನಿಷ್ಠೆಗಾಗಿ ಅಲ್ಲದಿದ್ದರೂ, ಕನಿಷ್ಠ ನನ್ನನ್ನು ನಿಂದಿಸಿದ್ದಕ್ಕಾಗಿಯಾದರೂ ಬಾಲಕೃಷ್ಣ ಅವರಿಗೆ ಡಿ.ಕೆ.ಶಿವಕುಮಾರ್ ಸಚಿವ ಸ್ಥಾನ ನೀಡಲಿ ಎಂದು ಕುಟುಕಿದ್ದಾರೆ.

# ಪಬ್‌ಗೆ ಬೆಂಕಿ: ಇಬ್ಬರು ಸಾವು

## ಭೀಕರ ಅಗ್ನಿ ಅವಘಡ: ಏಳು ಮಂದಿಗೆ ತೀವ್ರ ಗಾಯ

**ಮೈಸೂರು:** ಮೈಸೂರಿನ ರಿಂಗ್ ರಸ್ತೆ ಸಮೀಪದ ಫಾಕ್ಸ್ ಜೆನ್ ಪಬ್‌ನಲ್ಲಿ ಸಂಭವಿಸಿದ ಭೀಕರ ಅಗ್ನಿ ಅವಘಡದಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ಏಳು ಮಂದಿ ಗಾಯಗೊಂಡಿದ್ದಾರೆ.

ಬೆಂಕಿ ಅವಘಡದಲ್ಲಿ ಡಾರ್ಜಿಲಿಂಗ್ ಮೂಲದ ಸಾಹಿನ್ (26) ಹಾಗೂ ನೇಪಾಳ ಮೂಲದ ಪ್ರಕಾಶ್ (24) ಮೃತಪಟ್ಟಿದ್ದಾರೆ. ಘಟನೆಯಲ್ಲಿ ಸೋನು, ರಮೇಶ್, ಮಹದೇವ ಪ್ರಸಾದ್, ಪ್ರಜ್ವಲ್, ಅವಿನಾಶ್ ಹಾಗೂ ಪಬ್ ಮಾಲೀಕ ಪ್ರೀತಂ ಗಾಯಗೊಂಡಿದ್ದಾರೆ.

ನಗರದ ದಟ್ಟಗಳ್ಳಿ 4ನೇ ಹಂತದ ಬಳಿ ಇರುವ ಪಬ್‌ನಲ್ಲಿ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡಿದೆ. ಕ್ಷಣಾರ್ಧದಲ್ಲೇ ಬೆಂಕಿ ವ್ಯಾಪಿಸಿ ಪಬ್ ಸಂಪೂರ್ಣ ಸುಟ್ಟು ಹೋಗಿದೆ. ಬೆಂಕಿ ಹೊತ್ತಿಕೊಂಡ ಸಂದರ್ಭದಲ್ಲಿ ಪಬ್‌ನಲ್ಲಿದ್ದ ಸುಮಾರು 15 ಮಂದಿಯನ್ನು ರಕ್ಷಣೆ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.ಪ್ರಾಥಮಿಕ ತನಿಖೆಯಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿಕೊಂಡಿರುವ ಶಂಕೆ ವ್ಯಕ್ತವಾಗಿದೆ. ಪಬ್‌ನ ಒಳಾಂಗಣ ವಿನ್ಯಾಸ ಕ್ಕಾಗಿ ಬಳಸಲಾಗಿದ್ದ ಒಣ ಹುಲ್ಲು, ಬಿದಿರಿನ ಪೀಠೋ ಪಕರಣಗಳು ಹಾಗೂ ಮರದ ವಸ್ತುಗಳಿಂದ ಬೆಂಕಿ ವೇಗವಾಗಿ ವ್ಯಾಪಿಸಿದೆ ಎನ್ನಲಾಗಿದೆ. ಈ ರೆಸ್ಟೋ ಪಬ್ ಮಾಲೀಕ ನಟ ಪ್ರೀತಂ ಎಂದು ತಿಳಿದುಬಂದಿದೆ. ಪ್ರೀತಂ ಅವರು ಬ್ರಹ್ಮ ವಿಷ್ಣು ಮಹೇಶ್ವರ ಚಿತ್ರದ ನಾಯಕ ನಟ. ಶ್ರೀರಂಗಪಟ್ಟಣದ ಬಳಿ ರಿವರ್ ರಾಂಚ್ ರೆಸಾರ್ಟ್ ಕೂಡ ನಡೆಸುತ್ತಿದ್ದಾರೆ.

ಘಟನೆ ಸಂಭವಿಸಿದ ವೇಳೆ ಪ್ರೀತಂ ಹಾಗೂ ಅವರ ಸ್ನೇಹಿತ ಅವಿನಾಶ್ ಸ್ಥಳದಲ್ಲೇ ಇದ್ದರು. ಅವಿನಾಶ್ ಅವರಿಗೆ ತಲೆಗೆ ಸುಟ್ಟ ಗಾಯಗಳಾಗಿವೆ. ಪ್ರೀತಂ ಅವರ ಕೈ ಹಾಗೂ ಮುಖಕ್ಕೆ ಗಾಯಗಳಾಗಿವೆ.

ಅಗ್ನಿಶಾಮಕ ವಿಭಾಗೀಯ ಅಧಿಕಾರಿ ರಂಗನಾಥ್ ಅವರು ಘಟನೆ ಬಗ್ಗೆ ಪ್ರತಿಕ್ರಿಯಿಸಿದ್ದು, ಸೋಮವಾರ ಮಧ್ಯಾಹ್ನ 3.15 ಸರಸ್ವತಿಪುರಂ ಅಗ್ನಿಶಾಮಕ ಕೇಂದ್ರಕ್ಕೆ ಕರೆ ಬಂತು. ತಕ್ಷಣ ನಾವು ಘಟನಾ ಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸಿ ಸುಮಾರು 15ಕ್ಕೂ ಹೆಚ್ಚು ಜನರನ್ನು ರಕ್ಷಣೆ ಮಾಡಿದ್ದೇವೆ. ಕಿಚನ್ ವಿಭಾಗದಲ್ಲಿ ಇಬ್ಬರು ಸ್ಥಳದಲ್ಲೇ ಸಾವಿಗೀಡಾಗಿದ್ದರು. ಸೂಕ್ತ ಫೈರ್ ಎಕ್ಸಿಟ್ ಇಲ್ಲದ ಕಾರಣ ಹೆಚ್ಚಿನ ಅನಾಹುತ ಸಂಭವಿಸಿದೆ. ಮೇಲ್ಛಾವಣಿಯಲ್ಲಿ ಮರ ಹುಲ್ಲು ಇದ್ದುದ್ದರಿಂದ ಬೆಂಕಿ ಹೆಚ್ಚು ವ್ಯಾಪಿಸಿದೆ ಎಂದು ವಿವರಿಸಿದರು.




### ವಿಶೇಷ ಆಫರ್ ಕಾರಣ?

**ದಕ್ಷಿಣ ಆಫ್ರಿಕಾದ ಮಾರಾ ಜನಾಂಗದ ಥೀಮ್ ಆಧಾರಿತ ಈ ರೆಸ್ಟೋ ಪಬ್‌ನಲ್ಲಿ ಸೋಮವಾರ ವಿಶೇಷ ಆಫರ್ ಘೋಷಿಸಲಾಗಿತ್ತು. ಯಾವುದೇ ಆಹಾರ ಪದಾರ್ಥ ಖರೀದಿಸಿದರೂ 175 ರೂಪಾಯಿ ದರ ನಿಗದಿಪಡಿಸಲಾಗಿದ್ದ ಕಾರಣ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಹಕರು ಆಗಮಿಸಿದ್ದರು ಎಂದು ತಿಳಿದು ಬಂದಿದೆ. ಘಟನೆ ಕುರಿತು ಪೊಲೀಸರು ಮತ್ತು ಅಗ್ನಿಶಾಮಕ ಇಲಾಖೆ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ.**



## ಅನ್ಯರಿಗೆ ಗ್ಯಾರಂಟಿ ಕೊಡಲ್ಲ

### ಫಲಾನುಭವಿಗಳಿಗೆ ಗುರುತಿನ ಚೀಟಿ: ಡಿ.ಕೆ.ಶಿವಕುಮಾರ್

**ಬೆಂಗಳೂರು:** ಜನರ ಆದಾಯ ಕುಸಿಯುತ್ತಿರುವ ಹಿನ್ನೆಲೆಯಲ್ಲಿ ಮಹಿಳೆಯರಿಗೆ ಆರ್ಥಿಕ ಶಕ್ತಿ ತುಂಬಲು ನಮ್ಮ ಸರ್ಕಾರ ನೀಡಿರುವ ಗ್ಯಾರಂಟಿ ಯೋಜನೆಗಳನ್ನು ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪುನರುಚ್ಚರಿಸಿದರು.

ಮಾಧ್ಯಮಗಳ ಜೊತೆ ಸೋಮವಾರ ಮಾತನಾಡಿದ ಅವರು, ಕರ್ನಾಟಕದವರಿಗೆ ಮಾತ್ರ ಗ್ಯಾರಂಟಿ ಯೋಜನೆ ನೀಡಲಾಗುತ್ತದೆ. ಅನ್ಯ ರಾಜ್ಯದವರಿಗೆ ಯೋಜನೆ ನೀಡುವುದಿಲ್ಲ. ಉಚಿತ ವಿದ್ಯುತ್ ಅನ್ನು ನಮ್ಮ ರಾಜ್ಯದ ಮತದಾರರಿಗೆ ನೀಡಬೇಕೇ ಹೊರತು, ಬೇರೆ ರಾಜ್ಯದವರಿಗೆ ಯಾಕೆ ಕೊಡಬೇಕು? ಹೀಗಾಗಿ ಫಲಾನುಭವಿಗಳಿಗೆ ಗುರುತಿನ ಚೀಟಿ ನೀಡಲು ಸಚಿವ ಸಂಪುಟದಲ್ಲಿ ತೀರ್ಮಾನಿಸಿದ್ದೇವೆ. ಆ ಪ್ರಕ್ರಿಯೆ ನಡೆಯುತ್ತಿದೆ. ಯೋಜನೆ ನಿಲ್ಲಿಸುವುದು ನಮ್ಮ ಉದ್ದೇಶವಲ್ಲ. ನಮ್ಮ ಗ್ಯಾರಂಟಿ ದೇಶಕ್ಕೆ ಮಾದರಿ. ಮಹಾರಾಷ್ಟ್ರ, ಮಧ್ಯಪ್ರದೇಶ, ಆಂಧ್ರಪ್ರದೇಶ ಸೇರಿದಂತೆ ಬೇರೆ ರಾಜ್ಯಗಳು ನಮ್ಮ ಮಾದರಿ ಅನುಸರಿಸಿವೆ ಎಂದು ತಿಳಿಸಿದರು.

ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸಲಾಗುತ್ತಿದೆ ಎಂದು ವಿರೋಧ ಪಕ್ಷಗಳು ಪ್ರಚಾರ ಮಾಡುತ್ತಿವೆಯಲ್ಲ ಎಂಬ ಸುದ್ದಿಗಾರರ ಪ್ರಶ್ನೆಗೆ, ಅವರು ಇರುವುದೇ ಟೀಕೆ ಮಾಡಲು. ನಾವು ಏನೇ ಒಳ್ಳೇಯದು ಮಾಡಲು ಮುಂದಾದರೂ ಅದಕ್ಕೆ ಅಡ್ಡಗಾಲು ಹಾಕುವುದಕ್ಕೆ ವಿರೋಧ ಪಕ್ಷಗಳಿರುವುದು. ಅವರ ಕೈಯಲ್ಲಿ ಆಗದಿದ್ದ ಕೆಲಸ ನಾವು ಮಾಡುತ್ತಿದ್ದೇವೆ. ಗ್ಯಾರಂಟಿ ಯೋಜನೆ ಅರ್ಹ ಫಲಾನುಭವಿಗಳಿಗೆ

ಪುಟ 2ಕ್ಕೆ



### ನಕಲಿ ಫೈನಾನ್ಸ್‌ಗೆ ಕಡಿವಾಣ

**ಕೆಲವರು ಗೃಹಲಕ್ಷ್ಮಿ ಹಣವನ್ನು ನಕಲಿ ಫೈನಾನ್ಸ್ ವ್ಯವಹಾರಕ್ಕೆ ಬಳಸುತ್ತಿದ್ದಾರೆ. ಬೆಳಗಾವಿ ಪ್ರಕರಣವನ್ನು ನೋಡಿದ್ದೇವಲ್ಲ. ಇದಕ್ಕಾಗಿ ಗ್ರಾಮ ಪಂಚಾಯಿತಿಯಿಂದ ತಾಲ್ಲೂಕು ಪಂಚಾಯಿತಿವರೆಗೆ ಎಲ್ಲೆಲ್ಲಿ ಇಂತಹ ಸ್ಕೀಂಗಳಿವೆ ಅವುಗಳಿಗೆ ಕಡಿವಾಣ ಹಾಕಲು ನಾವು ನಿರ್ದೇಶನ ನೀಡಿದ್ದೇವೆ. ನಮ್ಮ ಹೃದಯದಿಂದ ಕೊಟ್ಟ ಯೋಜನೆಗಳಿವು. ಮಹಿಳೆಯರ ಮನೆಗಳು ಬೆಳಗಬೇಕು ಎಂದು ನೀಡಲಾಗಿದೆ. ವಿರೋಧ ಪಕ್ಷಗಳು ಹೀಗೆ ಮಾತನಾಡುತ್ತಿರಲಿ ಎಂದು ಕಿಡಿ ಕಾರಿದರು.**

### ಎಚ್‌ಡಿಕೆಗೆ ಡಿಕೆ ತಿರುಗೇಟು

ಮಹಾರಾಷ್ಟ್ರದಲ್ಲಿ 90 ಸಾವಿರ ಎಕರೆ, ತೆಲಂಗಾಣದಲ್ಲಿ 40 ಸಾವಿರ ಎಕರೆಯಲ್ಲಿ ಟೌನ್ ಶಿಪ್ ಮಾಡುತ್ತಿದ್ದಾರೆ. ಬಿಡದಿಯದು ನನ್ನ ಯೋಜನೆಯಲ್ಲ. ಕುಮಾರಸ್ವಾಮಿ ಈ ಯೋಜನೆಗೆ ಅಧಿಸೂಚನೆ ಹೊರಡಿಸಿದ್ದರು. ಹಿಂದಿನ ಬಿಜೆಪಿ ಸರ್ಕಾರ ಈ ಜಾಗದಲ್ಲಿ 1 ಸಾವಿರ ಎಕರೆಯನ್ನು ಕೆಐಎಡಿಬಿಗೆ ಸ್ವಾಧೀನ ಪಡಿಸಿಕೊಟ್ಟಾಗ ಇವರು

ಪುಟ 2ಕ್ಕೆ

## ಸಂಪ್‌ಗೆ ಬಿದ್ದು ಮಗು ಸಾವು

**ಕೋಲಾರ:** ಕೋಲಾರದ ಕಾರಂಜಿಕಟ್ಟೆ ಬಡಾವಣೆಯಲ್ಲಿ ಮನೆ ಬಳಿಯ ಸಂಪ್‌ಗೆ ಬಿದ್ದು ಮೂರು ವರ್ಷದ ಮಗು ಸಾವನ್ನಪ್ಪಿದ ದಾರುಣ ಘಟನೆ ಸೋಮವಾರ ನಡೆದಿದೆ.

ಮೃತ ಮಗುವನ್ನು ನಗರದ ವಿಕಾಸ್ ಹಾಗೂ ಹಂಸ ದಂಪತಿ ಪುತ್ರ ಯಶಸ್ (3) ಎಂದು ಗುರುತಿಸಲಾಗಿದೆ. ಅಂಗಳದಲ್ಲಿ ಆಟವಾಡುವಾಗ ಆಕಸ್ಮಿಕವಾಗಿ ಸಂಪ್‌ಗೆ ಬಿದ್ದಿದೆ. ಸಂಪ್‌ಗೆ ಬಿದ್ದ ಮಗುವನ್ನು ತಕ್ಷಣ ನೀರಿನಿಂದ ಹೊರತೆಗೆದು ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಆದರೆ ಅಷ್ಟರಲ್ಲೇ ಮಗು ಮೃತಪಟ್ಟಿದೆ.

ಪುಟ 2ಕ್ಕೆ

## ಅಮೆರಿಕ–ಇರಾನ್ ಶಾಂತಿ ಒಪ್ಪಂದ: ಕಚ್ಚಾತೈಲ ಬೆಲೆ ಇಳಿಕೆ

**ನವದೆಹಲಿ:** ಅಮೆರಿಕ–ಇರಾನ್ ನಡುವಣ 107 ದಿನಗಳ ಯುದ್ಧ ಕೊನೆಗೂ ಅಂತ್ಯವಾಗುವ ಕಾಲ ಸನ್ನಿಹಿತವಾಗಿದೆ. ಉಭಯ ದೇಶಗಳು ಶಾಂತಿ ಒಪ್ಪಂದವನ್ನು ಅಂತಿಮಗೊಳಿಸಿರುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ.

ಅಮೆರಿಕ–ಇರಾನ್ ಸಂಘರ್ಷವನ್ನು ಕೊನೆಗೊಳಿಸಲು ಮತ್ತು ಹಾರ್ಮುಜ್ ಜಲಸಂಧಿ ಮೂಲಕ ಸಾಗಣೆಯನ್ನು ಪುನಃಸ್ಥಾಪಿಸಲು ಪ್ರಾಥಮಿಕ ಒಪ್ಪಂದಕ್ಕೆ ಬಂದಿರುವುದಾಗಿ ಡೊನಾಲ್ಡ್ ಟ್ರಂಪ್ ಹಾಗೂ ಇರಾನ್ ಉಪ ವಿದೇಶಾಂಗ ಸಚಿವರು ಹೇಳಿದ ಬೆನ್ನಲ್ಲೇ ಕಚ್ಚಾ ತೈಲ ಬೆಲೆಯಲ್ಲಿ ಭಾರೀ ಇಳಿಕೆಯಾಗಿದೆ. ಕಚ್ಚಾ ತೈಲ ಬೆಲೆಯಲ್ಲಿ ಶೇ.4ರಷ್ಟು ಕುಸಿತವಾಗಿದೆ. ಅಂದರೆ ಪ್ರತಿ ಬ್ಯಾರಲ್‌ಗೆ 80 ಡಾಲರ್‌ಗೆ ಕಚ್ಚಾ ತೈಲ ಬೆಲೆ ಇಳಿಕೆಯಾಗಿದೆ. ಬ್ರೆಂಟ್ ಕಚ್ಚಾ ತೈಲದ ಫ್ಯೂಚರ್ಸ್ ಪ್ರತಿ ಬ್ಯಾರಲ್‌ಗೆ 3.58 ಡಾಲರ್ ಅಥವಾ 4.1ರಷ್ಟು ಇಳಿಯುವ ಮೂಲಕ ಪ್ರತಿ ಬ್ಯಾರಲ್ ಗೆ 83.75 ಕ್ಕೆ ಇಳಿದಿದೆ. ಯುದ್ಧದ ಪರಿಣಾಮದಿಂದ ಬ್ರೆಂಟ್ ಕಚ್ಚಾ ತೈಲ ಬ್ಯಾರಲ್ 120 ಡಾಲರ್ ವರೆಗೆ ತಲುಪಿ ದಾಖಲೆಯನ್ನು ಬರೆದಿತ್ತು. ಯುದ್ಧಕ್ಕೂ ಮುನ್ನ ತೈಲ ದರ 70 ಡಾಲರ್‌ನ ಆಸುಪಾಸಿನಲ್ಲಿತ್ತು.





ವಿಶ್ವದ ಶೇ.20ರಷ್ಟು ಕಚ್ಚಾತೈಲ ಹರ್ಮುಜ್ ಜಲಸಂಧಿ ಮೂಲಕ ಸಾಗುತ್ತದೆ.

ಪುಟ 2ಕ್ಕೆ

## ಬಿಜೆಪಿ ಗ್ಯಾರಂಟಿಗಳ ವಿರೋಧಿ: ಸಿದ್ದು

**ಬೆಂಗಳೂರು:** ಪಂಚ ಗ್ಯಾರಂಟಿ ಯೋಜನೆಗಳನ್ನು ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ, ಮುಂದಿನ ಎರಡು ವರ್ಷಗಳ ಕಾಲ ಮಾತ್ರವಲ್ಲ. ಮುಂದಿನ ಚುನಾವಣೆಯಲ್ಲಿ ಮತ್ತೆ ನಾವು ಅಧಿಕಾರಕ್ಕೆ ಬರಲಿದ್ದೇವೆ. ಆನಂತರವೂ ಅದು ಮುಂದುವರಿಯಲಿದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಕಂಡು ಬರುವ ದೋಷಗಳನ್ನು ಸರಿಪಡಿಸುವ ಕೆಲಸ ಪ್ರಾರಂಭದಿಂದಲೇ ನಡೆಯುತ್ತಿದೆ. ಈ ಯೋಜನೆಗಳ ಫಲಾನುಭವಿಗಳು ವಿರೋಧ ಪಕ್ಷಗಳ ಅಪಪ್ರಚಾರಕ್ಕೆ ಕಿವಿಗೊಟ್ಟು ಆತಂಕಕ್ಕೆ ಈಡಾಗಬೇಕಾಗಿಲ್ಲ ಎಂದು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.



ಬಿಜೆಪಿ ಮೂಲತಃ ಬಡವರ ವಿರೋಧಿ ಪಕ್ಷ. ಅದು ಗ್ಯಾರಂಟಿ ಯೋಜನೆಗಳನ್ನು ಮೊದಲ ದಿನದಿಂದಲೇ ವಿರೋಧಿಸುತ್ತಾ ಬಂದಿದೆ. ಮೊದಲು ಗ್ಯಾರಂಟಿ ಯೋಜನೆಗಳ ಜಾರಿಯೇ ಅಸಾಧ್ಯ ಎಂದಿದ್ದರು. ನಂತರದ ದಿನಗಳಲ್ಲಿ ಹಣಕಾಸಿನ ಕೊರತೆಯಿಂದ ಸರ್ಕಾರ ದಿವಾಳಿಯಾಗಲಿದೆ ಎಂದರು. ಈಗ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸಲಾಗುವುದು ಎನ್ನುವ ಪುಕಾರು ಹಬ್ಬಿಸುತ್ತಿದ್ದಾರೆ. ಇದು ಅವರ ರಾಜಕೀಯ ಹತಾಶೆ ಪ್ರತೀಕ ಎಂದು ಕಿಡಿಕಾರಿದ್ದಾರೆ.

ನಮ್ಮ ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುತ್ತಾ ಬಂದಿರುವ ಬಿಜೆಪಿ, ಅದೇ ಯೋಜನೆಗಳನ್ನು ಮಧ್ಯಪ್ರದೇಶ, ಬಿಹಾರ, ಪಶ್ಚಿಮಬಂಗಾಳ ರಾಜ್ಯಗಳಲ್ಲಿ ನಕಲು ಹೊಡೆದು ಅಧಿಕಾರಕ್ಕೆ ಬಂದಿದೆ. ಇವರಿಗೆ ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುವ ಯಾವ ನೈತಿಕತೆ ಇದೆ ಎಂದೂ ಕೇಳಿದ್ದಾರೆ

ಕೆಲವು ರಾಜ್ಯಗಳ ಚುನಾವಣಾ ಪೂರ್ವದಲ್ಲಿ ಬಿಜೆಪಿ ಗ್ಯಾರಂಟಿ ಯೋಜನೆಗಳ ಆಶ್ವಾಸನೆ ನೀಡಿದರೂ ಅವುಗಳನ್ನು ಸಂಪೂರ್ಣವಾಗಿ ಜಾರಿಗೆ

ಪುಟ 2ಕ್ಕೆ

# ಆರ್‌ಎಸ್‌ಎಸ್ ನೋಂದಣಿ ಏಕಿಲ್ಲ?

## ಮುಖ್ಯಸ್ಥ ಮೋಹನ್ ಭಾಗವತ್‌ಗೆ ಗೃಹ ಸಚಿವ ಪ್ರಿಯಾಂಕ್ ಪತ್ರ

**ಬೆಂಗಳೂರು:** ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ನೋಂದಣಿ ಮಾಡದಿರುವ ಬಗ್ಗೆ ಸ್ಪಷ್ಟನೆ ಕೋರಿ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರಿಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಸೋಮವಾರ ಪತ್ರ ಬರೆದಿದ್ದಾರೆ.

ಮೋಹನ್ ಭಾಗವತ್‌ಗೆ ಬರೆದ ಪತ್ರವನ್ನು ಎಕ್ಸ್‌ನಲ್ಲಿ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹಂಚಿಕೊಂಡಿದ್ದಾರೆ.

60,000 ಕ್ಕೂ ಹೆಚ್ಚು ಶಾಖೆಗಳು ಮತ್ತು ಕೋಟಿಗಟ್ಟಲೆ ಸ್ವಯಂಸೇವಕರನ್ನು ಹೊಂದಿರುವುದಾಗಿ ಪ್ರತಿಪಾದಿಸುವ ಸಂಸ್ಥೆಯು ಪಾರದರ್ಶಕತೆ ಮತ್ತು ಸಾಂವಿಧಾನಿಕ ಹೊಣೆಗಾರಿಕೆಯನ್ನು ಎತ್ತಿಹಿಡಿಯಬೇಕು ಎಂದು ಸೂಚಿಸಿದ್ದಾರೆ.

ಆರ್‌ಎಸ್‌ಎಸ್‌ನ ಅತ್ಯುನ್ನತ ಮತ್ತು ಪ್ರಮುಖ ನಿರ್ಧಾರ ತೆಗೆದುಕೊಳ್ಳುವ ಸಂಸ್ಥೆ ಅಖಿಲ ಭಾರತೀಯ ಪ್ರತಿನಿಧಿ ಸಭಾ ಬಿಡುಗಡೆ ಮಾಡಿದ 2025–26 ರ ವಾರ್ಷಿಕ ವರದಿ ಪ್ರಕಾರ, ಕರ್ನಾಟಕದಲ್ಲಿ 4,127 ದೈನಂದಿನ ಶಾಖೆಗಳು, 1,389 ಸಾಪ್ತಾಹಿಕ ಮಿಲನ್‌ಗಳು ಮತ್ತು 60 ಮಾಸಿಕ ಮಂಡಳಿಗಳನ್ನು ಹೊಂದುವ ಮೂಲಕ ಸಂಘಟನೆಯು ಭಾರಿ ಹೆಜ್ಜೆ ಗುರುತನ್ನು ಹೊಂದಿದೆ.



### ನಿಮಗೆ ವಿನಾಯಿತಿ ಏಕೆ?

ನಾಗರಿಕರು, ಕಾರ್ಮಿಕರು, ಎನ್‌ಜಿಓಗಳು, ಟ್ರಸ್ಟ್‌ಗಳು, ದೇವಾಲಯಗಳು ಮತ್ತು ಕಂಪನಿಗಳು ನೋಂದಾಯಿಸಲು, ಪಾರದರ್ಶಕತೆ ಕಾಯ್ದುಕೊಳ್ಳಲು ಮತ್ತು ಕಾನೂನನ್ನು ಅನುಸರಿಸಲು ಬಯಸುತ್ತಿವೆ. ಆದರೆ, ಆರ್‌ಎಸ್‌ಎಸ್ ಗೆ ಏಕೆ ವಿನಾಯಿತಿ ನೀಡಬೇಕು ಎಂದು ಪ್ರಶ್ನಿಸಿದ್ದಾರೆ.

ಬೃಹತ್ ಗಾತ್ರದ ಸಂಘಟನೆಯು ಅನ್ವಯವಾಗುವ ಕಾನೂನುಗಳ ಅಡಿಯಲ್ಲಿ ಅಧಿಕೃತವಾಗಿ ಕಾನೂನುಬದ್ಧ ಘಟಕವಾಗಿ ಅಥವಾ ವ್ಯಕ್ತಿಗಳ ಸಂಸ್ಥೆ ಯಾಗಿ ನೋಂದಾಯಿಸಿಕೊಳ್ಳದೆ, ಅನಾಮಧೇಯವಾಗಿ ಕಾರ್ಯನಿರ್ವಹಿಸುವುದನ್ನು ಮುಂದುವರಿಸುತ್ತಿರುವ ಹಿಂದಿನ 'ಕಾನೂನು ಆಧಾರಗಳನ್ನು' ವಿವರಿಸಲು ನಿಮ್ಮ ಅಧಿಕೃತ ಪದಾಧಿಕಾರಿಗಳನ್ನು ನಿಯೋಜಿಸುವಂತೆ ನಾವು ಆರ್‌ಎಸ್‌ಎಸ್ ಅನ್ನು ಕೋರುತ್ತೇವೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಇಷ್ಟೊಂದು ಬೃಹತ್ ಗಾತ್ರ, ಪ್ರಭಾವ ಮತ್ತು ವ್ಯಾಪ್ತಿಯನ್ನು ಹೊಂದಿರುವುದರಿಂದಲೇ, ಆರ್‌ಎಸ್‌ಎಸ್ ಪಾರದರ್ಶಕತೆ, ಹೊಣೆಗಾರಿಕೆ ಮತ್ತು ಸಾಂವಿಧಾನಿಕ ಅನುಸರಣೆಯ ಉನ್ನತ

ಪುಟ 2ಕ್ಕೆ


## ಗಿರೀಶ್ ಮಟ್ಟಣ್ಣನವರ್ ವಿರುದ್ಧ ಮಾಸ್ಕ್ ಮ್ಯಾನ್ ಚಿನ್ನಯ್ಯ ದೂರು

**ಬೆಂಗಳೂರು:** ತನಗೆ ಕೊಲೆ ಬೆದರಿಕೆ ಹಾಗೂ ಮಾನಸಿಕ ಒತ್ತಡ ಹಾಕಲಾಗಿದೆ ಎಂದು ಆರೋಪಿಸಿ ಗಿರೀಶ್ ಮಟ್ಟಣ್ಣನವರ್ ವಿರುದ್ಧ ಮಾಸ್ಕ್ ಮ್ಯಾನ್ ಚಿನ್ನಯ್ಯ ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ದೂರು ನೀಡಿದ್ದಾನೆ.

ಧರ್ಮಸ್ಥಳ ಶವ ಹೂತಿಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದ ಮಾಸ್ಕ್ ಮ್ಯಾನ್ ಚಿನ್ನಯ್ಯ ಈಗ ನೀಡಿರುವ ದೂರಿನಲ್ಲಿ, ಗಿರೀಶ್ ಮಟ್ಟಣ್ಣನವರ್ ಬೆದರಿಕೆ ಹಾಕಿ ಹಾಗೂ ಮಾನಸಿಕ ಒತ್ತಡ ಹೇರುವ ರೀತಿಯಲ್ಲಿ ನಡೆದುಕೊಂಡಿದ್ದಾರೆ ಎಂದು ಚಿನ್ನಯ್ಯ ತಿಳಿಸಿದ್ದಾನೆ.

ಈ ಅರ್ಜಿಯ ಹಿಂದೆ ಯಾರು ಇದ್ದಾರೆ? ನಿಮಗೆ

ಪುಟ 2ಕ್ಕೆ





# ನೀರಿನ ಸಮಸ್ಯೆ ನಿವಾರಣೆಗೆ ಜಿಟಿಡಿ ಸೂಚನೆ

ಮೈಸೂರು: ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣವಾಗದಂತೆ ತಡೆಗಟ್ಟಲು ಅಗತ್ಯವಿರುವಷ್ಟು ಕಡೆಗಳಲ್ಲಿ ಟ್ಯಾಂಕರ್ ನೀರು ಪೂರೈಸಬೇಕು. ಹೆಚ್ಚುವರಿ ಟ್ಯಾಂಕರ್ ಬಳಕೆಗೆ ಟೆಂಡರ್ ಕರೆದು ಸಜ್ಜಾಗುವಂತೆ ಶಾಸಕ ಜಿ.ಟಿ.ದೇವೇಗೌಡ ಅಧಿಕಾರಿಗಳಿಗೆ ತಾಕೀತು ಮಾಡಿದರು.

ನಗರಪಾಲಿಕೆ ವಲಯ ಮೂರರ ಕಚೇರಿ ಸಭಾಂಗಣದಲ್ಲಿ ಸೋಮವಾರ ನಗರಪಾಲಿಕೆ, ನಗರಸಭೆ, ಪಟ್ಟಣ ಪಂಚಾಯಿತಿ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದರು. ಹೂಟಗಳ್ಳಿ, ಕೂರ್ಗಳ್ಳಿ, ಬೆಳವಾಡಿ ಭಾಗಗಳಲ್ಲಿ ಬೋರ್‌ವೆಲ್ ಸಂಪೂರ್ಣ ಬತ್ತಿ ಹೋಗಿದೆ. ಕೆಲವುಕಡೆಗಳಲ್ಲಿ ನೀರಿನ ಸಮಸ್ಯೆ ಹೆಚ್ಚಾಗಿರುವ ಬಗ್ಗೆ ಸಾರ್ವಜನಿಕರು ನಿತ್ಯ ಮನೆಗೆ ಬಂದು ದೂರು ನೀಡುತ್ತಿದ್ದಾರೆ. ಕಬಿನಿ, ಕೆಆರ್‌ಎಸ್ ಜಲಾಶಯದಿಂದ ಕೆಲವು ಪ್ರದೇಶಗಳಿಗೆ ನೀರು ಕೊಡುತ್ತಿದ್ದರೂ ಹಲವು ಪ್ರದೇಶಗಳಿಗೆ ಸಮಸ್ಯೆಯಾಗಿದೆ. ತಕ್ಷಣವೇ ಅಗತ್ಯವಿರುವ ನೀರನ್ನು ಸರಬರಾಜು ಮಾಡಲು ಟ್ಯಾಂಕರ್‌ನಿಂದ ಕೊಡಬೇಕು ಎಂದು ಸೂಚಿಸಿದರು.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾರ್ಯಪಾಲಕ ಅಭಿಯಂತರ ಇಕ್ಬಾಲ್ ಆಸಿಫ್ ಮಾತನಾಡಿ, ಹಳೆಯ ಉಂಡುವಾಡಿ ಯೋಜನೆಗೆ ತೊಡಕಾಗಿದ್ದ ಚಿಕ್ಕನಹಳ್ಳಿ ಗ್ರಾಮದ 14 ಎಕರೆ ಜಮೀನಿನಲ್ಲಿ ಏಳು ಎಕರೆ ಜಮೀನು ಇತ್ಯರ್ಥವಾಗಿದೆ. ವಿಜಯನಗರ,ಬೆಳವಾಡಿ,ಕೂರ್ಗಳ್ಳಿ ಬಡಾವಣೆಯ ನೀರಿನ ಸಮಸ್ಯೆ ಇತ್ಯರ್ಥಕ್ಕೆ ಹೆಚ್ಚುವರಿಯಾಗಿ 600 ಎಚ್‌ಪಿ



ಸಾಮರ್ಥ್ಯದ ಮೂರು ಮೋಟಾರ್ ಪಂಪ್‌ಗಳನ್ನು ಅಳವಡಿಸಲು ಈಗಾಗಲೇ ಕಿರ್ಲೋಸ್ಕರ್ ಕಂಪೆನಿಗೆ ಕಳುಹಿಸಲಾಗಿದೆ. ಪುಣೆಯಿಂದ ಪಂಪ್ ಬಂದ ತಕ್ಷಣವೇ ಅಳವಡಿಸಲಾಗುವುದು. ಮೂರು ಮೋಟಾರ್‌ಗಳ ಖರೀದಿಗೆ ಬೇಕಾದ ಮೊತ್ತವನ್ನು ಹೂಟಗಳ್ಳಿ ನಗರಸಭೆ ಭರಿಸಲಿದೆ. ಕುಡಿಯುವ ನೀರಿನ ಸಮಸ್ಯೆ ಇತ್ಯರ್ಥಕ್ಕೆ ವಾಣಿವಿಲಾಸ ನೀರು ಸರಬರಾಜು ಅಧಿಕಾರಿಗಳ ಮೂಲಕ ಅಗತ್ಯವಿರುವ ಎಂಎಲ್‌ಡಿ ನೀರನ್ನು ಪಡೆದ ಸರಿದೂಗಿಸಬಹುದು. ಹಳೆ ಉಂಡುವಾಡಿ ಮುಗಿದ ತಕ್ಷಣವೇ ಲೈನ್ ಬದಲಿಸಿಕೊಳ್ಳಬಹುದಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಹೂಟಗಳ್ಳಿ ನಗರಸಭೆ ಸಹಾಯಕ ಅಭಿಯಂತರ ದಿಲೀಪ್, ಕಡಕೊಳ ಪಪಂ ಮುಖ್ಯಾಧಿಕಾರಿ ಎಚ್.ಆರ್.ದೀಪಾ , ಶ್ರೀರಾಂಪುರ ಪಪಂ ಮುಖ್ಯಾಧಿಕಾರಿ ಎ.ಎಂ.ಶ್ರೀಧರ್ ತಮ್ಮ ಭಾಗದಲ್ಲಿ ಕೈಗೊಂಡಿರುವ ಕ್ರಮಗಳನ್ನು ವಿವರಿಸಿದರು. ಉದ್ಘಾಟನವರೆಗೂ ಕಾಯದೇ ಎಲ್ಲೇ ಬೀದಿ ನೂತನ ಬೀದಿ ದೀಪ ಅಳವಡಿಸಿದ್ದರೂ ಅದನ್ನು ಬಳಸುವಂತೆ ಹೇಳಿದರು. ಕೇಂದ್ರಸರ್ಕಾರ ನೀಡುವ ಅರ್ಬನ್ ಚಾಲೆಂಜ್ ಫಂಡ್(ಯುಸಿಎಫ್) ಯೋಜನೆಯಡಿ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸುವಂತೆಯೂ ತಿಳಿಸಿದರು. ನಗರಪಾಲಿಕೆ ಕಾರ್ಯಪಾಲಕ ಅಭಿಯಂತರ ಶ್ರೀನಿವಾಸ್,ವಲಯ ಮೂರರ ಆಯುಕ್ತ ಸಂದೀಪ್, ಅಭಿವೃದ್ಧಿ ಅಧಿಕಾರಿ ಹೇಗಾನಂದ, ಹೂಟಗಳ್ಳಿ ನಗರಸಭೆ ಪೌರಾಯುಕ್ತ ಬಿ.ಎನ್.ಚಂದ್ರಶೇಖರ್, ಎಇಇ ಮಧು, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳಾದ ಸುಜಯ್.ಎ.ಎಂ.ಶ್ರೀಧರ್, ಎಚ್.ಆರ್.ದೀಪಾ, ಮಹೇಶ್ ಮತ್ತಿತರರು ಇದ್ದರು.

## ಗುತ್ತಿಗೆದಾರರು ಹಿಂದೇಟು

ಇರಾನ್–ಅಮೆರಿಕಾ ಸೇರಿ ವಿಶ್ವದಲ್ಲಿ ಯುದ್ಧ ಸನ್ನಿವೇಶದ ಹಿನ್ನೆಲೆಯಲ್ಲಿ ಡಾಂಬರೀಕರಣದ ಅಗತ್ಯ ವಸ್ತುಗಳ ಪೂರೈಕೆಯಲ್ಲಿ ವಿಳಂಬ ಆಗುತ್ತಿರುವ ಹಿನ್ನೆಲೆಯಲ್ಲಿ ನಗರದಲ್ಲಿ ಗುತ್ತಿಗೆದಾರರು ಡಾಂಬರೀಕರಣಕ್ಕೆ ಮುಂದಾಗದಿರುವ ಬಗ್ಗೆ ಹಾಗೂ ಟೆಂಡರ್ ಪ್ರಕ್ರಿಯೆಯಲ್ಲೂ ಸಹ ಭಾಗವಹಿಸಲು ಗುತ್ತಿಗೆದಾರರು ಭಾಗವಹಿಸದಿರುವ ಬಗ್ಗೆ ಅಧಿಕಾರಿಗಳು ಗಮನಕ್ಕೆ ತಂದರು. ಈ ಹಿನ್ನೆಲೆಯಲ್ಲಿ ಟೆಂಡರ್ ದಾರರ ಮುಖಾಮುಖಿ ಸಭೆ ನಡೆಸಿ ಅವರ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಮಾಡುವಂತೆ ಶಾಸಕ ಜಿ.ಟಿ.ದೇವೇಗೌಡ ಸೂಚಿಸಿದರು.

# ಸಾವಿರ ಗಿಡ ನೆಟ್ಟು ಫಾರೆಸ್ಟ್ ಆಫ್ ಹೋಪ್

ಮೈಸೂರು: ವರ್ಲ್ಡ್ ಮಿಷನ್ ಸೊಸೈಟಿ ಚರ್ಚ್ ಆಫ್ ಗಾಡ್ ವತಿಯಿಂದ ಫಾರೆಸ್ಟ್ ಆಫ್ ಹೋಪ್ ಅಭಿಯಾನದ ಅಂಗವಾಗಿ ನಗರದ ಚಾಮುಂಡಿಹಿಲ್ ವೀವ್ ಪಾರ್ಕ್‌ನಲ್ಲಿ ಸಾವಿರ ಗಿಡ ನೆಡುವ ಕಾರ್ಯಕ್ರಮವನ್ನು ಭಾನುವಾರ ಆಯೋಜಿಸಲಾಗಿತ್ತು.

ಅಂತರರಾಷ್ಟ್ರೀಯ ಜೈವಿಕ ವೈವಿಧ್ಯತೆ ದಿನ ಹಾಗೂ ವಿಶ್ವ ಪರಿಸರ ದಿನ ಅಂಗವಾಗಿ ಮದರ್ ಅರ್ಥ್ ರಿಕವರಿ ಇನಿಶಿಯೇಟಿವ್ ಅಡಿಯಲ್ಲಿ ಈ ಕಾರ್ಯಕ್ರಮ ನಡೆಯಿತು. ಮೈಸೂರು ಮತ್ತು ಬೆಂಗಳೂರು ಭಾಗಗಳಿಂದ ಆಗಮಿಸಿದ್ದ ಸುಮಾರು 500 ಸ್ವಯಂ ಸೇವಕರು ಗಿಡ ನೆಡುವುದರ ಜತೆಗೆ ಉದ್ಯಾನವನದ ಸುತ್ತಮುತ್ತಲಿನ ಪ್ರದೇಶ ಸ್ವಚ್ಛಗೊಳಿಸಿದರು. ಈ ವೇಳೆ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಹಸಿರು ಪರಿಸರ ಹೆಚ್ಚಿಸುವ ಇಂತಹ ಕಾರ್ಯಕ್ರಮಗಳು ಶ್ಲಾಘನೀಯ. ನಗರದ ವಿವಿಧ ಭಾಗಗಳಲ್ಲಿಯೂ ಇದೇ ರೀತಿಯ ಮರ ನೆಡುವ ಅಭಿಯಾನಗಳು ನಡೆಯಬೇಕು ಎಂದು ಆಶಿಸಿದರು.

ಸಭೆಯ ಪ್ರತಿನಿಧಿಯೊಬ್ಬರು ಮಾತನಾಡಿ, ಪರಿಸರದ ಸಮತೋಲನ ನಮ್ಮ ಜೀವನ ಮತ್ತು ಭವಿಷ್ಯಕ್ಕೆ ಅತ್ಯಂತ ಮಹತ್ವದ್ದು. ಭೂಮಿಯನ್ನು ತಾಯಿಯೆಂದು ಪರಿಗಣಿಸುವ ಮನೋಭಾವದೊಂದಿಗೆ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಶುದ್ಧ ಗಾಳಿ ಮತ್ತು ಹಸಿರು ಪರಿಸರದ ನಿರ್ಮಾಣಕ್ಕೆ ಇದು ನಮ್ಮ ಸಣ್ಣ ಕೊಡುಗೆಯಾಗಿದೆ ಎಂದರು.

ಹವಾಮಾನ ವಿಕೋಪಗಳು ಮತ್ತು ಪರಿಸರ ಹಾನಿಯಿಂದ ಪ್ರಭಾವಿತವಾಗಿರುವ ಪರಿಸರ ವ್ಯವಸ್ಥೆಗಳು ಮತ್ತು ಸಮುದಾಯಗಳ ಸ್ಥಿತಿಸ್ಥಾಪಕತ್ವವನ್ನು ಬಲಪಡಿಸುವುದು ಈ ಉಪಕ್ರಮದ ಗುರಿಯಾಗಿದೆ. ಈ ಉಪಕ್ರಮದ



ಭಾಗವಾಗಿ, 'ಫಾರೆಸ್ಟ್ ಆಫ್ ಹೋಪ್ ಅಭಿಯಾನವು ವಿವಿಧ ದೇಶಗಳಲ್ಲಿನ ಸ್ಥಳೀಯ ಹವಾಮಾನಕ್ಕೆ ಅನುಗುಣವಾಗಿ ಪೂರ್ವ ಸಂರಕ್ಷಣಾ ಚಟುವಟಿಕೆಗಳನ್ನು ಉತ್ತೇಜಿಸುತ್ತದೆ. ಇದು ಜೀವವೈವಿಧ್ಯತೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ, ನೈಸರ್ಗಿಕ ವಿಕೋಪಗಳ ಪರಿಣಾಮವನ್ನು ಕಡಿಮೆ ಮಾಡುವ ಕಾಡುಗಳ ಸಾಮರ್ಥ್ಯವನ್ನು ಬಲಪಡಿಸುತ್ತದೆ ಮತ್ತು ಜಾಗತಿಕ ಪರಿಸರ ವ್ಯವಸ್ಥೆಯ ಚೇತರಿಕೆಗೆ ಬೆಂಬಲ ನೀಡುತ್ತದೆ.

ಕಾರ್ಯಕ್ರಮದ ಅಂಗವಾಗಿ ಮದರ್ ಅರ್ಥ್ ರಿಕವರಿ ಇನಿಶಿಯೇಟಿವ್ ಕುರಿತು ಮಾಹಿತಿ ಪ್ರದರ್ಶನವನ್ನೂ ಏರ್ಪಡಿಸಲಾಗಿತ್ತು. ಹವಾಮಾನ ಬದಲಾವಣೆ ಮತ್ತು ಪರಿಸರ ಹಾನಿಯಿಂದ ಪ್ರಭಾವಿತವಾಗಿರುವ ಪರಿಸರ ವ್ಯವಸ್ಥೆಗಳ ಪುನರುಜ್ಜೀವನ, ಜೀವ ವೈವಿಧ್ಯತೆ ಸಂರಕ್ಷಣೆ ಹಾಗೂ ಸಮುದಾಯಗಳ ಪರಿಸರ ಜಾಗೃತಿ ವೃದ್ಧಿ ಈ ಕಾರ್ಯಕ್ರಮದ ಪ್ರಮುಖ ಉದ್ದೇಶ. ಕಾರ್ಯಕ್ರಮದಲ್ಲಿ ಶಾಸಕರಾದ ಜಿ.ಟಿ.ದೇವೇಗೌಡ, ಶ್ರೀವತ್ಸ ಮತ್ತಿತರರಿದ್ದರು.

## ಮೊದಲ ಪುಟದಿಂದ

### ಇಂದಿರಾ ಲಂಕೇಶ್ ನಿಧನ

ಅವರ ನಿಧನದ ನಂತರ ಮತ್ತು ತದನಂತರದ ದಿನಗಳಲ್ಲಿ ಹಿರಿಯ ಪುತ್ರಿ ದಿ.ಗೌರಿ ಲಂಕೇಶ್ ಅವರ ಅಗಲಿಕೆಯ ನಂತರವೂ ಧೃತಿಗೆಡದ ಇಂದಿರಾ ಅವರು, ಕುಟುಂಬದ ಸಾಹಿತ್ಯಿಕ ಮತ್ತು ಪತ್ರಿಕೋದ್ಯಮದ ಪರಂಪರೆಯನ್ನು ಮುನ್ನಡೆಸಿಕೊಂಡು ಬಂದಿದ್ದರು.

### ಬಿಜೆಪಿ ಗ್ಯಾರಂಟಿಗಳ ವಿರೋಧಿ

ತರಲು ಸಾಧ್ಯವಾಗುತ್ತಿಲ್ಲ. ಈ ಯೋಜನೆಗಳು ನಿಜವಾದ ಅರ್ಹರಿಗೆ ಸಿಗಬೇಕು. ಅದು ಅನರ್ಹರ ಪಾಲಾದಾಗ ಅದನ್ನು ತಡೆಗಟ್ಟುವುದು ಚುನಾಯಿತ ಸರ್ಕಾರದ ಕರ್ತವ್ಯವಾಗಿದೆ. ನಮ್ಮ ಜನರು ಕೂಡಾ ಈ ಬಗ್ಗೆ ಯೋಚನೆ ಮಾಡಬೇಕಾಗಿದೆ. ದುರಾಸೆಗೆ ಬಲಿಬಿದ್ದು ಸರ್ಕಾರಕ್ಕೆ ಮೋಸ ಮಾಡಿ ಗ್ಯಾರಂಟಿ ಯೋಜನೆಗಳ ಲಾಭ ತೆಗೆದುಕೊಳ್ಳುವುದು ಕಾನೂನಿನ ಉಲ್ಲಂಘನೆ ಮಾತ್ರವಲ್ಲ, ರಾಜ್ಯದ ಜನತೆಗೆ ಬಗೆವ ದ್ರೋಹವಾಗಿದೆ. ಇಂತಹ ವಿಷಯದಲ್ಲಿ ವಿರೋಧ ಪಕ್ಷಗಳು ರಾಜಕೀಯ ಲಾಭಕ್ಕಾಗಿ ಅಪಪ್ರಚಾರ ಮಾಡಲು ಹೋಗದೆ, ಅರ್ಹರಿಗೆ ಯೋಜನೆಗಳನ್ನು ತಲುಪಿಸಲು ಸರ್ಕಾರಕ್ಕೆ ನೆರವಾಗಬೇಕು ಎಂದೂ ಅವರು ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ.

### ಕಚ್ಚಾತೈಲ ಬೆಲೆ ಇಳಿಕೆ

ಇರಾನ್ ಹಾರ್ಮುಜ್ ಜಲಸಂಧಿ ಮೇಲೆ ನಿರ್ಬಂಧ ವಿಧಿಸಿದ್ದರಿಂದ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿ ಬೆಲೆಗಳಲ್ಲಿ ಬಾರಿ ಏರಿಕೆಯಾಗಿತ್ತು. ಹಾಗೆಯೇ ಎಲ್‌ಪಿಜಿ ಸಿಲಿಂಡರ್ ಬೆಲೆಯಲ್ಲಿಯೂ ದರ ಏರಿಕೆಯಾಗಿತ್ತು. ಕಚ್ಚಾ ತೈಲ ಬೆಲೆ ಏರಿಕೆ ಹಿನ್ನೆಲೆಯಲ್ಲಿ ಇತ್ತೀಚಿಗೆ ಪೆಟ್ರೋಲ್, ಡೀಸೆಲ್ ಬೆಲೆಯನ್ನು ದೊಡ್ಡ ಪ್ರಮಾಣದಲ್ಲಿ ಏರಿಸಿದ್ದ ಮೋದಿ ಸರ್ಕಾರ ಈಗ ಕಚ್ಚಾ ತೈಲ ಬೆಲೆ ಇಳಿಕೆ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸುತ್ತದೆಯೇ ಅಥವಾ ಇಲವೇ ಎಂಬುದನ್ನು ಕಾದು ನೋಡಬೇಕಿದೆ.

### ಎಚ್‌ಡಿಕೆಗೆ ಡಿಕೆ ತಿರುಗೇಟು

ಯಾಕೆ ಸುಮ್ಮನಿದ್ದರು? ಹಾರೋಹಳ್ಳಿ ಕೈಗಾರಿಕಾ ಪ್ರದೇಶ ಮಾಡಿದ್ದು ಯಾರು? ಆಗ ರೈತರನ್ನು ಕಳುಹಿಸಲಿಲ್ಲವೇ? ಇಲ್ಲಿ ರೈತರು ಜಮೀನು ನೀಡಲು ಮುಂದಾಗಿದ್ದಾರೆ. ಆದರೆ ಇವರಿಗೆ ರಾಜಕಾರಣ ಮಾಡಬೇಕು, ಮಾಡುತ್ತಿದ್ದಾರೆ. ನಾನು ಯಾರದೋ ಮಾತಿಗೆ ಉತ್ತರ ನೀಡಲು ಆಗುವುದಿಲ್ಲ ಎಂದು ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಡಿ.ಕೆ.ಶಿವಕುಮಾರ್ ಹರಿಹಾಯ್ದರು.

### ಸಂಪ್‌ಗೆ ಬಿದ್ದು ಮಗು ಸಾವು

ಗಲ್ ಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

# ಪರಿಸರ ನಾಶದಿಂದ ಆಪತ್ತು ಗ್ಯಾರಂಟಿ

## ಎಚ್.ಡಿ.ಕೋಟೆಯಲ್ಲಿ ಸಸಿ ವಿತರಣೆಯೊಂದಿಗೆ ಪರಿಸರ ದಿನಾಚರಣೆ

ಎಚ್.ಡಿ.ಕೋಟೆ: ತಾಲೂಕಿನ ಉದ್ಬೂರು ಗ್ರಾಮದ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆಯಲ್ಲಿ ಕವನ ಚಾರಿಟಬಲ್ ಟ್ರಸ್ಟ್ ಹಾಗೂ ಕರ್ನಾಟಕ ಆದಿವಾಸಿಗಳ ನ್ಯಾಯಕ್ಕಾಗಿ ಆಂದೋಲನ ಸಂಸ್ಥೆಗಳ ಜಂಟಿ ಸಹಯೋಗದೊಂದಿಗೆ ವಿಶ್ವ ಪರಿಸರ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಪರಿಸರ ಸಂರಕ್ಷಣೆಯ ಜಾಗೃತಿ ಮೂಡಿಸುವ ಈ ವಿಶೇಷ ಸಂದರ್ಭದಲ್ಲಿ ಕಾರ್ಯಕ್ರಮಕ್ಕೆ ಆಗಮಿಸಿದ್ದ ಸಾರ್ವಜನಿಕರಿಗೆ ತಲಾ ಎರಡು ಗಿಡಗಳನ್ನು ವಿತರಿಸುವ ಮೂಲಕ ಪರಿಸರ ಪ್ರೇಮವನ್ನು ಸಾರಲಾಯಿತು.

### ಪರಿಸರ ಸಮತೋಲನ ಕಾಪಾಡುವುದು ನಮ್ಮ ಹೊಣೆ

**ಗಿರಿಜನ ಮುಖಂಡ ಪುಟ್ಟ ಬಸವಣ್ಣ**

ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಗಿರಿಜನರ ಮುಖಂಡ ಪುಟ್ಟ ಬಸವಣ್ಣ ಅವರು, ಪ್ರಕೃತಿಯ ಒಡಲಲ್ಲೇ ನಿರಂತರವಾಗಿ ಜೀವಿಸುವ ಆದಿವಾಸಿಗಳಾದ ನಮಗೆ ಪ್ರತ್ಯೇಕವಾಗಿ ಯಾವುದೇ ಪರಿಸರ ದಿನಾಚರಣೆಯ ಅಗತ್ಯವಿಲ್ಲ. ಆದರೆ, ಇತ್ತೀಚಿನ ದಿನಗಳಲ್ಲಿ ಜಾಗತಿಕ ಹವಾಮಾನ ವೈಪರಿತ್ಯ ಹಾಗೂ ಅರಣ್ಯ ನಾಶದ ಕಾರಣದಿಂದಾಗಿ ಸಕಾಲಕ್ಕೆ ಮಳೆಯಾಗದೆ, ಬೆಳೆಗಳೂ ಸಿಗದೆ ನಮ್ಮ ದೈನಂದಿನ ಜೀವನ ಅತ್ಯಂತ ದುಸ್ತರವಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು. ಪ್ರಸ್ತುತ ದಿನಗಳಲ್ಲಿ ಆಮ್ಲಜನಕದ ಕೊರತೆಯಿಂದಾಗಿ ಕಾಡಿನ ಜನರೂ ಸಹ ಗಂಭೀರ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆದ್ದರಿಂದ ನಾವೆಲ್ಲರೂ ಕೇವಲ ಪರಿಸರ ರಕ್ಷಣೆ ಮಾಡುವುದಷ್ಟೇ ಅಲ್ಲದೆ, ಪ್ರಕೃತಿಯ ಸಮತೋಲನವನ್ನು ಕಾಪಾಡಿಕೊಳ್ಳಬೇಕಾಗಿದೆ. ಮರ ಗಿಡಗಳನ್ನು ಬೆಳೆಸುವುದರಿಂದ ಕಾಡು ಪ್ರಾಣಿಗಳಿಗೆ ಹಣ್ಣು ಹಾಗೂ ಆಹಾರಗಳು ಸುಲಭವಾಗಿ ದೊರೆಯುತ್ತವೆ. ಇದರೊಂದಿಗೆ ನಮ್ಮ ಮಕ್ಕಳಲ್ಲಿ ಬಾಲ್ಯದಿಂದಲೇ ಪರಿಸರ ಕಾಳಜಿಯನ್ನು ಮೂಡಿಸಬೇಕು ಹಾಗೂ ಅವರಿಗೆ ಉತ್ತಮ ಶಿಕ್ಷಣ ನೀಡಿ ವಿದ್ಯಾವಂತರನ್ನಾಗಿ ಮಾಡಬೇಕು ಎಂದು ಹಾಡಿಯ ಜನತೆಯಲ್ಲಿ ಮನವಿ ಮಾಡಿದರು. ಈ ಸಮಾರಂಭದಲ್ಲಿ ಶೈಲೇಂದ್ರ, ಅಯ್ಯಪ್ಪ, ರಾಜಣ್ಣ, ನಾಗರಾಜು, ಗೌರಮ್ಮ, ಕೃಷ್ಣಯ್ಯ ಸೇರಿದಂತೆ ಗ್ರಾಮದ ಪ್ರಮುಖರು, ಶಾಲಾ ಸಿಬ್ಬಂದಿ ಹಾಗೂ ಹಾಡಿಯ ನೂರಾರು ಸಾರ್ವಜನಿಕರು ಉಪಸ್ಥಿತರಿದ್ದರು.



### ಪ್ಲಾಸ್ಟಿಕ್ ಮುಕ್ತ ಬದುಕಿನಿಂದ ಮುಂದಿನ ಪೀಳಿಗೆಯ ರಕ್ಷಣೆ

ಗ್ರಾಮ ಆಡಳಿತಾಧಿಕಾರಿ ನಾಗರಾಜ ಮಾತನಾಡಿ, ಪರಿಸರ ಎನ್ನುವುದು ಕೇವಲ ಮಾನವನಿಗಷ್ಟೇ ಸೀಮಿತವಾದ ಜಾಗವಲ್ಲ, ಈ ಇಡೀ ಭೂಮಿಯೇ ಒಂದು ಸುಂದರವಾದ ಪರಿಸರ ವ್ಯವಸ್ಥೆಯಾಗಿದೆ ಎಂಬುದನ್ನು ಪ್ರತಿಯೊಬ್ಬರಿಗೂ ತಿಳಿಸಿಕೊಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು. ಮುಂದಿನ ಪೀಳಿಗೆಗೆ ಸುರಕ್ಷಿತವಾದ ಭೂಮಿಯನ್ನು ಹಸ್ತಾಂತರಿಸಬೇಕಾದರೆ ನಾವು ಇಂದಿನಿಂದಲೇ ಪ್ಲಾಸ್ಟಿಕ್ ಮುಕ್ತ ಜೀವನ ನಡೆಸುವುದನ್ನು ಕಲಿಯಬೇಕು. ಜಾಗತಿಕವಾಗಿ ಪರಿಸರವನ್ನು ಉಳಿಸಲು ನಮ್ಮ ಮನೆಯ ಹಬ್ಬ ಹರಿದಿನಗಳು, ಹುಟ್ಟುಹಬ್ಬಗಳು ಹಾಗೂ ಇನ್ನಿತರ ವಿಶೇಷ ದಿನಗಳ ಸಂದರ್ಭದಲ್ಲಿ ನೆನಪಿನ ಬುತ್ತಿಯಾಗಿ ಗಿಡಮರಗಳನ್ನು ನೆಟ್ಟು ಪೋಷಿಸುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

### ಮಳೆ ಕೈಕೊಡಲು ಅರಣ್ಯ ನಾಶವೇ ಪ್ರಮುಖ ಕಾರಣ

ವಸತಿ ಶಾಲೆಯ ವಾರ್ಡನ್ ಷಣ್ಮುಖ ಆರಾಧ್ಯ ಮಾತನಾಡಿ, ಈ ಹಿಂದೆ ನಮ್ಮ ಎಚ್.ಡಿ.ಕೋಟೆ ತಾಲೂಕಿನಲ್ಲಿ ಭಾರಿ ಮಳೆಯಾಗಿ ಜನರು ಹೊರಗೆ ಬರಲಾರದ ಪರಿಸ್ಥಿತಿ ಇರುತ್ತಿತ್ತು. ಆದರೆ ಪ್ರಸ್ತುತ ದಿನಗಳಲ್ಲಿ ನಿರಂತರ ಅರಣ್ಯ ನಾಶದ ದುಷ್ಪರಿಣಾಮದಿಂದಾಗಿ ಮಳೆ ತೀವ್ರವಾಗಿ ಕೈಕೊಟ್ಟಿದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರಲ್ಲಿ ಅರಣ್ಯ ನಾಶದ ಭೀಕರತೆ ಹಾಗೂ ಪರಿಸರದ ಬಗ್ಗೆ ವ್ಯಾಪಕ ಅರಿವು ಮೂಡಿಸುವುದು ಅತ್ಯಂತ ತುರ್ತು ಕರ್ತವ್ಯವಾಗಿದೆ. ನಾವೆಲ್ಲರೂ ನಮ್ಮ ಮನೆಗಳ ಕೈತೋಟಗಳಲ್ಲಿ, ಹೊಲ ಹಾಗೂ ಗದ್ದೆಗಳ ಬದುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮರಗಳನ್ನು ನೆಟ್ಟು ಪೋಷಿಸುವ ಮೂಲಕ ಪರಿಸರ ರಕ್ಷಣೆಯ ಮಹತ್ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದು ತಿಳಿಸಿದರು.

## ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕಾರ್ಯಪಾಲಕ ಅಭಿಯಂತರರುರವರ ಕಛೇರಿ, ವಿದ್ಯುತ್ ವಿಭಾಗ, ವಾವಿನೀಸ ಆವರಣ,
ಕೆ.ಆರ್.ಎಸ್ ಮುಖ್ಯ ರಸ್ತೆ, ಯಾದವಗಿರಿ, ಮೈಸೂರು-570020

ಟೆಂ.ಪ್ರ.ಸಂ.ಮೈನಪಾ/ಕಾ.ಅ(ವಿ)/ಟಿಎನ್–05/59/2026–27 ದಿನಾಂಕ: 11.06.2026

### ಟೆಂಡರ್ ಪ್ರಕಟಣೆ ಸಂಖ್ಯೆ–05
### ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಅನುದಾನಗಳಲ್ಲಿ ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ

| ಕ್ರ ಸಂ | ವಿವರ | ಕಾಮಗಾರಿಗಳ ಸಂಖ್ಯೆ | ಟೆಂಡರ್ ಮೊತ್ತ (ರೂ. ಲಕ್ಷಗಳಲ್ಲಿ) | ಸಂಜೆ 5.00 ಗಂಟೆ ನಂತರ | ಸಂಜೆ 5.00 ಗಂಟೆ ಒಳಗೆ | ಸಂಜೆ 5.30 ಗಂಟೆ ನಂತರ |
|---|---|---|---|---|---|---|
| | | | | ಕೆಪಿಪಿ ಪೋರ್ಟಲ್ ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ | ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ | ತಾಂತ್ರಿಕ/ಆರ್ಥಿಕ ಬಿಡ್ ತೆರೆಯುವ ದಿನಾಂಕ |
| 1 | Tender Works (KW-1) | 02 | 35.25 | 11.06.2026 | 26.06.2026 | 29.06.2026 |
| 2 | Tender Works (KW-1) | 02 | 12.725 | | 19.06.2026 | 20.06.2026 |
| 3 | Re-Tender Works (KW-1) | 01 | 4.68 | | | |

**ವಿಶೇಷ ಸೂಚನೆ:** ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ನಲ್ಲಿ ಅಥವಾ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು (ವಿ)
ಮೈಸೂರು ಮಹಾನಗರ ಪಾಲಿಕೆ, ಮೈಸೂರು.

ವಾಸಾಸಂಇ/ಮೈಸೂರು/329/ಶಿರಡಿ ಸಾಯಿ/2026–27

## ಮೊದಲ ಪುಟದಿಂದ

### ಆರ್‌ಎಸ್‌ಎಸ್ ನೋಂದಣಿ ಏಕಿಲ್ಲ?

ಮಾನದಂಡಗಳನ್ನು ಕಾಯ್ದುಕೊಳ್ಳುವುದು ಅತ್ಯಗತ್ಯವಾಗಿದೆ ಎಂದು ಅವರು ಪತ್ರದಲ್ಲಿ ಉಲ್ಲೇಖ ಮಾಡಿದ್ದಾರೆ.

ಆರ್‌ಎಸ್‌ಎಸ್‌ನ ಸಾರ್ವಜನಿಕ ಒಗ್ಗೂಡುವಿಕೆ ಕೂಡ ಅಷ್ಟೇ ವಿಸ್ತಾರವಾಗಿದೆ. ನಿಮ್ಮ ವರದಿಯ ಪ್ರಕಾರ, ಸಂಘಟನೆಯು 2,194 ಸಮಾಜೋತ್ಸವಗಳನ್ನು ನಡೆಸಿದ್ದು, ಇದರಲ್ಲಿ 19,61,158 ಮಂದಿ ಭಾಗವಹಿಸಿದ್ದಾರೆ. ರಾಜ್ಯಾದ್ಯಂತ ನೀವು 562 ಪಥಸಂಚಲನಗಳನ್ನು ಆಯೋಜಿಸಿದ್ದೀರಿ, ಇವು ಸಾಮಾನ್ಯವಾಗಿ 2.5 ರಿಂದ 3 ಕಿ.ಮೀ.ವರೆಗೆ ನಡೆದಿದೆ. 2,21,963 ಸಮವಸ್ತ್ರಧಾರಿ ಸ್ವಯಂಸೇವಕರು ಪಾಲ್ಗೊಂಡಿದ್ದರು ಎಂದು ಹೇಳಿಕೊಂಡಿದ್ದೀರಿ.

ಇವೆಲ್ಲವನ್ನೂ ಒಟ್ಟಾಗಿ ನೋಡಿದಾಗ, ಕರ್ನಾಟಕದಾದ್ಯಂತ ದೈನಂದಿನ, ಸಾಪ್ತಾಹಿಕ ಮತ್ತು ಮಾಸಿಕ ಸಂಪರ್ಕಗಳು, ಬೃಹತ್ ಸಾರ್ವಜನಿಕ ಕಾರ್ಯಕ್ರಮಗಳು ಹಾಗೂ ಸಮವಸ್ತ್ರಧಾರಿ ಪಥಸಂಚಲನಗಳ ಮೂಲಕ ಕಾರ್ಯನಿರ್ವಹಿಸುತ್ತಿರುವ, ಶಿಸ್ತುಬದ್ಧ ಹಾಗೂ ಆಳವಾಗಿ ಬೇರೂರಿರುವ ಬೃಹತ್ ನೆಟ್‌ವರ್ಕ್ ಇದಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಇಷ್ಟೊಂದು ವಿಸ್ತಾರವಾದ ಸಾಂಸ್ಥಿಕ ಅಸ್ತಿತ್ವವನ್ನು ಹೊಂದಿರುವಾಗ, ವಿಶೇಷವಾಗಿ ನಿಯಮಿತವಾದ ಸಾರ್ವಜನಿಕ ಒಗ್ಗೂಡುವಿಕೆ, ಸಮವಸ್ತ್ರಧಾರಿ ಪಥಸಂಚಲನಗಳು ಮತ್ತು ದೊಡ್ಡ–ಮಟ್ಟದ ಸಾಮಾಜಿಕ ಕಾರ್ಯಕ್ರಮಗಳನ್ನು ಒಳಗೊಂಡಿರುವಾಗ, ಇದನ್ನು ಕೇವಲ ಒಂದು ಖಾಸಗಿ ಅಥವಾ ಅನೌಪಚಾರಿಕ ವ್ಯವಸ್ಥೆ ಎಂದು ಪರಿಗಣಿಸಲು ಸಾಧ್ಯವಿಲ್ಲ. ಇದು ಸಂಘಟನೆ ಕಾನೂನುಬದ್ಧ ಸ್ಥಾನಮಾನ, ಹೊಣೆಗಾರಿಕೆ, ಆರ್ಥಿಕ ಪಾರದರ್ಶಕತೆ, ಸಾರ್ವಜನಿಕ ಸುವ್ಯವಸ್ಥೆ, ಅನುಮತಿಗಳು, ಹಣಕಾಸಿನ ಮೂಲಗಳು ಮತ್ತು ಭಾರತದ ಸಂವಿಧಾನ ಹಾಗೂ ಕಾನೂನುಗಳ ಪಾಲನೆಯ ಕುರಿತು ನ್ಯಾಯಸಮ್ಮತವಾದ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ ಎಂದಿದ್ದಾರೆ.

### ಶಾಸಕ ಇಕ್ಬಾಲ್ ಹುಸೇನ್‌ಗೆ ಎದೆನೋವು:

ಇರುವುದನ್ನು ಪತ್ತೆ ಮಾಡಲಾಗಿದೆ. ಅಗತ್ಯ ಚಿಕಿತ್ಸೆಯನ್ನು ನೀಡಲಾಗುತ್ತಿದೆ ಎಂದು ತಿಳಿಸಿ ದ್ದಾರೆ. ಮುಂದಿನ ಹಂತದಲ್ಲಿ ಬೈಪಾಸ್ ಶಸ್ತ್ರಚಿಕಿತ್ಸೆ ಮಾಡಲಾಗುವುದು. ಶಸ್ತ್ರಚಿಕಿತ್ಸೆ ಬಳಿಕ ಸುಮಾರು 10 ದಿನಗಳ ಕಾಲ ಆಸ್ಪತ್ರೆಯಲ್ಲಿ ವಿಶ್ರಾಂತಿ ಪಡೆಯಲಿದ್ದಾರೆ ಎಂದು ವೈದ್ಯರು ಮಾಹಿತಿ ನೀಡಿದ್ದಾರೆ. ಸದ್ಯ ಶಾಸಕರ ಆರೋಗ್ಯ ಸ್ಥಿರವಾಗಿದೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಆಸ್ಪತ್ರೆಗೆ ಭೇಟಿ ನೀಡಿ ಶಾಸಕರ ಆರೋಗ್ಯ ವಿಚಾರಿಸಿದರು. ಮುಖ್ಯಮಂತ್ರಿಯವರೊಂದಿಗೆ ಮಾಜಿ ಸ್ಪೀಕರ್ ರಮೇಶ್ ಕುಮಾರ್ ಕೂಡ ಆಸ್ಪತ್ರೆಗೆ ಆಗಮಿಸಿದ್ದರು. ಶಾಸಕ ಇಕ್ಬಾಲ್ ಅವರಿಗೆ ಎದೆ ನೋವು ಕಾಣಿಸಿಕೊಂಡಿದ್ದು, ಆಸ್ಪತ್ರೆ ಸೇರಿದ್ದಾರೆ. ವೈದ್ಯರು ಪರಿಶೀಲನೆ ಮಾಡಿದ್ದಾರೆ. ಅವರು ಆರೋಗ್ಯವಾಗಿದ್ದಾರೆ. ಯಾರೂ ಗಾಬರಿಯಾಗುವ ಅವಶ್ಯಕತೆ ಇಲ್ಲ. ಸಂಪೂರ್ಣ ಪರೀಕ್ಷೆಗೆ ನಾವು ವೈದ್ಯರೊಂದಿಗೆ ಚರ್ಚೆ ಮಾಡಿದ್ದೇವೆ. ಎಡಗೈ ಸೆಳೆತ ಬಂದ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆಯಾಗಿ ಆಸ್ಪತ್ರೆ ಸೇರಿದ್ದಾರೆ ಎಂದು ಡಿ.ಕೆ.ಶಿವಕುಮಾರ್ ಮಾಹಿತಿ ನೀಡಿದರು.

### ಗಿರೀಶ್ ಮಟ್ಟಣ್ಣನವರ್ ವಿರುದ್ಧ ದೂರು

ಯಾರು ಸಹಾಯ ಮಾಡುತ್ತಿದ್ದಾರೆ? ಈ ಕೆಲಸವನ್ನು ಯಾರ ಪ್ರೇರಣೆಯಿಂದ ಮಾಡುತ್ತಿದ್ದೀರಿ? ಎಂಬ ಪ್ರಶ್ನೆಗಳನ್ನು ಪದೇ ಪದೇ ಕೇಳಲಾಗಿದೆ ಎಂದು ಉಲ್ಲೇಖಿಸಿದ್ದಾನೆ. ಅಲ್ಲದೆ ತನ್ನ ಮೊಬೈಲ್ ನಂಬರ್ ಕೇಳಿ ಮಾತನಾಡಲು ಒತ್ತಾಯ ಮಾಡುತ್ತಿದ್ದಾರೆ. ಕುಟುಂಬದವರ ಬಗ್ಗೆ ಮಾಹಿತಿ ಕಲೆಹಾಕಲು ಪ್ರಯತ್ನಿಸಲಾಗಿದೆ ಎಂದು ಆರೋಪಿಸಿದ್ದಾನೆ.

### ಅನ್ಯರಿಗೆ ಗ್ಯಾರಂಟಿ ಕೊಡಲ್ಲ

ತಲುಪುವಂತೆ ನೋಡಿಕೊಳ್ಳಲು ಸರ್ಕಾರ ಮುಂದಾಗಿದೆ. ಆರಂಭದಲ್ಲಿ ಕೆಲವು ಫಲಾನುಭವಿಗಳು ಬೇರೆಯವರ ದೂರವಾಣಿ ಸಂಖ್ಯೆ ಹಾಗೂ ಮಾಹಿತಿ ನೀಡಿದ್ದಾರೆ. ಬೇರೆಯವರ ಖಾತೆಗೆ ಹಣ ಹೋಗುತ್ತಿರುವ ಬಗ್ಗೆ ನಮಗೆ ಮಾಹಿತಿ ಇದೆ. ಫಲಾನುಭವಿಗಳ ಖಾತೆಗೆ ಹಣ ಹೋಗುವಂತೆ ಮಾಡುವುದು ಸರ್ಕಾರದ ಉದ್ದೇಶ ಎಂದು ತಮ್ಮ ಕಾರ್ಯವನ್ನು ಸಮರ್ಥಿಸಿಕೊಂಡಿದ್ದಾರೆ.

ಆದಿತ್ಯ ನಂಜರಾಜ್ ಹೇಳಿಕೆ | ಜಾನಪದ ಲೋಕದಲ್ಲಿ ತಿಂಗಳ ಅತಿಥಿ ಕಾರ್ಯಕ್ರಮ | ಜನಪದ ಗಾಯಕಿ ಚಿಕ್ಕತಾಯಮ್ಮ ತಿಂಗಳ ಅತಿಥಿ

# ಕಲಾವಿದರನ್ನು ಪ್ರೋತ್ಸಾಹಿಸುವುದೇ ಜಾನಪದ ಪರಿಷತ್ತಿನ ಮೂಲ ಉದ್ದೇಶ


ರಾಮನಗರ: ಹಿರಿಯ ಕಲಾವಿದರನ್ನು ಗುರುತಿಸಿ ಗೌರವಿಸಿ, ಪ್ರೋತ್ಸಾಹಿಸುವುದೇ ಜಾನಪದ ಪರಿಷತ್ತಿನ ಮೂಲ ಉದ್ದೇಶವಾಗಿದೆ ಎಂದು ಕರ್ನಾಟಕ ಜಾನಪದ ಪರಿಷತ್ತಿನ ಮ್ಯಾನೇಜಿಂಗ್ ಟ್ರಸ್ಟಿ ಆದಿತ್ಯ ನಂಜರಾಜ್ ತಿಳಿಸಿದರು.

ಡಾ. ಎಚ್.ಎಲ್. ನಾಗೇಗೌಡರ ನೆನಪಿನಲ್ಲಿ ಇಲ್ಲಿಗೆ ಪಸಮೀಪದ ಜಾನಪದ ಲೋಕದಲ್ಲಿ ಲೋಕಸಿರಿ ತಿಂಗಳ ಅತಿಥಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಪ್ರತಿ ತಿಂಗಳು ಜಾನಪದ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಕಲಾವಿದರೊಬ್ಬರನ್ನು ಗುರುತಿಸಿ ಲೋಕಸಿರಿ ಕಾರ್ಯಕ್ರಮದಲ್ಲಿ ಗೌರವಿಸಲಾಗುತ್ತಿದೆ ಎಂದರು.

### ಜನಪದ ಬೆಳೆದಷ್ಟು ನಮ್ಮ ಸಂಸ್ಕೃತಿ ಬೆಳೆಯುತ್ತದೆ – ರಂಗೇಗೌಡ

ವಿಭೂತಿಕೆರೆ ಗ್ರಾಮಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಗಳಾದ ರಂಗೇಗೌಡ ಅವರು ಮಾತನಾಡಿ, ಜಾನಪದ ಸಾಹಿತ್ಯ, ಜಾನಪದ ಸಂಗೀತ ಎಲ್ಲಾ ಕಲೆಗಳ ತಾಯಿಬೇರು ಜನಪದ ಬೆಳೆದಷ್ಟು ನಮ್ಮ ಸಂಸ್ಕೃತಿ ಬೆಳೆಯುತ್ತದೆ. ಈ ಸಂಸ್ಕೃತಿಯನ್ನು ಮುಂದಿನ ತಲೆಮಾರಿಗೆ ತಲುಪಿಸುವ ಕೆಲಸವನ್ನು ಜಾನಪದ ಲೋಕ ತುಂಬಾ ಅಚ್ಚುಕಟ್ಟಾಗಿ ನಿರ್ವಹಿಸುತ್ತಾ ಬಂದಿದೆ ಎಂದರು.

ಜಾನಪದ ಲೋಕಕ್ಕೆ ಕುಟುಂಬ ಸಮೇತರಾಗಿ ಬಂದು ಪಾಲ್ಗೊಂಡು ಇಲ್ಲಿನ ಜನಪದ ಸಂಗ್ರಹ, ಸಂಸ್ಕೃತಿ, ಕಲೆ, ಕಲಾವಿದರನ್ನು ಪ್ರೋತ್ಸಾಹಿಸಬೇಕು ಎಂದು ಅವರು ಸಾರ್ವಜನಿಕರಿಗೆ ಕರೆ ನೀಡಿದರು.



### ಚಿಕ್ಕತಾಯಮ್ಮ ಅವರ ಗಾಯನಕ್ಕೆ ಮನಸೋತ ಸಭಿಕರು

ಕಾರ್ಯಕ್ರಮದಲ್ಲಿ ಚಿಕ್ಕತಾಯಮ್ಮನವರು ಮತ್ತು ತಂಡ ಹಾಡಿದ ಬಿಳಿಗಿರಿರಂಗಯ್ಯನ ಕಥನಕಾವ್ಯದ ಸಾಲುಗಳನ್ನು ಯಾವುದೇ ವಾದ್ಯಗಳ ಹಿನ್ನಲೆಯಿಲ್ಲದೇ ಹಿಮ್ಮೇಳದ ಸೊಲ್ಲಿನೊಂದಿಗೆ ಸೊಗಸಾಗಿ ಹಾಡಿದರು, ಅವರು ಚಾಮರಾಜನಗರ ತಾಲ್ಲೂಕಿನ ಸಿದ್ಧಯ್ಯಪುರ ಗ್ರಾಮದ ಜಾನಪದ ಹಾಡುಗಾರ್ತಿ. ರಾಗಿ ಬೀಸುವ ಪದ, ರಾಶಿಪದ, ಲಾಲಿ, ದೂರಿಪದ, ಸೋಬಾನೆಯ ಶಾಸ್ತ್ರದ ಪದಗಳನ್ನು ಜೊತೆಗೆ ಬಿಳಿಗಿರಿರಂಗಯ್ಯ, ಮುಡುಕುತೊರೆ ಮಲ್ಲಯ್ಯ, ಮಾದೇಶ್ವರ ಕುರಿತ ಹಾಡುಗಳನ್ನು ತಮ್ಮದೇ ಆದ ಧಾಟಿಯಲ್ಲಿ ಹಾಡಿ ಕಾರ್ಯಕ್ರಮಕ್ಕೆ ಮೆರಗು ತಂದರು.

ಕಪ್ಪಡಿ, ಚಿಕ್ಕಲ್ಲೂರು, ಜಾನಪದ ಲೋಕ, ಚಾಮರಾಜನಗರ, ನಂಜನಗೂಡು, ಮಂಡ್ಯ ಜಿಲ್ಲೆಗಳಲ್ಲಿ ಕನ್ನಡ ರಾಜ್ಯೋತ್ಸವ, ಗಡಿನಾಡ ಉತ್ಸವ, ಮೊದಲಾದ ಕನ್ನಡದ ಹಬ್ಬಗಳಲ್ಲಿ ಅಲ್ಲದೇ ಊರಿನ ಹಬ್ಬ-ಹರಿದಿನ, ಜಾತ್ರೆ–ಉತ್ಸವಗಳಲ್ಲಿ ಹಾಡಿರುವ ಗ್ರಾಮೀಣ ಸೊಗಡಿನ ಪ್ರತಿಭೆಯಾಗಿರುವ ಚಿಕ್ಕತಾಯಮ್ಮ ಅವರ ಪ್ರತಿಭೆ ಗುರುತಿಸಿ, ಸ್ಥಳೀಯ ಸಂಘ–ಸಂಸ್ಥೆಗಳು ಕರೆದು ಸನ್ಮಾನಿಸಿವೆ. ಅಪರೂಪದ ಕಂಠಸಿರಿಯ ಹಾಡುಗಾರ್ತಿಯ ಬದುಕು–ಬವಣೆ, ಹಾಡು–ಪಾಡು ಎಲ್ಲವನ್ನು ಕೇಳಿ, ಹಿರಿಯ ಕಲಾವಿದರನ್ನು ಕರ್ನಾಟಕ ಜಾನಪದ ಪರಿಷತ್ತು, ಜಾನಪದ ಲೋಕಕ್ಕೆ ಆಹ್ವಾನಿಸಿ, ಲೋಕಸಿರಿ ತಿಂಗಳ ಅತಿಥಿ–117ರ ಕಾರ್ಯಕ್ರಮದಲ್ಲಿ ಗೌರವಿಸಲಾಯಿತು.

ಜಾನಪದ ಲೋಕದ ಕಾರ್ಯನಿರ್ವಹಣಾಧಿಕಾರಿ ಸರಸವಾಣಿ ಸ್ವಾಗತಿಸಿದರು. ಮ್ಯೂಸಿಯಂ ಕ್ಯೂರೇಟರ್ ಡಾ. ರವಿ ಯು.ಎಂ, ಕಲಾವಿದರೊಂದಿಗೆ ಸಂವಾದ ನಡೆಸಿಕೊಟ್ಟರು. ವಿದ್ಯಾರ್ಥಿ ರಾಜಶೇಖರ್ ನಿರೂಪಿಸಿದರು. ಸಂಯೋಜಕ ಡಾ. ಸಂದೀಪ್ ಕೆ. ಎಸ್, ಲೋಕದ ಸಿಬ್ಬಂದಿಗಳು, ಡಿಪ್ಲೊಮಾ ವಿದ್ಯಾರ್ಥಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

# ಬಸವರಾಜುಗೆ ಎಂಎಲ್‌ಸಿ ಸ್ಥಾನಕ್ಕೆ ಆಗ್ರಹಿಸಿ ಪ್ರತಿಭಟನೆ



ಮೈಸೂರು: ಮೈಸೂರು ಭಾಗದ ನಾಯಕ ಸಮುದಾಯಕ್ಕೆ ಈವರೆಗೂ ಒಂದು ಸಹ ವಿಧಾನ ಪರಿಷತ್ ಸದಸ್ಯ ಸ್ಥಾನ ನೀಡಲ್ಲಿದಿರುವ ಹಿನ್ನೆಲೆಯಲ್ಲಿ ಈ ಬಾರಿಯಾದರೂ ಎಸ್.ಸಿ.ಬಸವರಾಜು ಅವರಿಗೆ ಮುಂಬರುವ ವಿಧಾನ ಪರಿಷತ್‌ನಲ್ಲಿ ಅವಕಾಶ ನೀಡಬೇಕೆಂದು ಆಗ್ರಹಿಸಿ ಮೈಸೂರಿನಲ್ಲಿ ನಾಯಕ ಸಂಘಟನೆಗಳು ಬೃಹತ್ ಪ್ರತಿಭಟನೆ ನಡೆಸಿದರು.

ಮೈಸೂರು ಪ್ರಾಂತ್ಯ ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟ ನಗರದ ನಂಜರಾಜ ಬಹದ್ದೂರ್ ಛತ್ರದಿಂದ ಕಾಂಗ್ರೆಸ್ ಕಚೇರಿವರೆಗೆ ಮೆರವಣಿಗೆ ನಡೆಸಿದ ನೂರಾರು ಮಂದಿ ಕೈಯಲ್ಲಿ ಎಸ್.ಸಿ.ಬಸವರಾಜು ಅವರ ಭಾವಚಿತ್ರ ಹಿಡಿದು, ಎಂಎಲ್‌ಸಿ ಸ್ಥಾನ ನೀಡುವಂತೆ ಘೋಷಣೆಗಳನ್ನು ಕೂಗಿದರು. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಹಾಗೂ ನಗರಾಧ್ಯಕ್ಷ ಆರ್.ಮೂರ್ತಿ ಮೂಲಕ ಕೆಪಿಸಿಸಿ ಅಧ್ಯಕ್ಷ, ಮುಖ್ಯಮಂತ್ರಿ ಹಾಗೂ ಪಕ್ಷದ ವರಿಷ್ಠರಿಗೆ ಹಕ್ಕೊತ್ತಾಯದ ಮನವಿ ಸಲ್ಲಿಸಿದರು. ಕರ್ನಾಟಕ ನಾಯಕರ ಯುವ ಸೇನೆ ರಾಜ್ಯಾಧ್ಯಕ್ಷ ದೇವರಾಜ್ ಟಿ.ಕಾಟೂರು ಮಾತನಾಡಿ, ನಾಯಕ ಸಮಾಜದ ಮೈಸೂರು ಭಾಗದ ಹಿರಿಯ ಮುಖಂಡ ಹಾಗೂ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್.ಸಿ.ಬಸವರಾಜುಗೆ ವಿಧಾನ ಪರಿಷತ್ ಸ್ಥಾನ ನೀಡಬೇಕು.40 ವರ್ಷಗಳಿಂದ ಪಕ್ಷ ಸಂಘಟನೆ ಮಾಡುತ್ತಾ ಸಮುದಾಯವನ್ನು ಕಾಂಗ್ರೆಸ್ ಪರವಾಗಿರುವಂತೆ ನೋಡಿಕೊಂಡಿದ್ದಾರೆ. ಸಮುದಾಯದ ಮೀಸಲಾತಿಯ 15 ಕ್ಷೇತ್ರಗಳ ಪೈಕಿ 14ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲುವಿಗೆ ಶ್ರಮಿಸಿದ್ದು, ಅವರ ಸೇವೆ ಸ್ಥಾನ ಕಲ್ಪಿಸಬೇಕೆಂದರು.

ಮಹಾನಗರಪಾಲಿಕೆ ಲೋಕೇಶ್ ಪಿಯಾ ಮಾತನಾಡಿ, ಬಸವರಾಜು ಅವರು ಜಿಪಂ ಅಧ್ಯಕ್ಷ, ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ಸಾಕಷ್ಟು ಸೇವೆ ಮಾಡಿದ್ದಾರೆ. ಮೈಸೂರು, ಚಾಮರಾಜಗನಗರ ಭಾಗದಲ್ಲಿ ಸಮುದಾಯದ ಸಂಘಟನೆ ಬಲ ಹೆಚ್ಚಿಸುವ ನಿಟ್ಟಿನಲ್ಲಿ ಪಕ್ಷ ಆದ್ಯತೆ ನೀಡಬೇಕು. ಈಗಾಗಲೇ ಬಿಜೆಪಿ, ಜೆಡಿಎಸ್ ಪಕ್ಷಗಳು ಈ ಬಾಗದಲ್ಲಿ ಸಮುದಾಯದವರಿಗೆ ಆದ್ಯತೆ ನೀಡಿದ್ದು, ಕಾಂಗ್ರೆಸ್ ಸಹ ಅವಕಾಸ ಕಲ್ಪಿಸಿಕೊಡಬೇಕೆಂದು ಪಕ್ಷದ ನಾಯಕರನ್ನು ಒತ್ತಾಯಿಸುತ್ತಿರುವುದಾಗಿ ಹೇಳಿದರು.

ದಿ ಮೈಸೂರು ಸಿಟಿ ಕೋ ಅಪರೇಟಿವ್ ಬ್ಯಾಂಕ್ ನಿರ್ದೇಶಕ ಎಸ್.ಆರ್.ರವಿಕುಮಾರ್ ಮಾತನಾಡಿ 40 ವರ್ಷಗಳಿಂದ ನಾಯಕ ಸಮುದಾಯ ಕಾಂಗ್ರೆಸ್ ಪರವಾಗಿ ತಮ್ಮ ನಿಲುವು ತೆಗೆದುಕೊಂಡು ಬಂದಿದೆ. ಹೀಗಾಗಿ ಸಮುದಾಯಕ್ಕೆ ಮೈಸೂರು ಭಾಗದಲ್ಲಿ ಈವರೆಗೂ ಒಮ್ಮೆಯೂ ವಿಧಾನ ಪರಿಷತ್ ಸ್ಥಾನ ನೀಡದಿರುವ ಬಗ್ಗೆ ಸಮುದಾಯದಲ್ಲಿ ಸಿಟ್ಟಿದೆ. ಹೀಗಾಗಿ 2028ಕ್ಕೂ ಪಕ್ಷವನ್ನು ಸಮುದಾಯ ಬೆಂಬಲಿಸುವ ನಿಟ್ಟಿನಲ್ಲಿ ಎಸ್.ಸಿ.ಬಸವರಾಜು ಅವರಿಗೆ ಎಂಎಲ್ ಸಿ ಸ್ಥಾನ ನೀಡಬೇಕೆಂಬ ಒಂದೇ ಒಂದು ಒತ್ತಾಯವನ್ನು ಪಕ್ಷದ ವರಿಷ್ಠರ ಗಮನಕ್ಕೆ ತರುವ ನಿಟ್ಟಿನಲ್ಲಿ ಪ್ರತಿಭಟಿಸುತ್ತಿದ್ದೇವೆ. ಸ್ಥಾನ ನೀಡದಿದ್ದರೆ ಸಮುದಾಯದ ಮತಗಳ ವಿಭಜನೆ ಆಗಲಿದೆ ಎಂಬುದನ್ನು ವರಿಷ್ಠರಿಗೆ ಮನವರಿಕೆ ಮಾಡಿಕೊಡುವ ಕೆಲಸವನ್ನು ಸಮುದಾಯದ ನಾಯಕರು ಮಾಡಬೇಕೆಂದು ತಿಳಿಸಿದರು.

ಒಕ್ಕೂಟದ ಅಧ್ಯಕ್ಷ ದ್ಯಾವಪ್ಪ ನಾಯಕ, ಸಂಘದ ಅಧ್ಯಕ್ಷ ಕ್ಯಾತನಹಳ್ಳಿ ನಾಗರಾಜು, ಮುಖಂಡರಾದ ಉದ್ದೂರು ಕೃಷ್ಣ, ಹೊಂಗನೂರು ಚಂದ್ರು, ಅರಕಲವಾಡಿ ಸೋಮನಾಯಕ, ಹೊಸಕೋಟೆ ಬಸವರಾಜು, ಕುಪ್ಪಳ್ಳಿ ಮಹದೇವನಾಯಕ, ಪಾಳ್ಯ ಕೃಷ್ಣ, ಸಿದ್ದರಾಜು, ರಮ್ಮನಹಳ್ಳಿ ಶಿವು, ಹೊಂಗನುರು ಚಂದ್ರು, ಅರಕಲವಾಡಿ ಸೋಮನಾಯಕ, ಪಾಳ್ಯ ಕೃಷ್ಣ, ಉದ್ದನೂರು ಸಿದ್ದರಾಜು, ಚಿಕ್ಕಾಟ ಬಂಗಾರನಾಯ್ಕ, ಕೊಡಗು ಅಶೋಕ್, ಮಂಡ್ಯ ರವಿ, ಅಕ್ಕಿಹೆಬ್ಬಾಳ್ ರಾಜನಾಯ್ಕ, ಬೇಲೂರು ಮಧುನಾಯ್ಕ, ಹೆಡತಲೆ ನಾಗರಾಜು, ಕೆ.ಆರ್.ನಗರ ಶ್ರೀನಿವಾಸನಾಯಕ, ಪಿರಿಯಾಪಟ್ಟಣ ಹರೀಶ್, ದ್ಯಾವಪ್ಪನಾಯಕ, ಬಿ.ಎಸ್.ಎನ್.ಎಲ್ ದೇವರಾಜು, ಮಡಿವಾಳ ಜಿಲ್ಲಾಧ್ಯಕ್ಷ ಸತ್ಯನಾರಾಯಣ್, ರೋಹಿತ್ ನಾಯ್ಕ, ಆಲಗೂಡು ನಾಗರಾಜು ಸೇರಿ ಹಲವರು ಭಾಗವಹಿಸಿದ್ದರು.

# ರೈತರಿಂದ ರಾ.ಗಾಂಧಿಗೆ ಪತ್ರ

## ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಹೇಳಿಕೆ



ರಾಮನಗರ: ಬಿಡದಿಯ ಸಮಗ್ರ ಉಪನಗರ ಯೋಜನೆ ಕೈ ಬಿಡಲು ರಾಜ್ಯ ಸರಕಾರಕ್ಕೆ ಸೂಚನೆ ನೀಡುವಂತೆ ಕಾಂಗ್ರೆಸ್ ನಾಯಕ ಹಾಗೂ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರಿಗೆ ನಾನು ಪತ್ರ ಬರೆದಿದ್ದು ಈ ಭಾಗದ ರೈತರು ಸಹ ಪತ್ರ ಬರೆದು ಅಂಚೆ ಮೂಲಕ ಕಳಿಸಲಿದ್ದಾರೆ ಎಂದು ಜೆಡಿಎಸ್ ಯುವಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

ತಾಲ್ಲೂಕಿನ ಬಿಡದಿ ಹೋಬಳಿ ಅರಳಾಳುಸಂದ್ರ ಗ್ರಾಮದಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕೇಂದ್ರ ಸರಕಾರದ ಗ್ರೇಟ್ ನಿಕೋಬಾರ್ ಅಭಿವೃದ್ಧಿ ಯೋಜನೆ ವಿರುದ್ದ "ಗ್ರೀನ್ ಓವರ್ ಗ್ರೀಡ್"(ಹಸಿರಿನ ಮೇಲೆ ದುರಾಸೆ) ಎಂದು ರಾಹುಲ್ ಗಾಂಧಿರವರು ದನಿ ಎತ್ತಿದ್ದು ಅರಣ್ಯ ಮತ್ತು ಪರಿಸರ ರಕ್ಷಣೆಯ ಬಗ್ಗೆ ಕಾಳಜಿ ವ್ಯಕ್ತಪಡಿಸಿದ್ದಾರೆ. ಕರ್ನಾಟಕದಲ್ಲಿ ಅವರ ಪಕ್ಷದ ಸರಕಾರ ರೈತರ ಫಲವತ್ತಾದ ಕೃಷಿಭೂಮಿಯನ್ನು ಉಪನಗರಕ್ಕೆ ಸ್ವಾಧೀನಪಡಿಸಿಕೊಳ್ಳುತ್ತಿದೆ. ಹಾಗಾಗಿ ಯೋಜನೆಯನ್ನು ಕೈ ಬಿಡುವಂತೆ ಅಂಚೆ ಪತ್ರದ ಮೂಲಕ ಒತ್ತಾಯಿಸಲಾಗುವುದು ಎಂದು ತಿಳಿಸಿದರು.

ರಾಹುಲ್ ಗಾಂಧಿರವರು ನಿಜವಾಗಿಯೂ ರೈತರ ಬಗ್ಗೆ ಹಾಗೂ ಪರಿಸರದ ಬಗ್ಗೆ ಕಾಳಜಿ ಹೊಂದಿದ್ದರೆ, ಬಿಡದಿ ಉಪನಗರ ಯೋಜನೆ ಕೈ ಬಿಡುವಂತೆ ತಮ್ಮ ಪಕ್ಷದ ಮುಖ್ಯಮಂತ್ರಿಯಾಗಿರುವ ಡಿ.ಕೆ.ಶಿವಕುಮಾರ್ ಅವರಿಗೆ ಸಲಹೆ ನೀಡಬೇಕು. ಸಾಧ್ಯವಾದರೆ ಒಮ್ಮೆ ಬಿಡದಿ ಭೇಟಿ ಕೊಟ್ಟು, ಇಲ್ಲಿರುವುದು ಬರಡು ಭೂಮಿಯೊ ಅಥವಾ ಫಲವತ್ತಾದ ಕೃಷಿ ಭೂಮಿಯೊ ಎಂದು ಪರಿಶೀಲಿಸಬೇಕು ಎಂದು ಆಗ್ರಹಿಸಿದರು.

ಕನಕಪುರ ಕ್ಷೇತ್ರದ ಜನರಿಗೆ ಮಾತ್ರ ಯಾರೂ ತಮ್ಮ ಜಮೀನು ಮಾರಾಟ ಮಾಡಬೇಡಿ, ನಿಮ್ಮ ಭೂಮಿಗೆ ಚಿನ್ನದ ಬೆಲೆ ಬರಲಿದೆ ಎನ್ನುವ ಡಿ.ಕೆ. ಶಿವಕುಮಾರ್‌ರವರು, ರಾಮನಗರ, ಹಾರೋಹಳ್ಳಿ ಹಾಗೂ ಮಾಗಡಿ ತಾಲ್ಲೂಕು ಜನರ ವಿಷಯದಲ್ಲಿ ಮಲತಾಯಿ ಧೋರಣೆ ಅನುಸರಿಸುತ್ತಿರುವುದು ಏಕೆ? ಇಲ್ಲಿರುವವರು ರೈತರಲ್ಲವೆ? ಅವರ ಕ್ಷೇತ್ರದವರು ಮಾತ್ರ ರೈತರೇ? ಎಂದು ನಿಖಿಲ್

### ರಿಯಲ್ ಎಸ್ಟೇಟ್ ದಂಧೆಗಾಗಿ ಯೋಜನೆ

**ಉಪನಗರದ ನಿರ್ಮಾಣದ ಹೆಸರಿನಲ್ಲಿ ಸರಕಾರ ರೈತರ ಜಮೀನು ಸ್ವಾಧೀನಪಡಿಸಿಕೊಂಡು ರಿಯಲ್ ಎಸ್ಟೇಟ್ ದಂಧೆ ಮಾಡಲು ಹೊರಟಿದೆ. ರೈತರಿಗೆ ಒಂದು ಎಕರೆಗೆ 2.5 ಕೋಟಿ ರೂ.ಪರಿಹಾರ ಕೊಡುತ್ತಿದ್ದು ಇದನ್ನೆ 7 ಕೋಟಿಗೆ ಮಾರಲು ಸಿದ್ಧತೆ ನಡೆಸಿದೆ. ಮುಂದೆ ಅದನ್ನು ಅಭಿವೃದ್ಧಿಪಡಿಸಿ ಚದರಡಿ ಲೆಕ್ಕದಲ್ಲಿ ಬಿಡಿಬಿಡಿಯಾಗಿ ಮಾರಾಟ ಮಾಡಿ ಎಕರೆಗೆ 25 ಕೋಟಿಯಷ್ಟು ಲಾಭ ಪಡೆಯಲಿದೆ. ಯೋಜನೆಯಿಂದ ಸುಮಾರು 33 ಸಾವಿರ ಕೋಟಿ ಲಾಭ ಗಳಿಸಲು ಸರಕಾರ ಮುಂದಾಗಿದೆ ಎಂದು ನಿಖಿಲ್ ಆರೋಪಿಸಿದರು.**

**ಆರ್ಥಿಕ ಇಲಾಖೆ ಉಪನಗರ ಯೋಜನೆಯಿಂದ ಸರಕಾರಕ್ಕೆ ಹೊರೆಯಾಗಲಿದೆ ಎಂದು ವರದಿ ನೀಡಿದರೂ ಸಹ ಡಿ.ಕೆ.ಶಿವಕುಮಾರ್‌ರವರು ತರಾತುರಿಯಲ್ಲಿ ಸಚಿವ ಸಂಪುಟದ ಅನುಮೋದನೆ ಪಡೆದಿದ್ದಾರೆ. ಯೋಜನೆ ಅನುಷ್ಠಾನಕ್ಕಾಗಿ ಶೇ.87ರಷ್ಟು ಸಾಲವನ್ನು ಹುಡ್ಕೊದಿಂದ ಪಡೆಯಲಾಗುತ್ತಿದೆ. ಅದಕ್ಕಾಗಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಮೂಲಕ (ಬಿಎಂಆರ್‌ಡಿಎ) ಸಾರ್ವಜನಿಕ ಆಸ್ತಿಗಳನ್ನು ಅಡಮಾನ ಇಡಲಾಗುತ್ತಿದೆ. ಇದು ಯಾವ ರೀತಿಯ ಅಭಿವೃದ್ಧಿ? ಎಂದು ನಿಖಿಲ್ ಸರಕಾರದ ವಿರುದ್ಧ ಹರಿಹಾಯ್ದರು.**

> **ಅನ್ನದಾತರು ತಮ್ಮ ಜಮೀನು ಉಳಿಸಿಕೊಳ್ಳಲು ಕಳೆದ 450ಕ್ಕೂ ಹೆಚ್ಚು ದಿನಗಳಿಂದ ಬೀದಿಯಲ್ಲಿ ಕುಳಿತು ಹೋರಾಟ ಮಾಡುತ್ತಿದ್ದಾರೆ. ಆದರೆ ಸರಕಾರಕ್ಕೆ ಕಣ್ಣು ಕಾಣ್ತಿಲ್ಲ, ಕಿವಿಯೂ ಕೇಳ್ತಿಲ್ಲ. ರೈತರ ವಿರೋಧದ ನಡುವೆಯೂ ಭೂ ಸ್ವಾಧೀನಕ್ಕೆ ಅಂತಿಮ ಅಧಿಸೂಚನೆ ಹೊರಡಿಸಿದ ಸರಕಾರದ ನಿರ್ಧಾರ ಖಂಡನೀಯ. ನಾವು ರೈತರ ಜತೆಗಿದ್ದು ಯೋಜನೆ ವಿರುದ್ಧ ತಡೆಯಾಜ್ಞೆ ತರಲು ಕಾನೂನು ಹೋರಾಟ ಮಾಡುತ್ತೇವೆ.**
>
> **▸▸ ನಿಖಿಲ್ ಕುಮಾರಸ್ವಾಮಿ**
> ರಾಜ್ಯಾಧ್ಯಕ್ಷರು, ಜೆಡಿಎಸ್ ಯುವ ಘಟಕ.

# ಆರೈಕೆ ಕೇಂದ್ರಗಳಿಂದ ಅನುಕೂಲ

ಚಾಮರಾಜನಗರ, ಜಿಲ್ಲೆಯಲ್ಲಿ ಹಿರಿಯ ನಾಗರಿಕರ ಕೇಂದ್ರಗಳ ಸ್ಥಾಪನೆಯಿಂದ ಹಿರಿಯರು ಸಮಾಜದಲ್ಲಿ ಸುರಕ್ಷಿತವಾಗಿ ಗೌರವಯುತ ಜೀವನ ನಡೆಸಲು ಸಾಧ್ಯ ಎಂದು ಜಿ.ಪಂ.ಸಿಇಓ ಮೋನಾರೋತ್ ಹೇಳಿದರು.

ನಗರದ ಹೌಸಿಂಗ್‌ಬೋರ್ಡ್ ಬಳಿ ಡಾ.ಬಿ.ಆರ್.ಅಂಬೇಡ್ಕರ್ ಉದ್ಯಾನವನ ಎದುರು ಜನಮಿತ್ರ ಸೇವಾ ಟ್ರಸ್ಟ್, ಫೆವಾರ್ಡ್-ಕ ಹಾಗೂ ಡ್ರೀಮ್ ಇಂಡಿಯಾ ನೆಟ್‌ವರ್ಕ್ ಸಹಯೋಗದಲ್ಲಿ ಆರಂಭವಾಗಲಿರುವ ಹಿರಿಯ ನಾಗರಿಕರ ಆರೈಕೆ ನೆಮ್ಮದಿ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದರು. ವೃದ್ಧರು, ಹಿರಿಯನಾಗರೀಕರು, ಮಹಿಳೆಯರು, ಮಕ್ಕಳು ಸೇರಿದಂತೆ ನಿರಾಶ್ರಿತರ ಹಿತ ಕಾಯುವುದು ಸಮಾಜದ ಜವಬ್ದಾರಿಯಾಗಿದೆ. ಸ್ವಯಂ ಸೇವಾ ಸಂಘಟನೆಗಳು ಈ ರೀತಿಯ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವುದು ಸ್ವಾಗತಾರ್ಹ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಆರೈಕೆ ಕೇಂದ್ರಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಿದರೆ ಹಿರಿಯ ನಾಗರೀಕರಿಗೆ ನೆರವಾಗಲಿದೆ ಎಂದು ಹೇಳಿದ ಅವರು ಸಮಸ್ಯೆಗಳಿದ್ದು, ತಮ್ಮ ಗಮನಕ್ಕೆ ತಂದರೆ ನೆರವು ನೀಡಲಾಗುವುದು ಎಂದರು. ನಮ್ಮ ತಾತ, ಅಜ್ಜಿ, ತಂದೆ, ತಾಯಿಗಳ ಪರಿಶ್ರಮದಿಂದ ನಾವು ಈ ಮಟ್ಟಕ್ಕೆ ಬಂದಿದ್ದೇವೆ. ಅವರಿಗೆ ನಮ್ಮ ಕಡೆಯಿಂದ ಏನೇನು ಆಗಬೇಕು ಅದನ್ನೆಲ್ಲ ಮಾಡಿಸಿಕೊಡುವುದಾಗಿ ಭರವಸೆ ನೀಡಿದರು.

ಫೆವಾರ್ಡ್-ಕ ರಾಜ್ಯ ಉಪಾಧ್ಯಕ್ಷ ಫಾದರ್ ಎಡ್ವರ್ಡ್ ಥಾಮಸ್ ಮಾತನಾಡಿ ಸರ್ಕಾರ, ಎನ್‌ಜಿಓ, ಚರ್ಚ್, ಮಂದಿರಗಳಿಗೆ ನಿರ್ಗತಿಕ ಮಕ್ಕಳು, ಮಹಿಳೆಯರು, ಹಿರಿಯರನ್ನು ನೋಡಿಕೊಳ್ಳುವ ಶಕ್ತಿ ಇಲ್ಲವೇ ? ಎಂದು ಮಾರ್ಮಿಕವಾಗಿ ಹೇಳಿದರು. ಭಿಕ್ಷಕರು,, ಹಿರಿಯ ನಾಗರೀಕರು, ಬೀದಿಗಳಲ್ಲಿ ಬಸ್ ನಿಲ್ದಾಣ, ಸರ್ಕಾರಿ ಜಾಗಗಳಲ್ಲಿ ಮಲಗದಂತೆ



ಸೂಕ್ತ ವ್ಯವಸ್ಥೆ ಕಲ್ಪಿಸಬೇಕು ಎಂಬ ದೃಷ್ಟಿಯಿಂದ ಕರ್ನಾಟಕದಲ್ಲಿ ಒಂದು ಸಾವಿರ ಹಿರಿಯ ನಾಗರಿಕರ ಆರೈಕೆ ಕೇಂದ್ರ ಆರಂಭಿಸಲಾಗುವುದು ಎಂದು ತಿಳಿಸಿದರು.

ಜನಮಿತ್ರ ಸೇವಾ ಟ್ರಸ್ಟ್ ಅಧ್ಯಕ್ಷ ಕದಂಬ ನಾ ಅಂಬರೀಷ್ ಮಾತನಾಡಿ, ಫೆವಾರ್ಡ್-ಕ ಮನೆತನವೇ ಹಿರಿಯರಿಗೆ ನೆಮ್ಮದಿ ಸಿಗಬೇಕು. ಕಾರಣದಿಂದ ಹಿರಿಯ ನಾಗರಿಕರ ನೆಮ್ಮದಿ ಆರೈಕೆ ಕೇಂದ್ರ ಮಾಡುತ್ತಿದ್ದಾರೆ. ಆಗಾಗಿ ಜನಮಿತ್ರ ಸೇವಾ ಟ್ರಸ್ಟ್ ಬಹಳ ವಷದಿಂದ ಜನೋಪಯೋಗಿ ಕೆಲಸಗಳನ್ನು ಮಾಡಿಕೊಂಡು ಬರುತಿದೆ ಎಂದರು. ಫೆವಾರ್ಡ್-ಕ ರಾಜ್ಯಾಧ್ಯಕ್ಷ ಮಹೇಶ್‌ಚಂದ್ರಗುರು ಮಾತನಾಡಿದರು. ನಾಗರೀಕ ಕಲ್ಯಾಣ ಅಧಿಕಾರಿ ಡಾ.ಮಂಜುನಾಥ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಫೆವಾರ್ಡ್-ಕ. ಜಿಲ್ಲಾ ಒಕ್ಕೂಟದ ಜಿಲ್ಲಾಧ್ಯಕ್ಷ ಕೆ.ಎನ್.ಮಂಟೇಲಿಂಗಯ್ಯ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್. ಚಿದಂಬರ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಎಚ್.ಆರ್.ಸುರೇಶ್, ಸಂಪನ್ಮೂಲ ವ್ಯಕ್ತಿ ಡಾ.ಅಚ್ಚುತ್ ರಾವ್, ಪಿ.ಎಂ. ಚೈತನ್ಯ ನೆಟ್‌ವರ್ಕ್ ಎಂ.ಭಾಗ್ಯಮ್ಮ, ಕೆ.ಕೆ.ಪಿ. ರಾಜ್ಯಾದ್ಯಕ್ಷ ಪ್ರವೀಣ್ ಭಾರದ್ವಜ್ ರವಿಚಂದ್ರಪ್ರಸಾದ್ ಕಹಳೆ ಇತರರು ಹಾಜರಿದ್ದರು.

# ಅಕ್ರಮವಾಗಿ ಕಾವೇರಿ ನೀರು ಪಡೆಯುವ ವ್ಯಕ್ತಿಗಳ ವಿರುದ್ಧ ಕ್ರಮಕ್ಕೆ ಆಗ್ರಹ

ಚಾಮರಾಜನಗರ, ಚಾಮರಾಜನಗರ- ರಾಮಸಮುದ್ರದ ಡಾ, ಬಾಬು ಜಗಜೀವನ 'ರಾಮ್ ಬಡಾವಣೆಯಲ್ಲಿ ಕಾವೇರಿ ಕುಡಿಯುವ ನೀರು ಸರಬರಾಜಾಗುವ ಮುಖ್ಯ ಪೈಪ್ ಲೈನ್ ಗೆ ಅಕ್ರಮವಾಗಿ ಮೋಟಾರ್ ಅಳವಡಿಸಿ ನೀರು ಪಡೆಯುತ್ತಿರುವ ವ್ಯಕ್ತಿಗಳ ವಿರುದ್ದ ಕ್ರಮ ಕೈಗೊಳ್ಳುವಂತೆ ಬಡಾವಣೆಯ ನಿವಾಸಿಗಳು ಒತ್ತಾಯಿಸಿದ್ದಾರೆ.

ಬಾಬು ಜಗಜೀವನ ರಾಂ ಬಡಾವಣೆ ಸೇರಿದಂತೆ ರಾಮಸಮುದ್ರ ವ್ಯಾಪ್ತಿಗೆ ಸೇರಿದ ಬಡಾವಣೆಗಳಲ್ಲಿ ಇತ್ತೀಚಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತಾರಕ್ಕೇರಿದೆ. ಬೋರ್ ವೆಲ್ ಗಳು ಬರಡಾಗಿವೆ. ಹೊಸ ಬೋರ್ ವೆಲ್



ಕೊರೆಸಿದರೂ ನೀರು ಬರುತ್ತಿಲ್ಲ. ಸದ್ಯಕ್ಕೆ ವಾರದಲ್ಲಿ ಒಂದು ಅಥವಾ ಎರಡು ಬಾರಿ ಬಡಾವಣೆಗೆ ಸರಬರಾಜಾಗುತ್ತಿರುವ ಕಾವೇರಿ ನೀರನ್ನೆ ನೆಚ್ಚಿಕೊಳ್ಳುವಂತ್ತಾಗಿದೆ. ಆದರೆ ಬಡಾವಣೆಯ ಕೆಲವರು ಕಾವೇರಿ ನೀರು ಸರಬರಾಜಾಗುವ ಮುಖ್ಯ ಪೈಪ್ ನ್ನು ಒಡೆದು ನೀರು ಪಡೆಯುತ್ತಿದ್ದಾರೆ ಮತ್ತೆ ಕೆಲವರು ಅಕ್ರಮವಾಗಿ ಮೋಟಾರ್ ಅಳವಡಿಸಿ ನೀರು ತೆಗೆದು ಕೊಳ್ಳುತ್ತಿರುವುದರಿಂದ ಉಳಿದ ಮನೆಗಳಿಗೆ ಸಮರ್ಪಕವಾಗಿ ಕಾವೇರಿ ನೀರು ಸರಬರಾಜಾಗುತ್ತಿಲ್ಲ ಎಂದು ನಿವಾಸಿಗಳು ಆರೋಪಿಸಿದ್ದಾರೆ. ಕೆಲವರು ದಬಾವಣೆಯಿಂದ ನೀರು ಪಡೆಯುವುದರಿಂದ ಉಳಿದ ನಿವಾಸಿಗಳು ಕುಡಿಯುವ ನೀರಿನ ಸಮಸ್ಯೆ ಎದುರಿಸುವಂತ್ತಾಗಿದೆ. ಆದ್ದರಿಂದ ನೀರು ಸರಬರಾಜು ಮಂಡಳಿಯ ಅಧಿಕಾರಿಗಳು ಈ ಬಗ್ಗೆ ಪರಿಶೀಲಿಸಿ ಅಕ್ರಮವಾಗಿ ನೀರು ಪಡೆಯುತ್ತಿರುವ ವ್ಯಕ್ತಿಗಳ ವಿರುದ್ದ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

# ಅಭಿವೃದ್ಧಿಗೆ ಸರ್ಕಾರದಲ್ಲಿ ಹಣವಿಲ್ಲ: ಅಶ್ವಥ್ ನಾರಾಯಣ್

ಮೈಸೂರು: ಗ್ಯಾರಂಟಿಗೆ ಹೊಂದಿಸಲು ರಾಜ್ಯವನ್ನು ದಿವಾಳಿ ಮಾಡಿರುವ ಕಾಂಗ್ರೆಸ್ ಸರ್ಕಾರದಲ್ಲಿ ಅಭಿವೃದ್ಧಿಗೆ ಹಣವಿಲ್ಲದ ಸ್ಥಿತಿ ಎದುರಾಗಿದೆ ಎಂದು ಮಾಜಿ ಡಿಸಿಎಂ ಅಶ್ವಥ್ ನಾರಾಯಣ್ ತಿಳಿಸಿದರು.

ಖಾಸಗಿ ಹೋಟೆಲ್ ನಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರ, ನೂತನ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅಧಿಕಾರ ವಹಿಸಿಕೊಂಡ ಆರಂಭದಲ್ಲೇ ಮಂತ್ರಿಗಿರಿಗಾಗಿ ಕಚ್ಚಾಡು ತ್ತಿದ್ದಾರೆ. ಅವರಲ್ಲೇ ಅಸಮಾಧಾನ ಭುಗಿಲೆದ್ದಿದ್ದು, ಈಗಾಗಲೇ ರಾಜ್ಯವನ್ನು ದಿವಾಳಿ ಮಾಡಲು ಹೊರಟಿದ್ದಾರೆ. ರಾಜ್ಯದ ಸಾಲ 8 ಲಕ್ಷ ಕೋಟಿಗೆ ಏರಿಕೆಯಾಗಿದೆ. ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರದ ಬಳಿ ಹಣವಿಲ್ಲ. ಇದೇ ಕಾರಣದಿಂರ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಂಖ್ಯೆಯನ್ನು ಕಡಿಮೆ ಮಾಡಲು ಸರ್ಕಾರ ಹೊರಟಿದೆ. ರಾಜ್ಯದಲ್ಲಿ ಸದ್ಯಕ್ಕೆ ಖಾತೆ ಖ್ಯಾತೆ ನಡೆಯುತ್ತಿದೆ. 14 ಸಚಿವರು 14 ದಿಕ್ಕುಗಳಲ್ಲಿ ಮಾತನಾಡುತ್ತಿದ್ದಾರೆ. ಮುಂದೆ ಹೇಗೆ ಆಡಳಿತ ನಡೆಸುತ್ತಾರೋ ಶಿವಕುಮಾರ್‌ರನ್ನು ಶಿವನೇ ಕಾಪಾಡಬೇಕೆಂದು ವ್ಯಂಗ್ಯವಾಡಿದರು. ಬಿಡದಿ ಟೌನ್ ಶಿಪ್ ವಿಚಾರ ಸಮಯ ಬಂದಾಗ ಮಾತನಾಡುವುದಾಗಿ ಹೇಳಿದರು.



**ಕಟ್ಟಡ ಕಡೆಯ ವ್ಯಕ್ತಿಗೂ ಆಡಳಿತ:** ದೇಶದ ಕಟ್ಟ ಕಡೆಯ ವ್ಯಕ್ತಿಗೂ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಮೂಲಕ ಹಾಗೂ ಭಾರತದ ಸಾರ್ವಭೌಮತೆ ಮತ್ತು ಅಖಂಡತೆ ಎತ್ತಿಹಿಡಿಯುವುದರ ಜತೆಗೆ ಶಾಂತಿ ಸೌಹಾರ್ದತೆಯನ್ನು ಪ್ರಧಾನಿ ನರೇಂದ್ರ ಮೋದಿ ಕಾಪಾಡುವ ಜತೆಗೆ ಅತಿ ಸುದೀರ್ಘ ಪ್ರಧಾನಿಯಾಗಿ ದಾಖಲೆ ಬರೆದಿದ್ದಾರೆ. ಮುದ್ರಾ ಯೋಜನೆಯಡಿ 40ಲಕ್ಷಕ್ಕೂ ಅಧಿಕ ಹಣ ಬಿಡುಗಡೆ, ಎರಡು ಕೋಟಿ ಮಂದಿಗೆ ಆಯುಷ್ಮಾನ್ ಕಾರ್ಡ್ ವಿತರಣೆ ಪ್ರಯೋಜನೆ, ರೈಲು ಮಾರ್ಗಗಳ ವಿಸ್ತರಣೆ, ವಿದ್ಯುದೀಕರಣ, 3ನೇ ರಾಷ್ಟ್ರೀಯ ಶಿಕ್ಷಣ ನೀತಿಯನ್ನು 36 ವರ್ಷದ ನಂತರ ಇಡೀ ದೇಶದಕ್ಕೆ ಪ್ರಸ್ತುತವಾಗಿರುವ ರಾಷ್ಟ್ರೀಯ ಶಿಕ್ಷಣ ನೀತಿಯಿಂದ ಪರಿಪೂರ್ಣವಾಗಿರುವ ಶಿಕ್ಷಣವನ್ನು ಕೊಡುವ ಮೂಲಕ ನದೇಶದ ಅಭಿ ವೃದ್ಧಿಗೆ ಮುನ್ನುಡಿ ಬರೆದು 2047ರ ವೇಳೆಗೆ ಬಲಿಷ್ಠ ರಾಷ್ಟ್ರವಾಗಿ ದೇಶ ಹೊರಹೊಮ್ಮಲಿದೆ ಎಂದರು

75ರಿಂದ 165 ಏರ್‌ಪೋರ್ಟ್‌ಗೆ ಏರಿಸಲಾಗಿದೆ. ಉಡಾನ್ ಯೋಜನೆ ಮೂಲಕ ಕರ್ನಾಟಕದಿಂದ 57 ರೂಟ್‌ಗಳನ್ನು ತೆರೆಯಲಾಗಿದೆ. ರೈತರಿಗೆ ಕಿಸಾನ್ ಕ್ರೆಡಿಟ್ ಕಾರ್ಡ್, ಕಿಸಾನ್ ಸಮ್ಮಾನ್ ಯೋಜನೆಗಳನ್ನು ತಲುಪಿಸಲಾಗುತ್ತಿದೆ ಎಂದು ಹೇಳಿದರು. ನಗರ ಅಧ್ಯಕ್ಷ ಎಲ್.ನಾಗೇಂದ್ರ, ಗ್ರಾಮಾಂತರ ಅಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ, ಶಾಸಕ ಟಿ.ಎಸ್ ಶ್ರೀವತ್ಸ, ಮಾಜಿ ಸಂಸದ ಪ್ರತಾಪ್ ಸಿಂಹ, ಅಲ್ಪ ಸಂಖ್ಯಾತ ರಾಜ್ಯಾಧ್ಯಕ್ಷ ಅನಿಲ್ ಥಾಮಸ್, ರಾಜ್ಯ ವಕ್ತಾರ ಎಂ.ಜಿ.ಮಹೇಶ್, ಮಾಜಿ ಮೇಯರ್‌ಗಳಾದ ಸಂದೇಶ್ ಸ್ವಾಮಿ, ಶಿವಕುಮಾರ್, ವಿಭಾಗೀಯ ಪ್ರಭಾರಿ ಸ್ವಾಮಿ ಮರಳಪುರ, ಸಹ ಪ್ರಭಾರಿ ಈ.ಸಿ.ನಿಂಗರಾಜ್ ಗೌಡ, ನಗರ ವಕ್ತಾರ ಎಂ.ಮೋಹನ್, ನಗರ ಪ್ರಧಾನ ಕಾರ್ಯದರ್ಶಿಗಳಾದ ಬಿ.ಎಂ.ರಘು, ಸೋಮಸುಂದರ್, ಕೆ.ಸಿ.ರುದ್ರಮೂರ್ತಿ, ಸಹ ವಕ್ತಾರ ಕಿರಣ್ ಗೌಡ, ಜಯಶಂಕರ್, ಮುಖಂಡರಾದ ಹೇಮಾ ನಂದೀಶ್, ನಗರ ಯುವ ಮೋರ್ಚಾ ಅಧ್ಯಕ್ಷ ರಾಕೇಶ್, ಉಪಸ್ಥಿತರಿದ್ದರು.

# ನೂತನ ತಾಲೂಕು ಅಧ್ಯಕ್ಷರ ಆಯ್ಕೆ



ಚಾಮರಾಜನಗರ, ಯುವ ಕರ್ನಾಟಕ ವೇದಿಕೆಯ ನೂತನ ತಾಲೂಕು ಅಧ್ಯಕ್ಷರಾಗಿ ಆರ್.ರಾಘವೇಂದ್ರ ನೇಮಕಗೊಂಡಿದ್ದಾರೆ.


ನಗರದ ಪ್ರವಾಸಿಮಂದಿರದಲ್ಲಿ ನಡೆದ ಯುವ ಕರ್ನಾಟಕ ವೇದಿಕೆಯ ಪದಾಧಿಕಾರಿಗಳ ಸಭೆಯಲ್ಲಿ ಚಾಮರಾಜ ನಗರ ತಾಲೂಕು ಅಧ್ಯಕ್ಷರಾಗಿ ಆಯ್ಕೆಯಾದ ಆರ್.ರಾಘವೇಂದ್ರ ಅವರಿಗೆ ಜಿಲ್ಲಾಧ್ಯಕ್ಷ ಆಯಾಜ್ ಕನ್ನ ಡಿಗ ನೇಮಕಾತಿ ಆದೇಶ ವಿತರಿಸಿ ಮಾತನಾಡಿ, ನಮ್ಮ ವೇದಿಕೆಯು ಕನ್ನಡನಾಡು, ನುಡಿ, ವಿಚಾರವಾಗಿ ಧಕ್ಕೆಯಾದಂತಹ ಸಂದರ್ಭದಲ್ಲಿ ಧ್ವನಿ ಎತ್ತುವ ಮೂಲಕ ನಾಡಿನ ಸಂರಕ್ಷಣೆಗಾಗಿ ಹೋರಾಟ ಮಾಡುತ್ತದೆ ಎಂದರು. ಸಭೆಯಲ್ಲಿ ನಿಸಾರ್ ಅಹಮದ್, ಸುಂದರ್‌ಶಾಸ್ತ್ರಿ, ರಾಜೇಂದ್ರ, ಕುಮಾರ್‌ಬೂದಂಬಳ್ಳಿ, ರಂಗಸ್ವಾಮಿ, ತೌಸೀಫ್, ಮೂರ್ತಿ ಶಾಸ್ತ್ರಿ, ಅಪ್ರೋಜ್, ನವೀನ್, ಇರ್ಫಾನ್, ಸಿದ್ದು ಇದ್ದರು.

## ದಲಿತ ಮಹಾಸಭಾ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ ಪಾಪು ಅಭಿಪ್ರಾಯ

# ಸಾಹಿತ್ಯವನ್ನು ಹೆಚ್ಚು ಜನರು ಓದುವಂತಾದಾಗ ಸಾರ್ಥಕತೆ

ಚಾಮರಾಜನಗರ: ಕನ್ನಡ ಸಾಹಿತ್ಯವು ಒಂದು ದೊಡ್ಡ ಸಮುದ್ರವಿದ್ದಂತೆ. ಸಾಹಿತ್ಯವು ಕೇವಲ ಬರೆಯುವವನಿಗಷ್ಟೇ ಸೀಮಿತವಾಗದೆ ಸಮಾಜದ ಪ್ರತಿಯೊಬ್ಬರನ್ನೂ ತಲುಪಿ, ಅವರ ಅನುಭವಗಳಿಗೆ ಧ್ವನಿಯಾದಾಗ ಮಾತ್ರ ಅದರ ನೈಜ ಸಾರ್ಥಕತೆ ಹೆಚ್ಚುತ್ತದೆ ಎಂದು ದಲಿತ ಮಹಾಸಭಾ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ ಪಾಪು ಅವರು ಅಭಿಪ್ರಾಯಪಟ್ಟರು.

ನಗರದ ಡಾ. ರಾಜ್ ಕುಮಾರ್ ರಂಗಮಂದಿರದಲ್ಲಿ ಅನುಪಮಾ ಸೇವಾ ಟ್ರಸ್ಟ್ ವತಿಯಿಂದ ಆಯೋಜಿಸಲಾಗಿದ್ದ ಪ್ರಥಮ ವಾರ್ಷಿಕೋತ್ಸವ, ರಾಷ್ಟ್ರೀಯ ಮಟ್ಟದ ಸಾಹಿತ್ಯ ಸಮ್ಮೇಳನ, ರಾಷ್ಟ್ರೀಯ ಮಟ್ಟದ ಕವಿಗೋಷ್ಠಿ, ?ನೀಲಿರಾಗ? ಕವನ ಸಂಕಲನ ಬಿಡುಗಡೆ ಹಾಗೂ ವಿವಿಧ ಕ್ಷೇತ್ರಗಳ ಸಾಧಕರಿಗೆ ರಾಷ್ಟ್ರಮಟ್ಟದ ಸನ್ಮಾನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.



### ಮೂಲೆಗುಂಪಾದ ಪ್ರತಿಭೆಗಳ ಅನಾವರಣ ಹಾಗೂ ಪ್ರಶಸ್ತಿ ಪ್ರದಾನ

ಅನುಪಮಾ ಸೇವಾ ಟ್ರಸ್ಟ್ ಅಧ್ಯಕ್ಷರಾದ ಡಾ. ಪಿ. ಪ್ರೇಮಾ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಸೂಕ್ತ ಮಾರ್ಗದರ್ಶನ ಹಾಗೂ ವೇದಿಕೆಯಿಲ್ಲದೆ ಎಷ್ಟೋ ಅದ್ಭುತ ಸಾಹಿತ್ಯ ಪ್ರತಿಭೆಗಳು ಮೂಲೆಗುಂಪಾಗಿ ಉಳಿದಿದ್ದಾರೆ. ಅಂತಹ ಸುಪ್ತ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸವನ್ನು ನಮ್ಮ ಟ್ರಸ್ಟ್ ಮಾಡುತ್ತಿದೆ ಎಂದರು. ಟ್ರಸ್ಟ್ ಆರಂಭವಾಗಿ ಕೇವಲ ಒಂದು ವರ್ಷವಾಗಿದ್ದರೂ ಸಹ ಈಗಾಗಲೇ ಮಹಿಳೆಯರಿಗೆ ಸ್ಫೂರ್ತಿ ನೀಡುವ ವಿಚಾರ ಸಂಕಿರಣಗಳು ಸೇರಿದಂತೆ ಒಟ್ಟು 13 ಮಹತ್ವದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಲಾಗಿದೆ. ಮುಂದಿನ ದಿನಗಳಲ್ಲೂ ಸಮಾಜಮುಖಿಯಾದ ಉತ್ತಮ ಕಾರ್ಯಕ್ರಮಗಳನ್ನು ಆಯೋಜಿಸುವ ಹಂಬಲ ಹೊಂದಿದ್ದೇವೆ ಎಂದು ಅವರು ತಿಳಿಸಿದರು. ಇದೇ ಭವ್ಯ ವೇದಿಕೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ ಮಹನೀಯರಿಗೆ ಸಮಾಜ ಸೇವಾರತ್ನ ಪ್ರಶಸ್ತಿ, ಕಲಾ ಸಿರಿ ಪ್ರಶಸ್ತಿ, ಆದರ್ಶ ದಂಪತಿಗಳ ಪ್ರಶಸ್ತಿ, ರಾಷ್ಟ್ರ ಮಟ್ಟದ ಕಿತ್ತೂರು ಚೆನ್ನಮ್ಮ ಸೇವಾರತ್ನ ಪ್ರಶಸ್ತಿ ಹಾಗೂ ರಾಷ್ಟ್ರ ಮಟ್ಟದ ಇಮ್ಮಡಿ ಪುಲಿಕೇಶಿ ಸೇವಾ ಪ್ರಶಸ್ತಿಗಳನ್ನು ಪ್ರದಾನ ಮಾಡಿ ಗೌರವಿಸಲಾಯಿತು.

ಈ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಸದಸ್ಯ ಶಂಕರ್ ಅಂಕನಶೆಟ್ಟಿಪುರ, ಕೊಳ್ಳೇಗಾಲ ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಆರ್. ನಂಜುಂಡಯ್ಯ, ಜೆಇ ಕಿರಣ್ ಕುಮಾರ್, ಲೋಕೇಶ್ ರಾಜ್, ಸರ್ಕಾರಿ ಪ್ರೌಢ ಶಾಲಾ ಜಿಲ್ಲಾಧ್ಯಕ್ಷ ವೀರಭದ್ರ ಸ್ವಾಮಿ, ದಲಿತ ರಾಜ್ಯ ಮಹಿಳಾ ಸಂಯೋಜಕಿ ಗಿರಿಜಾ, ಹಿರಿಯ ಸಾಹಿತಿ ಡಾ. ಅಮ್ಮಸಂದ್ರ ಸುರೇಶ್, ರವಿಚಂದ್ರಪ್ರಸಾದ್ ಕಹಳೆ, ಪ್ರಾಂಶುಪಾಲ ರಂಗಸ್ವಾಮಿ ಹಾಗೂ ಗೌಸ್ ಸೇರಿದಂತೆ ಪ್ರಮುಖ ಗಣ್ಯರು ಮತ್ತು ಸಾಹಿತ್ಯಾಸಕ್ತರು ಉಪಸ್ಥಿತರಿದ್ದರು.

### ಕನ್ನಡ ಭಾಷೆಯ ಮೇಲಿನ ದೌರ್ಜನ್ಯಕ್ಕೆ ವಕೀಲ ಪ್ರಸನ್ನಕುಮಾರ್ ವಿಷಾದ


**ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದ ಪ್ರಖ್ಯಾತ ವಕೀಲ ಪ್ರಸನ್ನಕುಮಾರ್ ಅವರು, ಇಂತಹ ಅರ್ಥಪೂರ್ಣ ಕಾರ್ಯಕ್ರಮಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲೆಯಲ್ಲಿ ಆಯೋಜಿಸುವ ಮೂಲಕ ಯುವ ಸಾಹಿತಿಗಳಿಗೆ ಹೆಚ್ಚಿನ ಅವಕಾಶ ಕಲ್ಪಿಸಿಕೊಡಬೇಕಿತ್ತು ಎಂದರು. ಸಮಾಜವನ್ನು ತಿದ್ದಿ ಸರಿಪಡಿಸುವ ಅದ್ಭುತ ಶಕ್ತಿ ಸಾಹಿತ್ಯಕ್ಕಿದೆ ಎಂಬುದನ್ನು ನೆನಪಿಸಿದ ಅವರು, ಕವಿಗಳು ತಮ್ಮ ಬರಹಗಳ ಮೂಲಕ ಸದಾ ಸಮಾಜವನ್ನು ಜಾಗೃತಗೊಳಿಸುವ ಕೆಲಸ ಮಾಡುತ್ತಿದ್ದಾರೆ ಎಂದರು. ಆದರೆ ಪ್ರಸ್ತುತ ದಿನಗಳಲ್ಲಿ ಕನ್ನಡ ಭಾಷೆಯ ಮೇಲೆ ನಿರಂತರವಾಗಿ ದೌರ್ಜನ್ಯ ಮತ್ತು ದಬ್ಬಾಳಿಕೆಗಳು ನಡೆಯುತ್ತಿರುವುದು ಅತ್ಯಂತ ನೋವಿನ ಸಂಗತಿಯಾಗಿದ್ದು, ಸರ್ಕಾರವಾಗಲಿ ಅಥವಾ ಜಿಲ್ಲಾಡಳಿತವಾಗಲಿ ಕನ್ನಡದ ಅಭಿವೃದ್ಧಿಗಾಗಿ ಪರಿಣಾಮಕಾರಿ ಕಾರ್ಯಕ್ರಮಗಳನ್ನು ರೂಪಿಸುತ್ತಿಲ್ಲ ಎಂದು ತೀವ್ರ ವಿಷಾದ ವ್ಯಕ್ತಪಡಿಸಿದರು. ಇದೇ ಸಂದರ್ಭದಲ್ಲಿ ಜೆಡಿಎಸ್ ಮುಖಂಡರಾದ ಓಲೆ ಮಹದೇವ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಸಮಾರಂಭಕ್ಕೆ ಶುಭ ಹಾರೈಸಿದರು**

# ಶಾಸಕ ಇಕ್ಬಾಲ್ ಹುಸೇನ್ ಆರೋಗ್ಯ ಸ್ಥಿರ, ವೈದ್ಯರ ನಿಗಾದಲ್ಲಿ ಶಾಸಕರು

- ಗಾಬರಿಯಾಗುವ ಅವಶ್ಯಕತೆ ಇಲ್ಲ – ಸಿಎಂ ಡಿಕೆಶಿ
- ರಕ್ತನಾಳಗಳಲ್ಲಿ ಅಡಚಣೆ ಇದೆ, ಚಿಕಿತ್ಸೆ ಮುಂದುವರೆದಿದೆ – ವೈದ್ಯರು
- ಆತಂಕದಲ್ಲಿದ್ದ ಕಾರ್ಯಕರ್ತರು, ಮುಖಂಡರು ಈಗ ನಿರಾಳ

ರಾಮನಗರ: ರಾಮನಗರ ವಿಧಾನಸಭಾ ಕ್ಷೇತ್ರದ ಶಾಸಕ ಎಚ್.ಎ.ಇಕ್ಬಾಲ್‌ಹುಸೇನ್ ಅವರಲ್ಲಿ ಹೃದಯದ ನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಅವರು ಬೆಂಗಳೂರಿನ ವೈದೇಹಿ ಆಸ್ಪತ್ರೆಯಲ್ಲಿ ಚಿಕಿತ್ಸೆ





ಪಡೆಯುತ್ತಿದ್ದಾರೆ. ವೈದ್ಯರ ಪ್ರಕಾರ ಅವರ ಆರೋಗ್ಯ ಸ್ಥಿರವಾಗಿದೆ. ಹೃದಯದ ರಕ್ತನಾಳಗಳಲ್ಲಿ ಅಡಚಣೆಗಳು (ಬ್ಲಾಕೇಜ್) ಪತ್ತೆಯಾಗಿದ್ದು, ಸಧ್ಯದಲ್ಲೇ ಚಿಕಿತ್ಸೆ ಆರಂಭವಾಗಲಿದೆ ಎಂದು ತಿಳಿಸಿದ್ದಾರೆ.

ಸೋಮವಾರ ಬೆಳಿಗ್ಗೆ ಶಾಸಕರಿಗೆ ಹೃದಯಾಘಾತವಾಗಿದ್ದು, ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂಬು ಸುದ್ದಿ ಕಾಡ್ಗಿಚಿನಂತೆ ಜಿಲ್ಲಾದ್ಯಂತ ಹಬ್ಬಿತ್ತು. ಕಾಂಗ್ರೆಸ್ ಪಾಳಯದಲ್ಲಿ ಆತಂಕ ಮನೆಮಾಡಿತ್ತು. ತದನಂತರ ಅದಕ್ಕೆ ಸ್ಪಷ್ಟನೆ ದೊರೆತು ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಮತ್ತು ಅವರ ಅಭಿಮಾನಿಗಳು ನಿರಾಳರಾಗಿದ್ದಾರೆ.

**ಎಡಗೈ ಸೆಳೆತ ಕಾಣಿಸಿಕೊಂಡಿತು**

ಭಾನುವಾರ ಬೆಂಗಳೂರಿನ ತಮ್ಮ ಸ್ವಗ್ರಹದಲ್ಲಿದ್ದ ಶಾಸಕ ಇಕ್ಬಾಲ್ ಹುಸೇನ್ ಅವರ ಎಡಗೈ ಸೆಳೆತ ಆರಂಭವಾಗಿದೆ. ತದನಂತರ ಎದೆ ಭಾಗಕ್ಕೂ ವಿಸ್ತಾರಗೊಂಡಿದೆ. ವೈದ್ಯರ ಸಲಹೆ ಪಡೆಯಲು ವೈದೇಹಿ ಆಸ್ಪತ್ರೆಗೆ ಭೇಟಿ ನೀಡಿದ್ದ ಅವರು ವೈದ್ಯರ ಸಲಹೆ ಮೇರೆಗೆ ಅದೇ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ. ಶಾಸಕರನ್ನು ಕೂಲಂಕುಷವಾಗಿ ಪರಿಶೀಲಿಸಿದ ವೈದ್ಯರು ಆಂಜಿಯೋಗ್ರಾಮ್ ಮಾಡಿದ್ದಾರೆ. ಅವರ ಹೃದಯದ ರಕ್ತನಾಳಗಳಲ್ಲಿ ಅಡಚಣೆಗಳಿರುವುದನ್ನು ಪತ್ತೆಯಾಗಿದೆ. ಅಗತ್ಯ ಚಿಕಿತ್ಸೆ ಕೊಡುತ್ತಿದ್ದೇವೆ. ಅವರ ಆರೋಗ್ಯ ಸ್ಥಿರವಾಗಿದೆ, ಎಂದು ವೈದ್ಯರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದಾರೆ. ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ಬೆಂಗಳೂರಿನ ವೈದೇಹಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರೆದಿದ್ದು, ಹೃದಯದ ಬೈಪಾಸ್ ಸರ್ಜರಿ

**ಸಿಎಂ ಡಿ.ಕೆ.ಶಿ ಭೇಟಿ**

**ತಮ್ಮ ಆಪ್ತ ಇಕ್ಬಾಲ್ ಹುಸೇನ್ ಅವರ ಆರೋಗ್ಯ ವಿಚಾರಿಸಲು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ವತಃ ವೈದೇಹಿ ಆಸ್ಪತ್ರೆಗೆ ಭೇಟಿ ಕೊಟ್ಟು ಶಾಸಕರ ಆರೋಗ್ಯವನ್ನು ವಿಚಾರಿಸಿದರು. ಇದೇ ವೇಳೆ ಅವರು ವೈದ್ಯರ ಬಳಿಯೂ ಮಾಹಿತಿ ಪಡೆದುಕೊಂಡಿದ್ದಾರೆ.**

**ತದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಿಎಂ ಡಿಕೆಶಿ, "ಇಕ್ಬಾಲ್ ಹುಸೇನ್ ನನ್ನ ಸ್ನೇಹಿತ, ನಮ್ಮ ಶಾಸಕ, ಅವರ ಆರೋಗ್ಯ ಸ್ಥಿರವಾಗಿದೆ ಗಾಬರಿಯಾಗುವ ಅವಶ್ಯಕತೆ ಇಲ್ಲ. ನಿನ್ನೆ ಅವರ ಎಡಗೈನಲ್ಲಿ ಸೆಳೆತ ಮತ್ತು ಎದೆ ನೋವು ಕಾಣಿಸಿಕೊಂಡಿತ್ತು. ಮುಂಜಾಗ್ರತೆಯಾಗಿ ಅವರು ವೈದ್ಯರ ಸಲಹೆ ಪಡೆದುಕೊಳ್ಳಲು ಆಸ್ಪತ್ರೆಗೆ ದಾಖಲಾಗಿದ್ದಾರೆ. ಚಿಕಿತ್ಸೆ ಪಡೆಯುತ್ತಿದ್ದಾರೆ. ಕೆಲವು ದಿನಗಳ ನಂತರ ಫೋರ್ಟಿಸ್ ಆಸ್ಪತ್ರೆಯಲ್ಲಿ ಸಮಗ್ರ ತಪಾಸಣೆ ನಡೆಯಲಿದೆ.**

**ಅವಶ್ಯವಿದ್ದರೆ ಚಿಕಿತ್ಸೆಯೂ ಪಡೆಯಲಿದ್ದಾರೆ. ಹೀಗಾಗಿ ಯಾವುದೇ ಆತಂಕವಿಲ್ಲ ಎಂದು ಸಿಎಂ ಡಿಕೆಶಿ ಹೇಳಿದ್ದಾರೆ. ಸಿಎಂ ಡಿಕೆಶಿ ಅವರ ಜೊತೆಗೆ ವಿಧಾನಸಭೆಯ ಮಾಜಿ ಸ್ಪೀಕರ್ ರಮೇಶ್ ಕುಮಾರ್ ಸಹ ಇದ್ದರು.**

## ಬೆಂಗಳೂರಿಗೆ ದೌಡು

**ಶಾಸಕ ಇಕ್ಬಾಲ್ ಹುಸೇನ್ ಅವರ ಆರೋಗ್ಯದಲ್ಲಿ ಸಮಸ್ಯೆ ಉಂಟಾಗಿದೆ ಎಂದು ಸುದ್ದಿ ಹರಡುತ್ತಲೆ, ಕಾಂಗ್ರೆಸ್ ಕಾರ್ಯಕರ್ತರು ಮತ್ತು ಮುಖಂಡರು ಬೆಂಗಳೂರಿಗೆ ದೌಡಾಯಿಸಿದ್ದರು. ತಮ್ಮ ನಾಯಕನ ಆರೋಗ್ಯ ಸುಧಾರಿಸಲಿ ಎಂದು ತಮ್ಮ ಇಷ್ಟ ದೇವರುಗಳಲ್ಲಿ ಪ್ರಾರ್ಥಿಸಿದರು. ಶಾಸಕರ ಆರೋಗ್ಯ ಸ್ಥಿರವಾಗಿದೆ ಎಂದು ಗೊತ್ತಾದ ನಂತರ ಎಲ್ಲರೂ ನಿರಾಳರಾಗಿದ್ದಾರೆ. ಇತ್ತ ಕ್ಷೇತ್ರದ ಜನತೆಯಲ್ಲೂ ಕೆಲ ಹೊತ್ತು ಆತಂಕ ಮನೆ ಮಾಡಿತ್ತು. ಸಿಎಂ ಡಿಕೆಶಿ ಮತ್ತು ವೈದ್ಯರ ಹೇಳಿಕೆಗಳ ವೀಡಿಯೋಗಳು ವೈರಲ್ ಆದ ನಂತರ ಕ್ಷೇತ್ರದಲ್ಲಿ ಸಮಾಧಾನ ಮನೆ ಮಾಡಿದೆ.**

## 17ರಂದು ಬಸವ ಜಯಂತಿ



ಗುಂಡ್ಲುಪೇಟೆ: ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ತಾಲ್ಲೂಕು ಘಟಕ ಹಾಗೂ ಯುವ ಘಟಕ ಮತ್ತು ಗುಂಡ್ಲುಪೇಟೆ ತಾಲ್ಲೂಕಿನ ಎಲ್ಲಾ ವೀರಶೈವ ಲಿಂಗಾಯತ ಸಂಘ ಸಂಸ್ಥೆಗಳ ವತಿಯಿಂದ ಗುಂಡ್ಲುಪೇಟೆ ಪಟ್ಟಣದಲ್ಲಿ ಅದ್ದೂರಿ ಬಸವ ಜಯಂತಿ ಉತ್ಸವ -2026 ಯನ್ನು ಆಯೋಜಿಸಲಾಗಿದ್ದು ಈ ವಿಚಾರವಾಗಿ ಪಟ್ಟಣದ ಸೋಮೇಶ್ವರ ವಿದ್ಯಾರ್ಥಿ ನಿಲಯದಲ್ಲಿ ಪತ್ರಿಕಾಗೋಷ್ಠಿ ಅಯೊಜಿಸಲಾಗಿತ್ತು.

ಈ ಸಂದರ್ಭದಲ್ಲಿ ತಾಲ್ಲೂಕು ಅಧ್ಯಕ್ಷ ಶಿವಪ್ರಸಾದ್ ಮಾತನಾಡಿ ಎಲ್ಲಾ ಸುಮಾರು ಇಪ್ಪತ್ತ್ ಕ್ಕೂ ಹೆಚ್ಚು ವಿವಿಧ ಕಲಾತಂಡಗಳು ಹಾಗೂ ಡಿಜೆ ಮೂಲಕ ಜೆಎಸ್‌ಎಸ್ ಕಾಲೇಜು ನಿಂದ ಬಸವೇಶ್ವರರ ಮೆರವಣಿಗೆ ಆರಂಭ ಮಾಡಲಾಗುವುದು,ಬೆಳಿಗ್ಗೆ 10-ರಿಂದ ಸಂಜೆ 7 ಗಂಟೆ ತನಕ ಪಟ್ಟಣದ ವಿವಿಧ ಬದಿಗಳಲ್ಲಿ ಮೆರವಣಿಗೆ ನಡೆಯಲಿದೆ, ಅಲ್ಲದೆ ಇಪ್ಪತ್ತು ಸಾವಿರಕ್ಕೂ ಹೆಚ್ಚು ಜನರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿದ್ದು ಜಾತ್ಯತೀತವಾಗಿ ನಡೆಯುವ ಬಸವ ಜಯಂತಿ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸರ್ವ ಜನಾಂಗದವರು ಬಾಗಿಯಾಗುವಂತೆ ಪತ್ರಿಕಾಗೋಷ್ಠಿ ಯಲ್ಲಿ ತಿಳಿಸಿದರು. ಕಾರ್ಯಕ್ರಮದಲ್ಲಿ ತಾಲ್ಲೂಕಿನ ವಿವಿಧ ಮಠಾಧೀಶರು, ಹಾಲಿ ಶಾಸಕರು ಮತ್ತು ಮಾಜಿ ಶಾಸಕರು ಚಾಲನೆ ನೀಡಲಿದ್ದು ಎಸ್ ಎಸ್ ಎಲ್ ಸಿ ಮತ್ತು ದ್ವಿತೀಯ ಪಿಯುಸಿ ,ಹೆಚ್ಚು ಅಂಕ ಪಡೆದ 20 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದು ಎಂದರು

ಈ ಸಂದರ್ಭದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆ ತಾಲ್ಲೂಕು ಅಧ್ಯಕ್ಷ ಶಿವಪ್ರಕಾಶ್, ಯುವ ಘಟಕ ಅಧ್ಯಕ್ಷ ಗುರುಪ್ರಸಾದ್, ನಿರ್ದೇಶಕರಾದ ನಾಗೇಂದ್ರ ಮಾಡ್ರಹಳ್ಳಿ,, ಶಿವಮೂರ್ತಿಮಡಹಳ್ಳಿ , ನಂದೀಶ್ ಹೆಚ್ ಎಂ ಹಂಗಳ, ಮಲ್ಲಿಕಾರ್ಜನಸ್ವಾಮಿ (ಮಂಜು) ಪ್ರಣಯ್. ನಮೋ ಮಂಜು. ಸುಬ್ಬ. ಸೇರಿದಂತೆ ಮತ್ತಿತರರಿದ್ದರು.

## ರೈತನ ಮೇಲೆ ಹುಲಿ ದಾಳಿ ಯತ್ನ

ಚಾಮರಾಜನಗರ: ತಾಲೂಕಿನ ಬಾಗಳಿ ಗ್ರಾಮದ ಜಮೀನೊಂದಲ್ಲಿ ಹುಲಿ ರೈತನೊಬ್ಬನ ಮೇಲೆ ದಾಳಿ ನಡೆಸಲು ಮುಂದಾಗಿದ್ದು, ಅದೃಷ್ಟವಶಾತ್ ರೈತ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಬಾಗಳಿ ಗ್ರಾಮದ ನಿವಾಸಿ ಪುಟ್ಟಯ್ಯ ಅವರು ಬೆಳ್ಳಂಬೆಳಗ್ಗೆ ಜಮೀನಿನಲ್ಲಿ ಕೆಲಸ ಮಾಡುವ ವೇಳೆ ಹುಲಿಯೊಂದು ದಾಳಿ ನಡೆಸಲು ಮುಂದಾಗಿದೆ. ಈ ವೇಳೆ ರೈತ ಪುಟ್ಟಯ್ಯ ಗಾಬರಿಯಿಂದ ಎತ್ತಲೂ ಕದಲದೇ ಇದ್ದಾಗ, ಹುಲಿ ರೈತ ಪುಟ್ಟಯ್ಯ ಅವರಿಗೆ ಏನು ಮಾಡದೇ ಸಮೀಪದ ಕಬ್ಬಿನ ಗದ್ದೆಯತ್ತಾ ಹೋಗಿದೆ.

ಒತ್ತಾಯ: ಬಾಗಳಿ ಗ್ರಾಮದಲ್ಲಿ ಹುಲಿ ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರು ಹಾಗೂ ರೈತಾಪಿವರ್ಗ ಭಯಭೀತರಾಗಿದ್ದು, ಅರಣ್ಯ ಇಲಾಖೆಯವರು ತಕ್ಷಣ ಹುಲಿಯನ್ನು ಸೆರೆ ಹಿಡಿಯಬೇಕು ಎಂದು ಒತ್ತಾಯಿಸಿದ್ದಾರೆ.

## ವಿಜಯ್ ವಿಚಾರಣೆ ಆ.7ಕ್ಕೆ



ಚೆನ್ನೈ: ತಮಿಳುನಾಡು ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ಮತ್ತು ಅವರ ಪತ್ನಿ ಸಂಗೀತಾ ಅವರ ವಿಚ್ಛೇದನ ಅರ್ಜಿಯ ವಿಚಾರಣೆಯನ್ನು ಚೆಂಗಲ್ಪಟ್ಟು ನ್ಯಾಯಾಲಯವು ಆಗಸ್ಟ್ 7ಕ್ಕೆ ಮುಂದೂಡಿದೆ ಎಂದು ವರದಿಯಾಗಿದೆ. ಕಳೆದ ಫೆಬ್ರುವರಿಯಲ್ಲಿ ಸಂಗೀತಾ ಅವರು ವಿಜಯ್ ವಿರುದ್ಧ ಗಂಭೀರ ಆರೋಪಗಳನ್ನು ಹೊರಿಸಿ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದರು. ಆರಂಭದಲ್ಲಿ ಈ ಪ್ರಕರಣದ ವಿಚಾರಣೆ ಏಪ್ರಿಲ್ 20ಕ್ಕೆ ನಿಗದಿಯಾಗಿತ್ತು. ಆದರೆ ಆ ದಿನ ವಿಜಯ್ ಮತ್ತು ಸಂಗೀತಾ ಇಬ್ಬರೂ ನ್ಯಾಯಾಲಯಕ್ಕೆ ಹಾಜರಾಗದ ಹಿನ್ನೆಲೆಯಲ್ಲಿ, ಜೂನ್ 15ರಂದು ಖುದ್ದಾಗಿ ಹಾಜರಾಗುವಂತೆ ಚೆಂಗಲ್ಪಟ್ಟು ಕೌಟುಂಬಿಕ ನ್ಯಾಯಾಲಯವು ಆದೇಶಿಸಿತ್ತು.

# ನಾಲ್ವಡಿ ಕೃಷ್ಣರಾಜ ಒಡೆಯರ್ ಸ್ಮರಣೆ

## ಚಾಮರಾಜನಗರ: ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕಾರ್ಯಕ್ರಮ

ಚಾಮರಾಜನಗರದ ಕನ್ನಡ ಸಾಹಿತ್ಯ ಪರಿಷತ್ತಿನ ಕಚೇರಿಯಲ್ಲಿ ಶ್ರೀಗಂಧ ಕನ್ನಡ ಯುವ ವೇದಿಕೆ ಹಾಗೂ ಗಡಿನಾಡು ಕನ್ನಡ ಹೋರಾಟ ವೇದಿಕೆಯ ಸಂಯುಕ್ತಾಶ್ರಯದಲ್ಲಿ ಮೈಸೂರು ಸಂಸ್ಥಾನದ ಮಹಾರಾಜರಾದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸ್ಮರಣೆ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಪ್ರಮುಖ ಉದ್ಯಮಿ ಶ್ರೀನಿಧಿ ಕುದರ್ ಅವರು, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಭಾರತದ ಮೀಸಲಾತಿಯ ಜನಕರಾಗಿದ್ದರು ಎಂದು ಬಣ್ಣಿಸಿದರು. ದೇಶದ ಇತಿಹಾಸದಲ್ಲೇ ಮೊಟ್ಟಮೊದಲ ಬಾರಿಗೆ ಮೈಸೂರು ರಾಜ್ಯದಲ್ಲಿ ಜಾತಿ ಆಧಾರಿತ ಮೀಸಲಾತಿಯನ್ನು ಜಾರಿಗೆ ತಂದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ ಎಂದು ಅವರು ಹೆಮ್ಮೆಯಿಂದ ನುಡಿದರು.

### ಸಾಮಾಜಿಕ ನ್ಯಾಯ ಮತ್ತು ಸುವರ್ಣಯುಗದ ನಿರ್ಮಾಪಕ

ಮೈಸೂರು ಸಂಸ್ಥಾನದ 24ನೇ ರಾಜರಾಗಿ 1902 ರಿಂದ 1940ರ ವರೆಗೆ ಆಡಳಿತ ನಡೆಸಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಒಬ್ಬ ಅತ್ಯಂತ ಸಮರ್ಥ ಹಾಗೂ ದೂರದೃಷ್ಟಿಯುಳ್ಳ ಆಡಳಿತಗಾರರಾಗಿದ್ದರು. ಅವರ ಆಡಳಿತಾವಧಿಯು ಮೈಸೂರು ರಾಜ್ಯದ 'ಸುವರ್ಣಯುಗ' ಎಂದೇ ಪ್ರಸಿದ್ಧಿಯಾಗಿದೆ. ಶಿಕ್ಷಣ, ಕೈಗಾರಿಕೆ, ನೀರಾವರಿ ಹಾಗೂ ಸಾಮಾಜಿಕ ನ್ಯಾಯದ ಕ್ಷೇತ್ರಗಳಲ್ಲಿ ಅವರು ನೀಡಿದ ಕೊಡುಗೆಗಳು ಇಂದಿಗೂ ಮಾದರಿಯಾಗಿವೆ. ಹಿಂದುಳಿದ ವರ್ಗಗಳಿಗೆ ಸರ್ಕಾರಿ ಉದ್ಯೋಗಗಳಲ್ಲಿ ಸೂಕ್ತ ಪ್ರಾತಿನಿಧ್ಯ ಕಲ್ಪಿಸುವ ಉದ್ದೇಶದಿಂದ 1918ರಲ್ಲಿ 'ಸರ್ ಲೆಸ್ಲಿ ಮಿಲ್ಲರ್ ಸಮಿತಿ'ಯನ್ನು ರಚಿಸುವ ಮೂಲಕ ಭಾರತದಲ್ಲೇ ಸಾಮಾಜಿಕ ಮೀಸಲಾತಿಗೆ ಅವರು ಗಟ್ಟಿ ಅಡಿಪಾಯ ಹಾಕಿದರು. ಇದರೊಂದಿಗೆ ಏಷ್ಯಾದಲ್ಲೇ ಮೊಟ್ಟಮೊದಲ ಬಾರಿಗೆ 1902ರಲ್ಲಿ ಶಿವನಸಮುದ್ರದಲ್ಲಿ ಜಲವಿದ್ಯುತ್ ಯೋಜನೆಯನ್ನು ಆರಂಭಿಸಿ ಕೋಲಾರದ ಚಿನ್ನದ ಗಣಿಗಳಿಗೆ ವಿದ್ಯುತ್ ಪೂರೈಸಿದ ಹೆಗ್ಗಳಿಕೆಯೂ ಅವರದ್ದಾಗಿದೆ. ಕಾವೇರಿ ನದಿಗೆ ಕನ್ನಂಬಾಡಿಯಲ್ಲಿ ಕೃಷ್ಣರಾಜ ಸಾಗರ (ಕೆಆರ್‌ಎಸ್) ಅಣೆಕಟ್ಟನ್ನು ನಿರ್ಮಿಸಿ ರೈತರ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಿದ ಮಹಾ ಮಾನವತಾವಾದಿ ಅವರಾಗಿದ್ದಾರೆ ಎಂದು ಶ್ರೀನಿಧಿ ಕುದರ್ ನೆನೆದರು.




### ಮೈಸೂರು ರಾಜಮನೆತನದ ನಂಟು, ಪ್ರಶಸ್ತಿಗಳಿಗೆ ಒತ್ತಾಯ

**ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅಖಿಲ ಕರ್ನಾಟಕ ಕನ್ನಡ ಮಹಾಸಭಾದ ಅಧ್ಯಕ್ಷರಾದ ಚಾ.ರಂ. ಶ್ರೀನಿವಾಸಗೌಡ ಅವರು, ಮೈಸೂರು ರಾಜಮನೆತನಕ್ಕೂ ಮತ್ತು ಚಾಮರಾಜನಗರಕ್ಕೂ ಒಂದು ಅವಿನಾಭಾವ ಸಂಬಂಧವಿದೆ ಎಂದರು. ನಗರದ ಐತಿಹಾಸಿಕ ಶ್ರೀ ಚಾಮರಾಜೇಶ್ವರ ದೇವಸ್ಥಾನವು ನಿರ್ಮಾಣಗೊಂಡು ಈ ವರ್ಷಕ್ಕೆ ಭರ್ತಿ 200 ವರ್ಷಗಳು ತುಂಬುತ್ತಿದ್ದು, ಈ ಭವ್ಯ ದೇವಸ್ಥಾನವನ್ನು ನಾಲ್ವಡಿಯವರ ತಾತ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಕಟ್ಟಿಸಿದ್ದರು ಎಂಬುದನ್ನು ನೆನಪಿಸಿದರು.**

**ಮೈಸೂರು ರಾಜರ ಪರಂಪರೆಯಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್, ನಾಲ್ವಡಿ ಕೃಷ್ಣರಾಜ ಒಡೆಯರ್, ರಣಧೀರ ಕಂಠೀರವ ಹಾಗೂ ಮೈಸೂರಿನಲ್ಲಿ ದಸರಾ ಮಹೋತ್ಸವವನ್ನು ಆರಂಭಿಸಿದ ರಾಜ ಒಡೆಯರ್ ಅವರು ಅತ್ಯಂತ ಪ್ರಖ್ಯಾತಿ ಪಡೆದಿದ್ದಾರೆ. ಆದ್ದರಿಂದ ಇಂತಹ ಮಹನೀಯರ ಹೆಸರಿನಲ್ಲಿ ಸರ್ಕಾರಗಳು ಸಾರ್ವಜನಿಕ ಸೇವೆಗಾಗಿ ರಾಜ್ಯಮಟ್ಟದ ಪ್ರಶಸ್ತಿಗಳನ್ನು ಸ್ಥಾಪಿಸಿ ನೀಡಬೇಕು ಎಂದು ಅವರು ಈ ಸಂದರ್ಭದಲ್ಲಿ ಬಲವಾಗಿ ಒತ್ತಾಯಿಸಿದರು.**

### ಸಮಾಜ ಸುಧಾರಣೆ ಮತ್ತು ಗಣ್ಯರ ಉಪಸ್ಥಿತಿ

ಕಾರ್ಯಕ್ರಮದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಸುರೇಶ್ ಋದ್ವೀದಿ ಅವರು ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಕೇವಲ ಆಡಳಿತಗಾರರಷ್ಟೇ ಅಲ್ಲದೆ ಶಿಕ್ಷಣ, ಮಹಿಳಾ ಮೀಸಲಾತಿ, ನೀರಾವರಿ ಹಾಗೂ ಬಾಲ್ಯ ವಿವಾಹ ಪದ್ಧತಿಯ ನಿಷೇಧದಂತಹ ಪ್ರಮುಖ ಸಾಮಾಜಿಕ ಸುಧಾರಣಾ ಕ್ಷೇತ್ರಗಳಲ್ಲೂ ಅದ್ಭುತ ಸೇವೆ ಸಲ್ಲಿಸಿದ್ದಾರೆ. ಇಂತಹ ಮಹಾನ್ ಚೇತನವನ್ನು ಸದಾ ಸ್ಮರಿಸಿಕೊಳ್ಳುವುದು ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯವಾಗಿದೆ ಎಂದರು. ಆರಂಭದಲ್ಲಿ ಶ್ರೀಗಂಧ ಕನ್ನಡ ಯುವವೇದಿಕೆಯ ಅಧ್ಯಕ್ಷರಾದ ರವಿಚಂದ್ರಪ್ರಸಾದ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಗಡಿನಾಡು ಕನ್ನಡ ಹೋರಾಟ ವೇದಿಕೆಯ ಅಧ್ಯಕ್ಷ ರಾಚಪ್ಪ, ಅಖಿಲ ಕರ್ನಾಟಕ ಕನ್ನಡ ಮಹಾಸಭಾದ ಗೌರವಾಧ್ಯಕ್ಷ ಶಾ.ಮುರಳಿ, ಸಹ ಕಾರ್ಯದರ್ಶಿ ಪಣ್ಯದಹುಂಡಿ ರಾಜು, ಪ್ರಾಂಶುಪಾಲ ಸಿ.ರಂಗಸ್ವಾಮಿ ಹಾಗೂ ಕುವೆಂಪು ಕನ್ನಡ ಕಲಾವೇದಿಕೆ ಅಧ್ಯಕ್ಷ ಲಿಂಗರಾಜು ಸೇರಿದಂತೆ ಹಲವು ಪ್ರಮುಖರು ಉಪಸ್ಥಿತರಿದ್ದರು.

## ಕಡಗದಾಳು ಶಾಲೆಗೆ ಡಿಸಿ ಭೇಟಿ



ಮಡಿಕೇರಿ:-ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅವರು ಕಡಗದಾಳು ಸರ್ಕಾರಿ ಪ್ರೌಢಶಾಲೆಗೆ ಸೋಮವಾರ ಭೇಟಿ ನೀಡಿ ಪರಿಶೀಲಿಸಿದರು.

ಮುಖ್ಯೋಪಾಧ್ಯಾಯರು ಹಾಗೂ ಸಹಶಿಕ್ಷಕರ ಹಾಜರಾತಿ, ಶಾಲಾ ಮಕ್ಕಳ ಹಾಜರಾತಿ, ಬಿಸಿಯೂಟ, ಅಡುಗೆ ಕೋಣೆ, ಗಣಕಯಂತ್ರ ಕೊಠಡಿ ವೀಕ್ಷಣೆ, ಗ್ರಂಥಾಲಯ, ಕುಡಿಯುವ ನೀರು ಪೂರೈಕೆ, ಮತ್ತಿತರ ಬಗ್ಗೆ ಮಾಹಿತಿ ಪಡೆದ ಜಿಲ್ಲಾಧಿಕಾರಿ ಅವರು ಇಲ್ಲಿನ ವ್ಯವಸ್ಥೆ ಗಮನಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಕಡಗದಾಳು ಶಾಲೆಯು ಎಸ್‌ಎಸ್‌ಎಲ್‌ಸಿ ಯಲ್ಲಿ ಶೇ.100 ರಷ್ಟು ಫಲಿತಾಂಶ ಪಡೆಯುತ್ತಿದ್ದು, ಶಾಲಾ ದಾಖಲಾತಿ ಹೆಚ್ಚಿಸಲು ಮತ್ತಷ್ಟು ಪ್ರಯತ್ನಗಳು ನಡೆಯಬೇಕು ಎಂದು ಹೇಳಿದರು.

ಸುತ್ತಮುತ್ತಲಿನ ಎಲ್ಲಾ ಮಕ್ಕಳು ಶಾಲೆಗೆ ಸೇರಿ ಶಿಕ್ಷಣ ಪಡೆಯುವಂತಾಗಬೇಕು. ಆ ನಿಟ್ಟಿನಲ್ಲಿ ಶಾಲಾ ದಾಖಲಾತಿ ಹೆಚ್ಚಳಕ್ಕೆ ಶ್ರಮಿಸುವಂತೆ ಮುಖ್ಯ ಶಿಕ್ಷಕರು ಹಾಗು ಸಹಶಿಕ್ಷಕರಿಗೆ ಸಲಹೆ ಮಾಡಿದರು.

ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರಾದ ಬಸವರಾಜು ಅವರು ಎಸ್‌ಎಸ್‌ಎಲ್‌ಸಿ ಯಲ್ಲಿ ಕಡಗದಾಳು ಶಾಲೆ ಶೇ.100 ರಷ್ಟು ಫಲಿತಾಂಶ ಪಡೆಯುತ್ತಿದ್ದು, ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ಗುಣಾತ್ಮಕ ಕಲಿಕೆಗೆ ಒತ್ತು ನೀಡಲಾಗಿದೆ ಎಂದು ಹೇಳಿದರು. ಕಡಗದಾಳು ಶಾಲೆಯ ಮುಖ್ಯೋಪಾಧ್ಯಾಯರಾದ ಡೈಸಿ, ಸಹ ಶಿಕ್ಷಕರು ಇತರರು ಇದ್ದರು.

## ಸಮರ್ಪಕ ವಿದ್ಯುತ್ ಪೂರೈಕೆ ಮಾಡುವಂತೆ ಒತ್ತಾಯಿಸಿ ಮನವಿ



ಚಾಮರಾಜನಗರ, ತಾಲೂಕಿನ ಬಡಗಲಪುರ, ಲಕ್ಷ್ಮೀಪುರ, ಸಾಣೇಗಾಲ,ಬೊಕ್ಕೇ

ಪುರ, ಮಹದೇಶ್ವರ ಕಾಲೋನಿಯ ಭಾಗಕ್ಕೆ ಲೈನ್ ಮ್ಯಾನ್ ನೇಮಕ ಮಾಡಿ ಸಮರ್ಪಕ ವಿದ್ಯುತ್ ಪೂರೈಕೆ ಮಾಡಬೇಕು ಎಂದು ಒತ್ತಾಯಿಸಿ ಗ್ರಾಮದ ರೈತರು ಹರದನಹಳ್ಳಿಯ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಉಪ ವಿಭಾಗಕ್ಕೆ ತೆರಳಿ ಜೆಇ ಪ್ರದೀಪ್ ಅವರಿಗೆ ಮನವಿ ಸಲ್ಲಿಸಿದರು.

ನಮ್ಮ ಗ್ರಾಮಗಳಿಗೆ ವಿದ್ಯುತ್ ಅಸಮರ್ಪಕ ಸರಬರಾಜಿನಿಂದ ರೈತರ ಬದುಕು ದುಸ್ತರವಾಗಿದ್ದು, ಅಲ್ಲದೇ ವಿದ್ಯಾರ್ಥಿಗಳು, ಸಾರ್ವಜನಿಕರು ಪರದಾಡುವಂತಾಗಿದೆ. ಕೂಡಲೇ ಲೈನ್ ಮ್ಯಾನ್ ನೇಮಕಮಾಡಿ ನಮ್ಮ ಗ್ರಾಮಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆ ಮಾಡಬೇಕು ಇಲ್ಲದಿದ್ದರೆ ಗ್ರಾಮಸ್ಥರೊಂದಿಗೆ ನಿಮ್ಮ ಕಚೇರಿಗೆ ಮುತ್ತಿಗೆಹಾಕಿ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಜೆಇ ಗೆ ಗ್ರಾಮಸ್ಥರುಸಲ್ಲಿಸಿರುವ ಮನವಿಯಲ್ಲಿ ರೈತ ಮುಖಂಡರು ಎಚ್ಚರಿಸಿದರು.

ಈ ಸಂದರ್ಭದಲ್ಲಿ ರಾಘು,ರವಿ, ಕುಮಾರ್ ,ದೊಡ್ಡಮಾದೇಗೌಡ,ಸುದಿ, ಸಿದ್ದರಾಜು, ರಾಜೇಶ್, ನಾಗರಾಜು, ಗುರುಸ್ವಾಮಿ, ಬಿಂದುದಾಸ್, ನಾಗೇಶ್, ಕಿರಣ್,ಸಿದ್ದೇಗೌಡ,ನೀಲಕಂಠ,ಮುತ್ತುರಾಜು, ಮಹೇಶ್, ಮಂಜುನಾಥ್, ಮಹೇಶ್ ಇತರರು ಹಾಜರಿದ್ದರು

**ಸುಮಾರು 45 ಕೋಟಿ ರೂ ವೆಚ್ಚದಲ್ಲಿ ವಿವಿಧ ಕಾಮಗಾರಿ; ಎ.ಎಸ್.ಪೊನ್ನಣ್ಣ**

# ವಿ.ಬಾಡಗ ಗ್ರಾಮದಲ್ಲಿ ಕ್ರೀಡಾ ತರಬೇತಿ ಕೇಂದ್ರ, ವಸತಿ ನಿಲಯ ನಿರ್ಮಾಣ

ಮಡಿಕೇರಿ ಜೂ.15(ಕರ್ನಾಟಕ ವಾರ್ತೆ):-ವಿರಾಜಪೇಟೆ ತಾಲ್ಲೂಕಿನ ವಿ.ಬಾಡಗ ಬಳಿ ನಿರ್ಮಾಣವಾಗುತ್ತಿರುವ 'ಕ್ರೀಡಾ ತರಬೇತಿ ಕೇಂದ್ರ'ದ ಆಡಳಿತ ಕಟ್ಟಡ ಕಾಮಗಾರಿಯನ್ನು ಶಾಸಕರಾದ ಎ.ಎಸ್.ಪೊನ್ನಣ್ಣ ಅವರು ಸೋಮವಾರ ಭೇಟಿ ನೀಡಿ ಪರಿಶೀಲಿಸಿದರು.

ಸುಮಾರು 11 ಎಕರೆ ಜಾಗದಲ್ಲಿ ಅಥ್ಲೆಟಿಕ್ ಮಾದರಿಯಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿರುವ ಕ್ರೀಡಾ ತರಬೇತಿ ಕೇಂದ್ರದ ಆಡಳಿತ ಭವನ ಜತೆಗೆ ಇತರೆ ಕಾಮಗಾರಿಯ ಜಾಗವನ್ನು ಶಾಸಕರು ವೀಕ್ಷಿಸಿದರು.

ಸುಮಾರು 45 ಕೋಟಿ ರೂ. ಯೋಜನಾ ವೆಚ್ಚದಲ್ಲಿ ಕ್ರೀಡಾ ತರಬೇತಿ ಕೇಂದ್ರ ಹಾಗೂ ವಸತಿ ನಿಲಯ ಸೇರಿದಂತೆ ವಿವಿಧ ಕಾಮಗಾರಿ ಕೈಗೊಳ್ಳಲು ಉದ್ದೇಶಿಸಲಾಗಿದೆ. ಕ್ರೀಡಾ ತರಬೇತಿ ಕೇಂದ್ರ ವ್ಯಾಪ್ತಿಯಲ್ಲಿ ಪ್ರಥಮ ಹಂತದಲ್ಲಿ 2 ಕೋಟಿ ರೂ. ವೆಚ್ಚದಲ್ಲಿ ಆಡಳಿತ ಭವನ ನಿರ್ಮಾಣವಾಗುತ್ತಿದ್ದು, ಈ ಕಾಮಗಾರಿಯನ್ನು ಶಾಸಕರು ಪರಿಶೀಲಿಸಿದರು. ಆಡಳಿತ ಭವನದಲ್ಲಿ ನೆಲಮಹಡಿ ಹಾಗೂ ಮೊದಲ ಮಹಡಿ ಇರಲಿದ್ದು, ಒಳಾಂಗಣ



ಮತ್ತು ಹೊರಾಂಗಣ ಕ್ರೀಡಾ ತರಬೇತಿ ಕೇಂದ್ರಗಳು ನಿರ್ಮಾಣವಾಗಲಿದೆ. ಒಳಾಂಗಣದಲ್ಲಿ ಶೆಟಲ್ ಬ್ಯಾಡಿಮಿಂಟನ್, ಟೇಬಲ್ ಟೆನ್ನಿಸ್, ಸ್ಕ್ವಾಷ್, ಜಿಮ್ನ್ಮ, ಹೊರಾಂಗಣದಲ್ಲಿ ಹಾಕಿ ಟರ್ಫ್, ಈಜುಕೊಳ, ಕ್ರಿಕೆಟ್, ವಾಲಿಬಾಲ್, ಫೂಟ್ ಬಾಲ್ ಹೀಗೆ ವಿವಿಧ ರೀತಿಯ ಕ್ರೀಡೆಗೆ ಸಂಬಂಧಿಸಿದಂತೆ ಕ್ರೀಡಾ ತರಬೇತಿ ಕೇಂದ್ರ ಒಳಗೊಂಡಿದೆ. ಆಡಳಿತ ಭವನ ನಿರ್ಮಾಣದಲ್ಲಿ ನೆಲ ಮಹಡಿ ಮತ್ತು ಮೊದಲ ಮಹಡಿಯಲ್ಲಿ ಕಚೇರಿ ಜೊತೆಗೆ ಒಳಾಂಗಣ ಕ್ರೀಡಾ ಚಟುವಟಿಕೆಯ ತರಬೇತಿ ಕೇಂದ್ರಗಳು ನಿರ್ಮಾಣವಾಗಲಿದೆ.

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಶಾಸಕರಾದ ಎ.ಎಸ್.ಪೊನ್ನಣ್ಣ ಅವರು ಕ್ರೀಡಾ ತರಬೇತಿ ಕೇಂದ್ರ ಸ್ಥಾಪನೆಗೆ ಯೋಜನೆ ರೂಪಿಸಲಾಗಿದ್ದು, ಕಾಮಗಾರಿ ಪ್ರಗತಿ ಹಂತದಲ್ಲಿದೆ. ಟೆನ್ನಿಸ್, ಜಿಮ್ನ್ಮ, ಹಾಕಿ ಟರ್ಫ್, ಅಥ್ಲೆಟಿಕ್ ಟ್ರ್ಯಾಕ್, ಈಜುಕೊಳ, ಟೇಬಲ್ ಟೆನ್ನಿಸ್, ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕ ವಿದ್ಯಾರ್ಥಿ ನಿಲಯ, ವೈದ್ಯಕೀಯ ವಿಭಾಗ ಸೇರಿದಂತೆ ಒಂದು ಸುಸಜ್ಜಿತ ಅಂತರರಾಷ್ಟ್ರೀಯ ಮಾದರಿಯಲ್ಲಿ ಕ್ರೀಡಾ ತರಬೇತಿ ಕೇಂದ್ರ ಹಾಗೂ ವಸತಿ ನಿಲಯ ಕಾಮಗಾರಿಗಳು ಹಂತ ಹಂತವಾಗಿ ನಿರ್ಮಾಣಗೊಳ್ಳಲಿದೆ ಎಂದರು.

**ಕಾಡು ಪ್ರಾಣಿಗಳ ಹಾವಳಿ ನಿಯಂತ್ರಣ ಪ್ರತಿಯೊಬ್ಬರ ಜವಾಬ್ದಾರಿ:** ಕಾಡಾನೆ ಹಾವಳಿ ನಿಯಂತ್ರಣ ಸಂಬಂಧ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಶಾಸಕರಾದ ಎ.ಎಸ್.ಪೊನ್ನಣ ಅವರು ಕಾಡಾನೆ ಹಾವಳಿ ಹಲವು ವರ್ಷಗಳಿಂದ ಸಮಸ್ಯೆಯಾಗಿ ಉಳಿದಿದ್ದು, ಕಾಡಾನೆಗಳ ಸಂಖ್ಯೆ ಹೆಚ್ಚಾಗಿದ್ದು, ಆ ನಿಟ್ಟಿನಲ್ಲಿ ಕಾಡಾನೆ ಹಾವಳಿ ನಿಯಂತ್ರಣಕ್ಕೆ ಪ್ರತಿಯೊಬ್ಬರ ಜವಾಬ್ದಾರಿ ಇದೆ ಎಂದರು. ವರ್ಷದಿಂದ ವರ್ಷಕ್ಕೆ ಕಾಡಾನೆಗಳ ಸಂಖ್ಯೆ ಹೆಚ್ಚಾಗುತ್ತಿದೆ. ಈ ಕಾಡಾನೆಗಳ ನಿಯಂತ್ರಣ ಸಂಬಂಧ ಹಲವು ಯೋಜನೆ ರೂಪಿಸಲಾಗಿದೆ. ಆನೆಕಂದಕ, ತಂತಿಬೇಲಿ, ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಹೀಗೆ ಹಲವು ಕ್ರಮ ಕೈಗೊಳ್ಳಲಾಗಿದೆ. ಇದಕ್ಕೆ ಶಾಶ್ವತ ಪರಿಹಾರ ಒದಗಿಸಬೇಕಿದ್ದು, ಪಕ್ಷಾತೀತವಾಗಿ ಎಲ್ಲರೂ ಜೊತೆಗೂಡಿ ಕಾರ್ಯಕ್ರಮ ರೂಪಿಸಬೇಕಿದೆ ಎಂದರು. ರಸ್ತೆ ಕಾಮಗಾರಿ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಶಾಸಕರು ಹಣ ನೀಡಿದರೂ ಸಹ ಟಾರು ಸಿಗುತ್ತಿಲ್ಲ. ಯುದ್ಧದಿಂದಾಗಿ ಜನರು ತತ್ತರಿಸುವಂತಾಗಿದೆ. ಇಂಧನ ಸರಿಯಾಗಿ ಪೂರೈಕೆಯಾಗುತ್ತಿಲ್ಲ. ವ್ಯವಸಾಯ ಆಧಾರಿತ ಜಿಲ್ಲೆಯಾದ ಕೊಡಗು ಟ್ರ್ಯಾಕ್ಟರ್ ಮತ್ತು ಟಿಲ್ಲರ್‌ಗಳಿಗೆ ಇಂಧನ ಸಿಗದೆ ತೊಂದರೆ ಅನುಭವಿಸುವಂತಾಗಿದೆ ಎಂದರು.

ಗ್ಯಾರಂಟಿ ಯೋಜನಾ ಅನುಷ್ಠಾನ ಸಮಿತಿ ತಾಲ್ಲೂಕು ಘಟಕದ ಅಧ್ಯಕ್ಷರಾದ ಕಾಳೇಮಾಡ ಪ್ರಶಾಂತ್, ಸ್ಥಳೀಯರಾದ ಕಂಜಿತಂಡ ಗಣಿ ಮೊಣ್ಣಪ್ಪ, ಕಂಜಿತಂಡ ಪೂವಣ್ಣ, ಕೊಂಗಂಡ ಕಾಶಿ ಕಾವೇರಪ್ಪ, ಕೊಲ್ಲೀರ ಬೋಪಣ್ಣ, ಉಮೇಶ್ ಕೇಚಮಯ್ಯ, ಗಿರೀಶ್ ಸುಂದರ, ಕೋಲತಂಡ ರಘು ಮಾಚಯ್ಯ, ಸೂರಜ್ ಹೊಸೂರು, ಕೇಚಮಾಡ ಸಿದ್ದು ನಾಚಪ್ಪ, ಭಟ್ಟಕಾಳಂಡ ರಾಜ ಇತರರು ಇದ್ದರು.

## ಸಂಕ್ಷಿಪ್ತ ಸುದ್ದಿ

### ವಿಶ್ವ ಹಿರಿಯರ ಮೇಲಿನ ದೌರ್ಜನ್ಯ ಜಾಗೃತಿ ದಿನ ಸಂಪನ್ನ



**ರಾಮನಗರ:** ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ನಂದಗೋಕುಲ ವೃದ್ಧಾಶ್ರಮದ ವತಿಯಿಂದ ಜೂ.15ರ ಸೋಮವಾರ ನಗರದ ನಂದಗೋಕುಲ ವೃದ್ಧಾಶ್ರಮದಲ್ಲಿ ವಿಶ್ವ ಹಿರಿಯರ ಮೇಲಿನ ದೌರ್ಜನ್ಯ ಜಾಗೃತಿ ದಿನವನ್ನು ಆಚರಿಸಲಾಯಿತು.

ಈ ಸಂದರ್ಭದಲ್ಲಿ ನಂದಗೋಕುಲ ವೃದ್ಧಾಶ್ರಮದ ಸಂಸ್ಥಾಪಕರಾದ ಡಾ. ಎನ್.ವಿ. ಲೋಕೇಶ್, ಅರೆಕಾಲಿಕ ಕಾನೂನು ಸ್ವಯಂ ಸೇವಕರಾದ ರಾಜೇಶ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವಕೀಲರಾದ ಎಚ್.ಡಿ. ಗೀತಾ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಆಡಳಿತ ಸಹಾಯಕರಾದ ದಿನೇಶ್, ಸಮಾಜ ಸೇವಕರಾದ ವೆಂಕಟಾಚಲ ಸೇರಿದಂತೆ ಇತರರು ಉಪಸ್ಥಿತರಿದ್ದರು.

### ವ್ಯಕ್ತಿ ಪತ್ತೆಗೆ ಮನವಿ



**ರಾಮನಗರ:** ಇಲ್ಲಿನ ವಿಜಯನಗರದ ಕಾಳಿಕಾಂಬ ದೇವಸ್ಥಾನದ ಮುಂಭಾಗದ ರಸ್ತೆಯ ನಿವಾಸಿ ಕಾರ್ತಿಕ್ (27 ವರ್ಷ) ಕಾಣೆಯಾಗಿದ್ದಾರೆ ಎಂದು ಪೊಲೀಸ್ ಠಾಣೆಗೆ ದೂರು ದಾಖಲಾಗಿದೆ.

**ಚಹರೆಯ ವಿವರ:–** ಸಾಧಾರಣ ಶರೀರ, ದುಂಡು ಮುಖ, ಗೋಧಿ ಮೈಬಣ್ಣ, 5.6 ಅಡಿ ಎತ್ತರ, ಕನ್ನಡಕ ಧರಿಸುತ್ತಾರೆ. ಇವರು ಕಾಣೆಯಾಗುವಾಗ ಬಿಳಿ ಬಣ್ಣದ ತುಂಬು ತೋಳಿನ ಶರ್ಟ್ ಹಾಗೂ ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಧರಿಸಿರುತ್ತಾರೆ. ಇವರು ಕಂಡು ಬಂದರೆ ಆರಕ್ಷಕ ಉಪ ನಿರೀಕ್ಷಕರು, ರಾಮನಗರ ಪುರ ಪೊಲೀಸ್ ಠಾಣೆ, ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆ. ಇವರನ್ನು ಸಂಪರ್ಕಿಸುವಂತೆ ಕೋರಲಾಗಿದೆ.

## ಕಾವೇರಿ ನದಿಗೆ ತ್ಯಾಜ್ಯ ನೀರು ಸೇರಿಸಬೇಡಿ : ಡಿಸಿ ಕುಮಾರ

# ಕುಡಿಯುವ ನೀರು ಕಲುಷಿತವಾಗದಂತೆ ಅಗತ್ಯ ಕ್ರಮವಹಿಸಿ

**ಮಂಡ್ಯ:** ಮೈಸೂರು ನಗರ ಪಾಲಿಕೆ ವ್ಯಾಪ್ತಿಯ ಕೈಗಾರಿಕೆಗಳು ಹಾಗೂ ಮೂಡಾ ವ್ಯಾಪ್ತಿಯ ಒಳಚರಂಡಿ ತ್ಯಾಜ್ಯ ನೀರು ಕಾವೇರಿ ನದಿಗೆ ವಿಲೀನವಾಗದಂತೆ ಅಧಿಕಾರಿಗಳು ಕ್ರಮ ವಹಿಸಬೇಕು ಹಾಗೂ ಕುಡಿಯುವ ನೀರು ಕಲುಷಿತವಾಗದಂತೆ ಅಗತ್ಯ ಕ್ರಮ ವಹಿಸಿ ಎಂದು ಜಿಲ್ಲಾಧಿಕಾರಿಗಳಾದ ಡಾ. ಕುಮಾರ ರವರು ತಿಳಿಸಿದರು.



ಸೋಮವಾರ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ನಡೆದ ಮೈಸೂರು ನಗರ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುತ್ತಿರುವ ತ್ಯಾಜ್ಯ ನೀರು ಕಾವೇರಿ ನದಿ ಮತ್ತು ಕಾಲುವೆಗೆ ನೇರವಾಗಿ ಬಿಡುತ್ತಿರುವದನ್ನು ಸ್ಥಗಿತಗೊಳಿಸುವ ಸಂಬಂಧ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮೈಸೂರು ನಗರದ ಕಾರ್ಖಾನೆಗಳಿಂದ ಬರುವ ತ್ಯಾಜ್ಯ ನೀರು ಹಳ್ಳದ ಮೂಲಕ ಕಳಸ್ತವಾಡಿ ಗ್ರಾಮದ ವಿರಿಜಾ ನಾಲೆ ಮತ್ತು ಕೆಸರೆ ಗ್ರಾಮದ ದೇವರಾಯ ನಾಲೆಗೆ ಕಲುಷಿತ ನೀರು ನೇರವಾಗಿ ನಾಲೆಗಳಿಗೆ ಹರಿದು ಬರುತ್ತಿದ್ದು ನಾಲೆಗಳ ಮೂಲಕ ಶ್ರೀರಂಗಪಟ್ಟಣ ವ್ಯಾಪ್ತಿಯ ಗಂಜಾಂ ಕುಡಿಯುವ ನೀರು ಸರಬರಾಜು ಮಾಡುವ ಖಃಔಖಿಂಏಇ ಘಇಐಐ ಬಳಿಯ ಕಾವೇರಿ ನದಿಗೆ ಸೇರಿ ಕಾವೇರಿ ನದಿಯ ಕುಡಿಯುವ ನೀರು ವಿಲೀನವಾಗುತ್ತಿದೆ ಆದ್ದರಿಂದ ತ್ಯಾಜ್ಯ ನೀರು ಕಾವೇರಿ ನದಿಗೆ ಹಾಗೂ ನಾಲೆಗಳಿಗೆ ಹರಿದು ಕಲುಷಿತವಗದಂತೆ ಅಧಿಕಾರಿಗಳು ಕ್ರಮ ವಹಿಸಬೇಕು ಎಂದರು.

ಶ್ರೀ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಅಧ್ಯಕ್ಷರು ಹಾಗೂ ಶ್ರೀರಂಗಪಟ್ಟಣ ವಿಧಾನಸಭಾ ಶಾಸಕ ಎ.ಬಿ ರಮೇಶ ಬಂಡಿಸಿದ್ದೇಗೌಡ ರವರು ಮಾತನಾಡಿ ಕುಡಿಯುವ ನೀರು ಕಲುಷಿತವಾಗದಂತೆ ಕ್ರಮವಹಿಸಬೇಕು ಹಾಗೂ ನೀರಿನ ಗುಣಮಟ್ಟವನ್ನು ಪರಿಶೀಲನೆ ಮಾಡಬೇಕು. ಮಳೆಗಾಲದಲ್ಲಿ ಹಳ್ಳಕೊಳ್ಳಗಳ ಮೂಲಕ ತ್ಯಾಜ್ಯ ನೀರು ಕಾವೇರಿ ನದಿಗೆ ವಿಲೀನವಾಗದಂತೆ ಅಗತ್ಯ ಕ್ರಮವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಅಪರ ಪೊಲೀಸ್ ವರಿಷ್ಠಾಧಿಕಾರಿಗಳಾದ ತಿಮ್ಮಯ್ಯ, ಶ್ರೀರಂಗಪಟ್ಟಣ ತಹಸೀಲ್ದಾರ್ ರಾದ ಚೇತನಾ ಯಾದವ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾಧಿಕಾರಿಗಳಾದ ಟಿ. ಎನ್. ನರಸಿಂಹಮೂರ್ತಿ, ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕರಾದ ರಾಘವೇಂದ್ರ, ಅಗ್ನಿ ಶಾಮಕದಳದ ಅಧಿಕಾರಿಗಳಾದ ರಾಘವೇಂದ್ರ, ಜಲಸಂಪನ್ಮೂಲ ಇಲಾಖೆಯ ಅಭಿಯಂತರರಾದ ಮೇಘನಾ, ಪರಿಸರ ಇಲಾಖೆಯ ಅಧಿಕಾರಿ ಕೆಂಪೇಗೌಡ ರವರು ಉಪಸ್ಥಿತರಿದ್ದರು.

# ಜಮೀನು ಸ್ವಾಧೀನಕ್ಕೆ ಅಡ್ಡಿ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹ




**ಮಂಡ್ಯ:** ನಾಗಮಂಗಲ ತಾಲೂಕಿನ ಕಬ್ಬಿನಕೆರೆ ಗ್ರಾಮದ ಪರಿಶಿಷ್ಟ ಜನಾಂಗದ ಕುಟುಂಬಗಳಿಗೆ ಮಂಜೂರಾಗಿರುವ ಜಮೀನಿನ ಸ್ವಾಧೀನಕ್ಕೆ ಅಡ್ಡಿಪಡಿಸಿದವರ ವಿರುದ್ಧ ಕ್ರಮ ಕೈಗೊಳ್ಳದೇ ಕರ್ತವ್ಯ ಲೋಪ ಎಸಗಿರುವ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಭೀಮವಾದ) ರಾಜ್ಯ ಸಂಘಟನಾ ಕಾರ್ಯದರ್ಶಿ ಕೆ.ಎಂ.ಶ್ರೀನಿವಾಸ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಬ್ಬಿನಕೆರೆ ಗ್ರಾಮದ ಸರ್ವೆ ನಂ.21ರಲ್ಲಿ ಈರಯ್ಯ ಬಿನ್ ಈರದಾಸಯ್ಯ ಹಾಗೂ ತಿಮ್ಮಯ್ಯ ಬಿನ್ ತಿರುಮಲಯ್ಯ ಅವರಿಗೆ ದರಖಾಸ್ತು ಮೂಲಕ ಮಂಜೂರಾದ ಜಮೀನಿನ ಸ್ವಾಧೀನಕ್ಕೆ 2001ರಿಂದಲೂ ನಿರಂತರ ತೊಂದರೆ ನೀಡಲಾಗುತ್ತಿದೆ ಎಂದು ಆರೋಪಿಸಿದರು.

ಈ ಕುರಿತು ನಾಗಮಂಗಲ ಜೆಎಂಎಫ್‌ಸಿ ನ್ಯಾಯಾಲಯ ದಲಿತ ಕುಟುಂಬಗಳ ಪರವಾಗಿ ಆದೇಶ ನೀಡಿದ್ದರೂ, ಅದನ್ನು ಉಲ್ಲಂಘಿಸಿ ಮತ್ತೆ ದೌರ್ಜನ್ಯ ನಡೆಸಲಾಗುತ್ತಿದೆ. ತಹಸೀಲ್ದಾರ್ ಹಾಗೂ ಪೊಲೀಸ್ ಇಲಾಖೆಗೆ ಹಲವು ಬಾರಿ ದೂರು ನೀಡಿದರೂ ಯಾವುದೇ ಕ್ರಮ ಕೈಗೊಳ್ಳದೆ ಕರ್ತವ್ಯ ಲೋಪ ಎಸಗಿದ್ದಾರೆ ಎಂದು ದೂರಿದರು.

ಕರ್ತವ್ಯ ಲೋಪ ಎಸಗಿರುವ ನಾಗಮಂಗಲ ತಹಸೀಲ್ದಾರ್ ಹಾಗೂ ಬೆಳ್ಳೂರು ಪೊಲೀಸ್ ಠಾಣೆಯ ಸಬ್‌ಇನ್‌ಸ್ಪೆಕ್ಟರ್ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಂಡು ನೊಂದ ದಲಿತ ಕುಟುಂಬಗಳಿಗೆ ನ್ಯಾಯ ಒದಗಿಸಬೇಕೆಂದು ಒತ್ತಾಯಿಸಿ ಜೂ.18ರಂದು ಜಿಲ್ಲಾಧಿಕಾರಿ ಕಚೇರಿ ಎದುರು ಅನಿರ್ದಿಷ್ಟಾವಧಿ ಪ್ರತಿಭಟನಾ ಧರಣಿ ನಡೆಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಡಿಎಸ್‌ಎಸ್ ಜಿಲ್ಲಾ ಅಧ್ಯಕ್ಷ ಚೆನ್ನಕೇಶವ, ನಂಜುಂಡಪ್ಪ, ಕುಮಾರ್, ದಾಸಪ್ಪ, ಸ್ವಾಮಿ ಹಾಗೂ ಪದ್ಮ ಉಪಸ್ಥಿತರಿದ್ದರು.

## ಗೃಹಕಾರ್ಮಿಕರಿಗೆ ಹಕ್ಕು–ಭದ್ರತೆ ನೀಡಲು ಆಗ್ರಹ

**ಮಂಡ್ಯ:** ಗೃಹಕಾರ್ಮಿಕರಿಗೆ ಕಾರ್ಮಿಕರ ಸ್ಥಾನಮಾನ ನೀಡಿ ಸಾಮಾಜಿಕ ಭದ್ರತೆ, ಕನಿಷ್ಠ ವೇತನ ಹಾಗೂ ಕಾನೂನುಗಳನ್ನು ರಚಿಸಿ ರಕ್ಷಣೆ ಒದಗಿಸಬೇಕು ಎಂದು ಕರ್ನಾಟಕ ಗೃಹಕಾರ್ಮಿಕರ ಚಳವಳಿಯ ಜಿಲ್ಲಾಧ್ಯಕ್ಷೆ ಲಲಿತಮ್ಮ ಒತ್ತಾಯಿಸಿದರು.




ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗೃಹಕಾರ್ಮಿಕರು ಮನೆಗಳ ನಿರ್ವಹಣೆ, ಮಕ್ಕಳ ಆರೈಕೆ, ವೃದ್ಧರ ಸೇವೆ ಸೇರಿದಂತೆ ಸಮಾಜದ ದೈನಂದಿನ ಬದುಕಿನಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದಾರೆ. ಆದಾಗ್ಯೂ ಅವರ ಉದ್ಯೋಗ, ವೇತನ ಹಾಗೂ ಸಾಮಾಜಿಕ ಭದ್ರತೆಗೆ ಸಮರ್ಪಕ ಕಾನೂನು ರಕ್ಷಣೆ ಇಲ್ಲದಿರುವುದು ವಿಷಾದನೀಯ ಎಂದು ಹೇಳಿದರು.

ನಿರಂತರ ಪ್ರಯತ್ನಗಳ ಫಲವಾಗಿ 2012ರಲ್ಲಿ ಅಖಿಲ ಕರ್ನಾಟಕ ಗೃಹಕಾರ್ಮಿಕರ ಟ್ರೇಡ್ ಯೂನಿಯನ್ ರಚಿಸಿ ನೊಂದಾಯಿಸಲಾಗಿದೆ. ರಾಜ್ಯದಲ್ಲಿ 20 ಸಾವಿರ ಸದಸ್ಯರನ್ನು ಹೊಂದಿದ್ದು, ಕಾನ್ಫಡರೇಶನ್ ಆಫ್ ಫ್ರೀ ಟ್ರೇಡ್ ಯೂನಿಯನ್ ಆಫ್ ಇಂಡಿಯಾ ಜೊತೆಗೂಡಿ ರಾಷ್ಟ್ರೀಯ ಮಟ್ಟದಲ್ಲಿ ಹೋರಾಟ ರೂಪಿಸಲಿದೆ. ಈ ನಿಟ್ಟಿನಲ್ಲಿ ಗೃಹ ಕಾರ್ಮಿಕರಿಗೆ ಜಾಗೃತಿ ಮೂಡಿಸಲು ಜೂ.26 ಮತ್ತು 27ರಂದು ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ (ILO) 189ನೇ ಒಪ್ಪಂದವನ್ನು ಭಾರತ ಸರ್ಕಾರ ಅಂಗೀಕರಿಸಬೇಕು. ಕರ್ನಾಟಕ ಗೃಹಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ಮಸೂದೆ–2025 ಅನ್ನು ಶೀಘ್ರ ಜಾರಿಗೆ ತಂದು ಗೃಹಕಾರ್ಮಿಕರಿಗೆ ಕಾರ್ಮಿಕ ಹಕ್ಕುಗಳು ಹಾಗೂ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಒದಗಿಸಬೇಕು. ಗೃಹಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ನೆರವು, ಮಹಿಳಾ ಕಾರ್ಮಿಕರಿಗೆ ಕೌಶಲ್ಯಾಭಿವೃದ್ಧಿ ಅವಕಾಶಗಳು, ಆರೋಗ್ಯ ಸೇವೆ ಹಾಗೂ ಸರ್ಕಾರದ ವಿವಿಧ ಕಲ್ಯಾಣ ಯೋಜನೆಗಳ ಸೌಲಭ್ಯಗಳನ್ನು ವಿಸ್ತರಿಸಬೇಕು. ಜೊತೆಗೆ ಕೆಲಸದ ಸ್ಥಳಗಳಲ್ಲಿ ಗೌರವ, ಸಮಾನತೆ ಮತ್ತು ಸುರಕ್ಷತೆಯನ್ನು ಖಾತ್ರಿಪಡಿಸಬೇಕು ಎಂದು ಒತ್ತಾಯಿಸಿದರು.

# ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸ್ಥಾನದಿಂದ ಮಹೇಶ್ ಜೋಷಿ ವಜಾ ಸೂಕ್ತ ಕ್ರಮಕ್ಕೆ ಆಗ್ರಹ

**ಮಂಡ್ಯ:** ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನದಿಂದ ಮಹೇಶ್ ಜೋಷಿ ಅವರನ್ನು ರಾಜ್ಯ ಸರಕಾರ ವಜಾಗೊಳಿಸಿದೆ. ಅವರ ಪ್ರಾಥಮಿಕ ಸದಸ್ಯತ್ವವನ್ನು ರದ್ದುಗೊಳಿಸಿ, ದುರುಪಯೋಗ ಪಡಿಸಿಕೊಂಡ ಹಣ ಹಿಂಪಡೆದು, ಅವರನ್ನು ಕಪ್ಪು ಪಟ್ಟಿಗೆ ಸೇರಿಸಬೇಕು ಎಂದು ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶ ಗೌಡ ಒತ್ತಾಯಿಸಿದರು.




ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಸಾಪದ ಸತ್ಪರಂಪರೆಗೆ ಕಳಂಕವಾಗಿ ಸದಸ್ಯತ್ವ ರದ್ದು ಮಾಡಿ, ಸ್ವಹಿತಾಸಕ್ತಿಗೆ ಪರಿಷತ್ತನ್ನು ದುರ್ಬಳಕೆ ಮಾಡಿಕೊಂಡ ಮಹೇಶ್ ಜೋಷಿಯಿಂದ ಮರೆಯಲಾಗದ ಘಟನಾವಳಿಗಳನ್ನು ನಡೆದಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದರ ವಿರುದ್ದ ಜಿ.ಪಂ ಕಾವೇರಿ ಸಭಾಂಗಣದಲ್ಲಿ ನಡೆದ ಸಭೆ ಹೋರಾಟಕ್ಕೆ ವೇದಿಕೆಯಾಗಿ ಇತಿಹಾಸದ ಪುಟದಲ್ಲಿ ದಾಖಲಾಗುವಂತದ್ದಾಗಿದೆ. ಇದೀಗ ಆತನ ಅಧ್ಯಕ್ಷ ಸ್ಥಾನ ರದ್ದು ಮಾಡಲಾಗಿದೆ. ಜೂ.19ರಂದು ಮತ್ತೇ ವಿಚಾರಣೆ ನಡೆಯಲಿದ್ದು, ತುರ್ತಾಗಿ ಹಣ ದುರ್ಬಳಕೆಯನ್ನು ರುಜುವಾತು ಮಾಡಲು ತನಿಖೆಗೆ ಒಳಪಡಿಸಬೇಕು ಎಂದು ಸರಕಾರವನ್ನು ಒತ್ತಾಯಿಸಿದರು.

ಮಹೇಶ್ ಜೋಶಿಯಿಂದಾದ ಅಧಿಕಾರ ದುರ್ಬಳಕೆಯ ಸಂಬಂಧ ಆಡಳಿತ ಮಂಡಳಿಯನ್ನು ತನಿಖೆಗೆ ಒಳಪಡಿಸಲು ಆಗ್ರಹಿಸುವ ಸಲುವಾಗಿ ಇನ್ನೆರಡು ದಿನಗಳಲ್ಲಿ ಬೆಂಗಳೂರಿನಲ್ಲಿ ಸಭೆ ನಡೆಸಲಾಗುವುದು ಎಂದು ಹೇಳಿದರು.

**ಕರ್ನಾಟಕ ಸಂಘದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಮೂಡಲಪಾಯ ಯಕ್ಷಗಾನ ತರಬೇತಿ ನೀಡಿ ಸಾಕಷ್ಟು ವಿದ್ಯಾರ್ಥಿಗಳನ್ನು ಪರಿಣಿತರಾಗಿಸುವ ಕೆಲಸ ಮಾಡಲಾಗುತ್ತಿದೆ. ಅಂತೆಯೇ ತತ್ತ್ವಪದಗಳ ತಾತ್ವಿಕ ಸಂಗಮ ಹೆಸರಿನಲ್ಲಿ ಜಿಲ್ಲೆಯ ತತ್ತ್ವಪದಕಾರರಿಗೆ ತರಬೇತಿ ಮತ್ತು ಪ್ರಸ್ತುತಿ ಕಾರ್ಯಕ್ರಮವನ್ನು ಆರಂಭಿಸಲಾಗುತ್ತಿದೆ ಎಂದು ಪ್ರೊ.ಜಯಪ್ರಕಾಶ ಗೌಡ ಘೋಷಿಸಿದರು.**

ಈ ಸಂಬಂಧ 10 ತಂಡಗಳ ಆಯ್ಕೆ ಮಾಡಲಾಗುವುದು. ಮೊದಲು ಬಂದವರಿಗೆ ಆದ್ಯತೆ ನಿಡಲಾಗುವುದು. ಪ್ರತಿ ತಂಡಕ್ಕೆ ಮೂರು ದಿನಗಳ ತರಬೇತಿ ಆನಂತರ ಪ್ರಸ್ತುತಿಯ ಅವಕಾಶ ಕಲ್ಪಿಸಲಾಗುವುದು. ಬೆಳಿಗ್ಗೆ 11ರಿಂದ ಸಂಜೆ 5ರವರೆಗೆ ತರಬೇತಿ ನೀಡಲಾಗುವುದು. ಮಧ್ಯಾಹ್ನದ ಊಟ, ಕಾಫಿ ಉಚಿತವಾಗಿರಲಿದೆ. ತರಬೇತಿಯ ನಂತರ ನಗರದ ಕಲಾಮಂದಿರದಲ್ಲಿ 3 ದಿನಗಳ ಪ್ರಸ್ತುತಿ ನಡೆಯಲಿದ್ದು, ತರಬೇತಿಯ ನಂತರ ದಿನಾಂಕ ನಿಗದಿ ಪಡಿಸಲಾಗುವುದು. ಮಾಹಿತಿಗಾಗಿ ಭವಾನಿ ಲೋಕೇಶ್–9844641043, ಡಾ.ಕೆಂಪಮ್ಮ–9901423706, ಗಾಮನಹಳ್ಳಿ ಸ್ವಾಮಿ–9035118784 ಸಂಖ್ಯೆಯನ್ನು ಸಂಪರ್ಕಿಸಲು ಮನವಿ ಮಾಡಿದರು.

ಗೋಷ್ಠಿಯಲ್ಲಿ ಕಸಾಪ ಜಿಲ್ಲಾಧ್ಯಕ್ಷ ವಿ.ಹರ್ಷ, ಮಾಜಿ ಜಿಲ್ಲಾಧ್ಯಕ್ಷ ಜಿ.ಟಿ.ವೀರಪ್ಪ, ಸದಸ್ಯ ರಾಜಶೇಖರಯ್ಯ, ಕರ್ನಾಟಕ ಸಂಘದ ಕಾರ್ಯದರ್ಶಿ ಸೋಮಶೇಖರ್ ಇದ್ದರು.

## ಕಲಾವಿದರನ್ನು ಗುರುತಿಸಿ, ಗೌರವಿಸಿ, ಪ್ರೋತ್ಸಾಹಿಸುವುದೇ ಜಾನಪದ ಪರಿಷತ್ತಿನ ಮೂಲ ಉದ್ದೇಶ: ಆದಿತ್ಯ ನಂಜರಾಜ್

**ರಾಮನಗರ:** ಹಿರಿಯ ಕಲಾವಿದರನ್ನು ಗುರುತಿಸಿ, ಗೌರವಿಸಿ, ಪ್ರೋತ್ಸಾಹಿಸುವುದೇ ಜಾನಪದ ಪರಿಷತ್ತಿನ ಮೂಲ ಉದ್ದೇಶವಾಗಿದೆ. ಇಂತಹ ಕೆಲಸವನ್ನು ನಿರಂತರವಾಗಿ ಮಾಡುವುದು ನಮ್ಮ ಕರ್ತವ್ಯ ಎಂದು ಕರ್ನಾಟಕ ಜಾನಪದ ಪರಿಷತ್ತಿನ ಮ್ಯಾನೇಜಿಂಗ್ ಟ್ರಸ್ಟಿಗಳಾದ ಆದಿತ್ಯ ನಂಜರಾಜ್ ಅವರು ತಿಳಿಸಿದರು.



ಅವರು ಭಾನುವಾರ ರಾಮನಗರದ ಜಾನಪದ ಲೋಕದಲ್ಲಿ ಡಾ. ಎಚ್.ಎಲ್. ನಾಗೇಗೌಡರ ನೆನಪಿನಲ್ಲಿ ಪ್ರತಿ ತಿಂಗಳ ನಡೆಯುವ ಲೋಕಸಿರಿ ತಿಂಗಳ ಅತಿಥಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಜಾನಪದ ಲೋಕವು ತಿಂಗಳಿಗೊಬ್ಬರು ಜಾನಪದ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಕಲಾವಿದರಿಗೆ ಲೋಕಸಿರಿ ಗೌರವ ನೀಡಲಾಗುತ್ತಿದೆ ಎಂದು ಹೇಳಿದರು.

ವಿಭೂತಿಕೆರೆ ಗ್ರಾಮಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಗಳಾದ ರಂಗೇಗೌಡ ಅವರು ಮಾತನಾಡಿ, ಜಾನಪದ ಸಾಹಿತ್ಯ, ಜಾನಪದ ಸಂಗೀತ ಎಲ್ಲಾ ಕಲೆಗಳ ತಾಯಿಬೇರು. ಯಾವುದೇ ಭಾಷೆಗೂ ತಾಯಿಬೇರು ಗಟ್ಟಿಯಾದಷ್ಟು ಮರ ಗಟ್ಟಿಯಾಗಿ ಬೆಳೆಯಲು ಸಾಧ್ಯವಾಗುತ್ತದೆ. ಹಾಗೆಯೇ ಜನಪದ ಬೆಳೆದಷ್ಟು ನಮ್ಮ ಸಂಸ್ಕೃತಿ ಬೆಳೆಯುತ್ತದೆ. ಈ ಸಂಸ್ಕೃತಿಯನ್ನು ಮುಂದಿನ ತಲೆಮಾರಿಗೆ ತಲುಪಿಸುವ ಕೆಲಸವನ್ನು ಜಾನಪದ ಲೋಕ ತುಂಬಾ ಅಚ್ಚುಕಟ್ಟಾಗಿ ನಿರ್ವಹಿಸುತ್ತಾ ಬಂದಿದೆ. ಜಾನಪದ ಲೋಕಕ್ಕೆ ಕುಟುಂಬ ಸಮೇತರಾಗಿ ಬಂದು ಪಾಲ್ಗೊಂಡು ಇಲ್ಲಿನ ಜನಪದ ಸಂಗ್ರಹ, ಸಂಸ್ಕೃತಿ, ಕಲೆ, ಕಲಾವಿದರನ್ನು ಪ್ರೋತ್ಸಾಹಿಸಬೇಕೆಂದರು.

ಕಾರ್ಯಕ್ರಮದಲ್ಲಿ ಚಿಕ್ಕತಾಯಮ್ಮನವರು ಮತ್ತು ತಂಡ ಹಾಡಿದ ಬಿಳಿಗಿರಿರಂಗಯ್ಯನ ಕಥನಕಾವ್ಯದ ಸಾಲುಗಳನ್ನು ಯಾವುದೇ ವಾದ್ಯಗಳ ಹಿನ್ನಲೆಯಿಲ್ಲದೇ ಹಿಮ್ಮೇಳದ ಸೊಲ್ಲಿನೊಂದಿಗೆ ಸೊಗಸಾಗಿ ಹಾಡಿದರು, ಅವರು ಚಾಮರಾಜನಗರ ತಾಲ್ಲೂಕಿನ ಸಿದ್ಧಯ್ಯಪುರ ಗ್ರಾಮದ ಜಾನಪದ ಹಾಡುಗಾರ್ತಿ. ರಾಗಿ ಬೀಸುವ ಪದ, ರಾಶಿಪದ, ಲಾಲಿ, ದೂರಿಪದ, ಸೋಬಾನೆಯ ಶಾಸ್ತ್ರದ ಪದಗಳನ್ನು ಜೊತೆಗೆ ಬಿಳಿಗಿರಿರಂಗಯ್ಯ, ಮುಡುಕುತೊರೆ ಮಲ್ಲಯ್ಯ, ಮಾದೇಶ್ವರ ಕುರಿತ ಹಾಡುಗಳನ್ನು ತಮ್ಮದೇ ಆದ ಧಾಟಿಯಲ್ಲಿ ಹಾಡಿ ಕಾರ್ಯಕ್ರಮಕ್ಕೆ ಮೆರಗು ತಂದರು. ಹೀಗೆ ಒಂದು ಹಾಡೆಂದರೆ ಹದಿನಾರ ಹೇಳೇನು ಎನ್ನುತ್ತಾರೆ.

ಕಪ್ಪಡಿ, ಚಿಕ್ಕಲ್ಲೂರು, ಜಾನಪದ ಲೋಕ, ಚಾಮರಾಜನಗರ, ನಂಜನಗೂಡು, ಮಂಡ್ಯ ಜಿಲ್ಲೆಗಳಲ್ಲಿ ಕನ್ನಡ ರಾಜ್ಯೋತ್ಸವ, ಗಡಿನಾಡ ಉತ್ಸವ, ಮೊದಲಾದ ಕನ್ನಡದ ಹಬ್ಬಗಳಲ್ಲಿ ಅಲ್ಲದೇ ಊರಿನ ಹಬ್ಬ–ಹರಿದಿನ, ಜಾತ್ರೆ–ಉತ್ಸವಗಳಲ್ಲಿ ಹಾಡಿರುವ ಗ್ರಾಮೀಣ ಸೊಗಡಿನ ಪ್ರತಿಭೆಯಾಗಿರುವ ಚಿಕ್ಕತಾಯಮ್ಮ ಅವರ ಪ್ರತಿಭೆ ಗುರುತಿಸಿ, ಸ್ಥಳೀಯ ಸಂಘ–ಸಂಸ್ಥೆಗಳು ಕರೆದು ಸನ್ಮಾನಿಸಿವೆ. ಅಪರೂಪದ ಕಂಠಸಿರಿಯ ಹಾಡುಗಾರ್ತಿಯ ಬದುಕು–ಬವಣೆ, ಹಾಡು–ಪಾಡು ಎಲ್ಲವನ್ನು ಕೇಳಿ, ಹಿರಿಯ ಕಲಾವಿದರನ್ನು ಕರ್ನಾಟಕ ಜಾನಪದ ಪರಿಷತ್ತು, ಜಾನಪದ ಲೋಕಕ್ಕೆ ಆಹ್ವಾನಿಸಿ, ಲೋಕಸಿರಿ ತಿಂಗಳ ಅತಿಥಿ–117ರ ಕಾರ್ಯಕ್ರಮದಲ್ಲಿ ಗೌರವಿಸಲಾಯಿತು.

## ಅನಧಿಕೃತ ಅತಿಕ್ರಮಣ ತೆರವು ವಿಳಂಬ ತಹಸೀಲ್ದಾರ್ ವಿರುದ್ಧ ಆರೋಪ

**ಮಂಡ್ಯ:** ತಾಲೂಕಿನ ಜಿ.ಕಬ್ಬಹಳ್ಳಿ ಗ್ರಾಮದಲ್ಲಿ ಅನಧಿಕೃತ ಒತ್ತುವರಿ ಅನುಷ್ಠಾನಗೊಳಿಸಲು ತಹಶೀಲ್ದಾರ್ ವಿನಾಕಾರಣ ವಿಳಂಬ ಮಾಡುತ್ತಿದ್ದಾರೆ ಎಂದು ಗ್ರಾಮದ ಕೆ.ಎಸ್.ರಾಮಕೃಷ್ಣ ಆರೋಪಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅನಧಿಕೃತ ಅನುಷ್ಠಾನ ಸಂಬಂಧ ನ್ಯಾಯಾಲಯ ತೀರ್ಪು ನೀಡಿದ್ದರು. ಗ್ರಾಮದ ಕೆಳವರ್ಗದ ಜನರಿಗೆ ಸೌಲಭ್ಯಗಳನ್ನು ತಲುಪಿಸುವಲ್ಲಿ ಅಧಿಕಾರಿಗಳು ವಿಫಲವಾಗಿದ್ದಾರೆ ಎಂದು ದೂರಿದರು.

ಈ ಹಿಂದೆಯೂ ಇದ್ದ ತಹಶೀಲ್ದಾರ್ ಡಾ.ಶಿವಕುಮಾರ ಬಿರಾದರ ಅವರ ಅವಧಿಯಲ್ಲಿ 84ಬಾರಿ ಗ್ರಮಸ್ಥರು ಬೇಟಿ ನೀಡಿದ್ದರೂ ಯಾವುದೇ ಕ್ರಮ ವಹಿಸಿಲ್ಲ. ಆದ ಕಾರಣ ಜಿಲ್ಲಾಧಿಕಾರಿಗಳು ಕ್ರಮ ವಹಿಸುವಂತೆ ಮನವಿ ಮಾಡಿದರು.

## ಜೂನ್ ತಿಂಗಳಲ್ಲಿ ಮೇ ಮತ್ತು ಜೂನ್ ತಿಂಗಳ ಒಟ್ಟು 10 ಕೆ.ಜಿ ಅನ್ನಭಾಗ್ಯ ಅಕ್ಕಿ ವಿತರಣೆ

**ಮೈಸೂರು:** 2026ರ ಜೂನ್ ಮಾಹೆಯ ಪಡಿತರ ವಿತರಣೆಯಲ್ಲಿ ಅನ್ನಭಾಗ್ಯ ಯೋಜನೆಯಡಿ ಸರ್ಕಾರದ ಮಾರ್ಗಸೂಚಿಯಂತೆ ಏಕ–ಸದಸ್ಯ, ದ್ವಿ–ಸದಸ್ಯ ಮತ್ತು ತ್ರಿ–ಸದಸ್ಯ ಎಎವೈ ಪಡಿತರ ಚೀಟಿಗಳನ್ನು ಹೊರತುಪಡಿಸಿ, ನಾಲ್ಕು ಮತ್ತು ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರಿರುವ ಎಎವೈ ಪಡಿತರ ಚೀಟಿಯ ಪ್ರತಿ ಫಲಾನುಭವಿಗೆ ಮತ್ತು ಪಿ.ಹೆಚ್.ಹೆಚ್ ಪಡಿತರ ಚೀಟಿಯ ಪ್ರತಿ ಫಲಾನುಭವಿಗಳಿಗೆ ಪ್ರತಿ ಮಾಹೆ ಹೆಚ್ಚುವರಿಯಾಗಿ 5 ಕೆ.ಜಿ ಅಕ್ಕಿಯನ್ನು ಹಂಚಿಕೆ ಮಾಡಲಾಗುತ್ತಿದೆ. ಅದರಂತೆ, 2026ರ ಮೇ ಮತ್ತು ಜೂನ್ ಮಾಹೆಗಳ ಒಟ್ಟು 10 ಕೆ.ಜಿ ಅಕ್ಕಿಯನ್ನು ಜೂನ್–2026 ರ ಮಾಹೆಯಲ್ಲಿ ಒಟ್ಟಿಗೆ ವಿತರಿಸಲಾಗುತ್ತದೆ.

## ಜೂ.20ರಂದು ಬೆಂಗಳೂರಿನಲ್ಲಿ ಎಸ್‌ಎಲ್‌ಆರ್ ವಿರೋಧಿ ಮಹಾಸಭೆ

ಮಂಡ್ಯ: ರಾಜ್ಯಾದ್ಯಂತ ಎಸ್‌ಐಆರ್ ವಿರೋಧಿ ಜಾತ್ಯಾತೀತ ಪಕ್ಷಗಳು–ಜನಪರ ಸಂಘಟನೆಗಳ ಒಕ್ಕೂಟದಿಂದ ಜೂ.20ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿರೋಧ ಸಮಾವೇಶ ನೆಡೆಸಲಾಗುವುದು ಎಂದು ಆಲ್ ಇಂಡಿಯಾ ಲಾಯರ್ ಯೂನಿಯನ್ ಜಿಲ್ಲಾಧ್ಯಕ್ಷ ಬಿ.ಟಿ.ವಿಶ್ವನಾಥ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಕ್ಕೂಟದಿಂದ ಜೂ.18ರವರೆಗೆ ರಾಜ್ಯಾದ್ಯಂತ ಮತದಾರರ ಪಟ್ಟಿ ವಿಶೇಷ ಸಮಗ್ರಪರಿಷ್ಕರಣೆ (ಎಸ್‌ಐಆರ್) ವಿರೋಧಿ ಜನಜಾಗೃತಿ ಜಾಥಮಾಡಲಾಗುತ್ತಿದೆ ಎಂದರು.

ಎಸ್‌ಐಆರ್ ಮೂಲಕ ಮೃತರು ಹಾಗೂ ಎರಡು ಕಡೆ ಮತದಾನದ ಹಕ್ಕಿರುವವರನ್ನು ತೆಗೆಯುವುದಕ್ಕೆ ಅಭ್ಯಂತರವಿಲ್ಲ. ಆದರೆ ಸಂವಿಧಾನದಲ್ಲಿ ಇಲ್ಲದ ಚುನಾವಣಾ ಆಯೋಗದ ನಿಯಮಗಳನ್ನು ಉಲ್ಲಂಘಿಸಿ ಜನಸಮಾನ್ಯರನ್ನು ಇಕ್ಕಟ್ಟಿಗೆ ಸಿಲುಕಿಸುವ ಮತ್ತು ಬಡವರ ಮತದಾನದ ಹಕ್ಕನ್ನು ಕಸಿಯುವ ಕೆಲಸ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಹಿಂದಿನ ಬಿಜೆಪಿ ಸರಕಾರ ಪ್ರಯತ್ನಿಸಿ ವಿಫಲಗೊಂಡ ಸಿಎಎ, ಎನ್‌ಆರ್‌ಸಿಯನ್ನು ಇನ್ನಷ್ಟು ತೀವ್ರವಾಗಿ ಜಾರಿಗೊಳಿಸುವ ಹುನ್ನಾರ ಇದರಲ್ಲಿದೆ. ನುಸುಳುಕೋರರನ್ನು ಪತ್ತೆ ಹಚ್ಚದೆ, ಬಿಜೆಪಿ ಹಿಡಿತದಲ್ಲಿರದ ರಾಜ್ಯಗಳ ಮತದಾರರ ಹಕ್ಕನ್ನು ಕಸಿಯುವ ಕೆಲಸ ಮಾಡಲಾಗುತ್ತಿದೆ ಎಂದು ಖಂಡಿಸಿದರು. ಗೋಷ್ಠಿಯಲ್ಲಿ ಎಂ.ಸಿದ್ದರಾಜು, ಮುಫ್ತಾಕ್ ಅಹಮದ್, ಬಿ.ಎಸ್.ಶಿಲ್ಪ, ಮುತ್ತಯ್ಯ, ಜಿ.ಟಿ.ವೀರಪ್ಪ, ಸಾದತ್ ಪಾಷಾ, , ಅತೀಕ್ ಅಹ್ಮದ್ ಇದ್ದರು.




## ಹಿರಿಯ ಪತ್ರಕರ್ತ ಡಿ.ಎನ್. ಶ್ರೀಪಾದು 75ನೇ ವರ್ಷಾಚರಣೆ

# ಜೂ.18ರಂದು ಅಭಿನಂದನಾ ಸಮಾರಂಭ

**ಮಂಡ್ಯ:** ಹಿರಿಯ ಪತ್ರಕರ್ತ ಹಾಗೂ 'ಕೊಳಲು' ವಾರಪತ್ರಿಕೆಯ ಸಂಪಾದಕರಾದ ಡಿ.ಎನ್. ಶ್ರೀಪಾದು ಅವರ 75ನೇ ವರ್ಷದ ಅಂಗವಾಗಿ ಅಭಿನಂದನಾ ಸಮಾರಂಭವನ್ನು ಜೂ.18ರಂದು ನಗರದ ಕರ್ನಾಟಕ ಸಂಘದ ಆವರಣದಲ್ಲಿರುವ ಕೆ.ವಿ. ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಆಯೋಜಿಸಲಾಗಿದೆ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕದ ಉಪಾಧ್ಯಕ್ಷ ಕೆ.ಸಿ.ಮಂಜುನಾಥ್ ತಿಳಿಸಿದರು.




ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಮಾರು 45 ವರ್ಷಗಳಿಂದ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಸಕ್ರಿಯರಾಗಿರುವ ಶ್ರೀಪಾದು ಅವರು ಸಾವಿರಾರು ಲೇಖನಗಳು, ವಿಶೇಷ ವರದಿಗಳು ಹಾಗೂ ಜನಪರ ಸುದ್ದಿಗಳ ಮೂಲಕ ಸಮಾಜದ ಸಮಸ್ಯೆಗಳನ್ನು ಬೆಳಕಿಗೆ ತಂದಿದ್ದಾರೆ. ಗ್ರಾಮೀಣ ಬದುಕು, ರೈತರು, ಸಾಮಾಜಿಕ ಸಮಸ್ಯೆಗಳು ಮತ್ತು ಜನಸಾಮಾನ್ಯರ ಧ್ವನಿಯಾಗಿ ಕಾರ್ಯನಿರ್ವಹಿಸಿರುವ ಅವರ ಸೇವೆ ಪತ್ರಿಕೋದ್ಯಮ ಕ್ಷೇತ್ರಕ್ಕೆ ಮಹತ್ವದ ಕೊಡುಗೆಯಾಗಿದೆ ಎಂದು ಹೇಳಿದರು.

ಕೆಂಗೇರಿ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಶ್ರೀ ಡಾ. ನಿಶ್ಚಲಾನಂದನಾಥ ಸ್ವಾಮೀಜಿ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಲಿದ್ದು, ಜಿಲ್ಲಾಧಿಕಾರಿ ಡಾ. ಕುಮಾರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಎಸ್.ಬಿ. ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ ಡಾ. ಮೀರಾ ಶಿವಲಿಂಗಯ್ಯ ಅವರು ಶ್ರೀಪಾದು ಅವರನ್ನು ಅಭಿನಂದಿಸಲಿದ್ದು, ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ. ಶ್ರೀಕಂಠೇಗೌಡ ಅಭಿನಂದನಾ ನುಡಿ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಮತ್ತೀಕೆರೆ ಜಯರಾಮ್, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ಎನ್. ರಾಘವೇಂದ್ರ, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಸಿ. ತ್ಯಾಗರಾಜು, ಮಾಜಿ ನಿರ್ದೇಶಕ ಎಂ. ಕೃಷ್ಣ ಹಾಗೂ ಮಡ್ದಾ ಅಧ್ಯಕ್ಷ ಬಿ.ಪಿ. ಪ್ರಕಾಶ್ ಭಾಗವಹಿಸಲಿದ್ದಾರೆ ಎಂದು ವಿವರಿಸಿದರು.

ಜಿಲ್ಲೆಯ ಪತ್ರಕರ್ತರು, ಶ್ರೀಪಾದು ಅವರ ಅಭಿಮಾನಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಘಟಕದ ಉಪಾಧ್ಯಕ್ಷ ರವಿ ಸವಂದಿಪುರ, ಕಾರ್ಯದರ್ಶಿ ನಾಗೇಶ್, ನಿರ್ದೇಶಕ ಶ್ರೀನಿವಾಸ್ ಉಪಸ್ಥಿತರಿದ್ದರು.

# ಪ್ರತಿಕೂಲತೆಯನ್ನು ಎದುರಿಸುವ ಕಲೆ



ನಮ್ಮ ಬದುಕಿನ ಪಯಣದಲ್ಲಿ ನಾವು ಎದುರಿಸುವ ಅತಿ ದೊಡ್ಡ ಸವಾಲು ಯಾವುದು? ಆರ್ಥಿಕ ಮುಗ್ಗಟ್ಟೇ? ಅನಾರೋಗ್ಯವೇ? ಅಥವಾ ಸಂಬಂಧಗಳ ಬಿರುಕೇ? ಮೇಲ್ನೋಟಕ್ಕೆ ಇವೆಲ್ಲವೂ ದೊಡ್ಡದಾಗಿ ಕಂಡರೂ, ಇವೆಲ್ಲಕ್ಕಿಂತ ಮಿಗಿಲಾದ ಒಂದು ಸವಾಲು ನಮ್ಮ ಮುಂದಿದೆ. ಅದು? "ನಮ್ಮ ಇಚ್ಛೆಗೆ ವಿರುದ್ಧವಾಗಿ ಘಟನೆಗಳು ನಡೆದಾಗ ನಾವು ಹೇಗೆ ಪ್ರತಿಕ್ರಿಯಿಸುತ್ತೇವೆ?" ಎಂಬುದು.

"ಎಲ್ಲಾ ಸಲವೂ ನಮ್ಮ ಪರವಾದ ಸಂಗತಿಗಳೇ ಜರುಗುವುದಿಲ್ಲ... ಪ್ರತಿಕೂಲ ಪ್ರಸಂಗವನ್ನು ಎದುರಿಸಲು ನಮ್ಮ ಮನಸು ಸದಾ ಸಹಜವಾಗಿ ಸನ್ನದ್ಧವಾಗಿರಬೇಕು" . ಇದು ಬದುಕಿನ ಒಂದು ದೊಡ್ಡ ಪಾಠ. ಈ ಲೇಖನದಲ್ಲಿ ನಾವು ಈ ಚಿಂತನೆಯನ್ನು ಆಳವಾಗಿ ವಿಶ್ಲೇಷಿಸೋಣ.

1. **ನಿರೀಕ್ಷೆಯೆಂಬ ಮರೀಚಿಕೆ ಮತ್ತು ವಾಸ್ತವದ ನೆಲೆಗಟ್ಟು**
   ಮಾನವ ಸಹಜವಾಗಿ ಸುಖಾಪೇಕ್ಷಿ . ನಮಗೆ ಎಲ್ಲವೂ ಮಂಗಳಕರವಾಗಿಯೇ ನಡೆಯಬೇಕು ಎಂಬ ಹಂಬಲವಿರುತ್ತದೆ. ಬೆಳಿಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೆ ನಾವು ಹಾಕುವ ಪ್ರತಿಯೊಂದು ಯೋಜನೆಯೂ ಯಶಸ್ವಿಯಾಗಬೇಕು ಎಂದು ಬಯಸುತ್ತೇವೆ. ಆದರೆ, ಪ್ರಕೃತಿಯ ನಿಯಮವೇ ಬೇರೆ ಇದೆ. ಈ ಜಗತ್ತು ನಮ್ಮ ಇಚ್ಛೆಯಂತೆ ನಡೆಯುವ 'ರಿಮೋಟ್ ಕಂಟ್ರೋಲ್' ಸಾಧನವಲ್ಲ.
   ನಮ್ಮ ಹಿರಿಯರು ಒಂದು ಮಾತು ಹೇಳುತ್ತಿದ್ದರು: "ಗಾಳಿ ಬಂದ ಕಡೆ ತೂರು" ಎಂದು. ಇದರರ್ಥ ಸೋಲೊಪ್ಪಿಕೊಳ್ಳುವುದಲ್ಲ, ಬದಲಾಗಿ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದು. ನಾವು ರೈಲ್ವೆ ನಿಲ್ದಾಣಕ್ಕೆ ಹೋಗುತ್ತೇವೆ, ರೈಲು ನಿಗದಿತ ಸಮಯಕ್ಕೆ ಬರುತ್ತದೆ ಎಂದು ನಿರೀಕ್ಷಿಸುತ್ತೇವೆ. ಆದರೆ ತಾಂತ್ರಿಕ ಕಾರಣದಿಂದ ಅದು ಎರಡು ಗಂಟೆ ತಡವಾದಾಗ ನಾವು ಸಿಟ್ಟಿಗೇಳುತ್ತೇವೆ, ಕಿರಿಕಿರಿ ಮಾಡಿಕೊಳ್ಳುತ್ತೇವೆ. ಇಲ್ಲಿ ರೈಲು ತಡವಾಗಿರುವುದು 'ಪ್ರತಿಕೂಲ ಸನ್ನಿವೇಶ'. ಅದಕ್ಕೆ ನಾವು ನೀಡುವ ಸಿಟ್ಟಿನ ಪ್ರತಿಕ್ರಿಯೆ ನಮ್ಮ 'ಧೃತಿಗೆಟ್ಟ' ಮನಸ್ಥಿತಿ. ಆ ಎರಡು ಗಂಟೆಗಳನ್ನು ಪುಸ್ತಕ ಓದುತ್ತಲೋ ಅಥವಾ ಶಾಂತವಾಗಿ ಕುಳಿತು ವಿವೇಕದಿಂದ ಕಳೆಯುವುದು 'ಸನ್ನದ್ಧತೆ'.

2. **'ಧೃತಿಗೆಡುವುದು' ಎಂದರೆ ಆತ್ಮಶಕ್ತಿಯ ಸೋಲು:**
   'ಧೃತಿಗೆಡಬಾರದು'. 'ಧೃತಿ' ಎಂದರೆ ಧೈರ್ಯ, ಸ್ಥಿರತೆ ಅಥವಾ ತಾಳ್ಮೆ. ಇದು ಕೇವಲ ಶಾರೀರಿಕ ಶಕ್ತಿಯಲ್ಲ, ಇದು ಆತ್ಮಬಲ. ಯಾವಾಗ ಸಂಗತಿಗಳು ನಮ್ಮ ಪರವಾಗಿ ಇರುವುದಿಲ್ಲವೋ, ಆಗ ಮೊದಲು ದಾಳಿಗೊಳಗಾಗುವುದು ನಮ್ಮ ಈ 'ಧೃತಿ'. ಉದಾಹರಣೆಗೆ, ಒಬ್ಬ ವಿದ್ಯಾರ್ಥಿ ಕಷ್ಟಪಟ್ಟು ಓದಿ ಪರೀಕ್ಷೆ ಬರೆದಿರುತ್ತಾನೆ. ಫಲಿತಾಂಶ ಬಂದಾಗ ಅವನು ನಿರೀಕ್ಷಿಸಿದಷ್ಟು ಅಂಕಗಳು ಬಂದಿರುವುದಿಲ್ಲ. ಆ ಕ್ಷಣದಲ್ಲಿ ಅವನಿಗೆ ಜಗತ್ತೇ ಮುಗಿದುಹೋಯಿತು ಅನ್ನಿಸುತ್ತದೆ. ಈ ಹಂತದಲ್ಲಿ ಧೃತಿಗೆಟ್ಟರೆ ಅವನು ಮುಂದಿನ ಅವಕಾಶಗಳನ್ನು ಕಾಣಲಾರ. ಆದರೆ, "ಅಂಕಗಳು ಕಡಿಮೆಯಾಗಿರುವುದು ಒಂದು ಘಟನೆ ಮಾತ್ರ, ಅದು ನನ್ನ ವ್ಯಕ್ತಿತ್ವದ ತೀರ್ಪಲ್ಲ" ಎಂದು ಯೋಚಿಸುವುದು ಜಾಣತನ.
   ನಮ್ಮ ಸಮಾಜದಲ್ಲಿ ಇಂದು ಮಾನಸಿಕ ಒತ್ತಡ ಹೆಚ್ಚಾಗಲು ಕಾರಣವೇ ಇದು. ಸಣ್ಣ ಸಣ್ಣ ವಿಘ್ನಗಳಿಗೂ ನಾವು ದೊಡ್ಡ ಮಟ್ಟದಲ್ಲಿ ಕುಸಿದು ಹೋಗುತ್ತಿದ್ದೇವೆ. ಸನ್ನಿವೇಶಗಳು ನಮ್ಮನ್ನು ಸೋಲಿಸುವುದಿಲ್ಲ, ಆ ಸನ್ನಿವೇಶಗಳನ್ನು ಎದುರಿಸುವಲ್ಲಿ ನಾವು ತೋರಿಸುವ ಅಸಹಾಯಕತೆ ನಮ್ಮನ್ನು ಸೋಲಿಸುತ್ತದೆ.

3. **ಭಾರತೀಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ**
   ನಮ್ಮ ಭಾರತೀಯ ಸಮಾಜವು ಕೃಷಿ ಮೂಲದಿಂದ ಬಂದದ್ದು. ಒಬ್ಬ ರೈತನ ಬದುಕಿಗಿಂತ ದೊಡ್ಡ ಪಾಠ ಬೇರೊಂದಿಲ್ಲ. ಮಳೆ ಬಾರದಿದ್ದಾಗ ಅವನು ಆಕಾಶದ ಕಡೆ ನೋಡಿ ಪ್ರಾರ್ಥಿಸುತ್ತಾನೆಯೇ ಹೊರತು, ಭೂಮಿಗೆ ಶಾಪ ಹಾಕುವುದಿಲ್ಲ. ಅತಿಯಾದ ಮಳೆಯಿಂದ ಬೆಳೆ ನಾಶವಾದಾಗಲೂ, "ಇದು ದೈವೇಚ್ಛೆ" ಎಂದು ಹೇಳಿ ಸಮಾಧಾನ ತಂದುಕೊಂಡು, ಮುಂದಿನ ಹಂಗಾಮಿಗೆ ಬೀಜಗಳನ್ನು ಸಿದ್ಧಪಡಿಸಿಕೊಳ್ಳುತ್ತಾನೆ. ಇದು 'ಹಣೆಬರಹ' ಎಂಬ ಮೂಢನಂಬಿಕೆಯಲ್ಲ; ಬದಲಾಗಿ ಇದು 'ಸಹಜ ಸನ್ನದ್ಧತೆ'.
   ಅನಿವಾರ್ಯತೆಯನ್ನು ಒಪ್ಪಿಕೊಳ್ಳುವ ಈ ಗುಣವೇ ನಮ್ಮ ಪೂರ್ವಜರನ್ನು ಸಾವಿರಾರು ವರ್ಷಗಳ ಆಕ್ರಮಣಗಳು, ಕ್ಷಾಮಗಳು ಮತ್ತು ಕಷ್ಟಗಳ ನಡುವೆಯೂ ಬದುಕಿಸಿ ಉಳಿಸಿತು. ಇಂದಿನ ಕಾರ್ಪೊರೇಟ್ ಜಗತ್ತಿನ "ಎಲ್ಲವನ್ನೂ ನಿಯಂತ್ರಿಸಬೇಕು" ಎಂಬ ಹಠಕ್ಕಿಂತ, ನಮ್ಮ ಹಿರಿಯರ "ಬಂದದ್ದನ್ನು ಎದುರಿಸೋಣ" ಎಂಬ ನಿಲುವು ಹೆಚ್ಚು ಆರೋಗ್ಯಕರವಾದುದು.

4. **ಉದಾಹರಣೆಗಳ ಮೂಲಕ ವಿಶ್ಲೇಷಣೆ:** ಜೀವನದಲ್ಲಿ ಪ್ರತಿಕೂಲತೆಗಳು ಹೇಗೆ ನಮಗೆ ವರವಾಗಬಲ್ಲವು ಎಂಬುದಕ್ಕೆ ಕೆಲವು ನಿದರ್ಶನಗಳನ್ನು ನೋಡೋಣ:

* **ವೃತ್ತಿ ಜೀವನದಲ್ಲಿ:** ಒಬ್ಬ ವ್ಯಕ್ತಿಗೆ ತಾನು ಬಹಳ ಇಷ್ಟಪಟ್ಟ ಕೆಲಸ ಸಿಗದೇ ಹೋಗಬಹುದು ಅಥವಾ ಇದ್ದ ಕೆಲಸದಿಂದ ವಜಾ ಆಗಬಹುದು. ಮೇಲ್ನೋಟಕ್ಕೆ ಇದು ದೊಡ್ಡ ಆಘಾತ. ಆದರೆ, ಇದೇ ಘಟನೆಯು ಅವನನ್ನು ತನ್ನದೇ ಆದ ಸ್ವಂತ ಉದ್ಯಮ ಪ್ರಾರಂಭಿಸಲು ಪ್ರೇರೇಪಿಸಬಹುದು. ಅಂದು ಆ ಕೆಲಸ ಹೋಗದಿದ್ದರೆ ಇಂದು ಅವನು ಮಾಲೀಕನಾಗುತ್ತಿರಲಿಲ್ಲ.
  **ಆರೋಗ್ಯದಲ್ಲಿ:** ದೈಹಿಕವಾಗಿ ಅಶಕ್ತರಾದ ಎಷ್ಟೋ ಜನರು ತಮ್ಮ ಆ ದೌರ್ಬಲ್ಯವನ್ನೇ ಶಕ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ಕಣ್ಣಿಲ್ಲದಿದ್ದರೂ ಸಂಗೀತದಲ್ಲಿ ಸಾಧನೆ ಮಾಡಿದವರು, ಕಾಲುಗಳಿಲ್ಲದಿದ್ದರೂ ಪರ್ವತ ಏರಿದವರು ನಮ್ಮ ನಡುವೆ ಇದ್ದಾರೆ. ಇವರೆಲ್ಲರೂ 'ಪ್ರತಿಕೂಲ ಪ್ರಸಂಗವನ್ನು ಎದುರಿಸಲು ಮನಸ್ಸನ್ನು ಸನ್ನದ್ಧಗೊಳಿಸಿದವರು'.

5. ಮನಸ್ಸನ್ನು ಸನ್ನದ್ಧಗೊಳಿಸುವುದು ಹೇಗೆ?: ಪ್ರತಿಕೂಲ ಸನ್ನಿವೇಶ ಬಂದಾಗ ಬೆಚ್ಚಿಬೀಳದೆ ಇರಲು ನಾವು ಕೆಲವು ಅಭ್ಯಾಸಗಳನ್ನು ಮಾಡಿಕೊಳ್ಳಬೇಕು:

1. **ವಸ್ತುನಿಷ್ಠ ದೃಷ್ಟಿಕೋನ:** ಯಾವುದೋ ಒಂದು ಕೆಲಸ ಕೆಟ್ಟಾಗ, "ನನ್ನ ಜೀವನವೇ ಹಾಳಾಯಿತು" ಎಂದು ಸಾರ್ವತ್ರೀಕರಿಸಬಾರದು . ಕೇವಲ ಆ ಒಂದು ಕೆಲಸ ಮಾತ್ರ ಕೆಟ್ಟಿದೆ ಎಂದು ಅರ್ಥಮಾಡಿಕೊಳ್ಳಬೇಕು .
2. **ನಾಳೆಯ ಮೇಲಿನ ನಂಬಿಕೆ:** ಇತಿಹಾಸವನ್ನು ಗಮನಿಸಿದರೆ ತಿಳಿಯುತ್ತದೆ, ಯಾವುದೇ ಬಿಕ್ಕಟ್ಟು ಶಾಶ್ವತವಾಗಿ ಉಳಿದಿಲ್ಲ. ಎರಡನೇ ಮಹಾಯುದ್ಧ ಮುಗಿಯಿತು, ಪ್ಲೇಗ್-ಕೊರೊನಾದಂತಹ ಸಾಂಕ್ರಾಮಿಕಗಳು ಬಂದು ಹೋದವು. ಕಾಲ ಚಲನಶೀಲವಾದುದು, ಈ ಕೆಟ್ಟ ಸಮಯವೂ ಕಳೆದುಹೋಗುತ್ತದೆ ಎಂಬ ಅರಿವಿರಲಿ.
3. **ಚಿಕ್ಕ ಸಂಭ್ರಮಗಳಲ್ಲಿ ನೆಮ್ಮದಿ:** ದೊಡ್ಡ ಗುರಿಗಳು ಈಡೇರದಿದ್ದಾಗ ಕಂಗೆಡದೆ, ದಿನನಿತ್ಯದ ಸಣ್ಣ ಸಣ್ಣ ಸಂತೋಷಗಳಲ್ಲಿ (ಉದಾಹರಣೆಗೆ ಒಂದು ಕಪ್ ಕಾಫಿ, ಮಿತ್ರನ ಜೊತೆಗಿನ ಮಾತು, ಒಂದು ಹಳೆಯ ಹಾಡು) ಆಶ್ರಯ ಪಡೆಯಬೇಕು . ಇದು ನಮ್ಮ ಮನಸ್ಸಿನ ಬ್ಯಾಟರಿಯನ್ನು ರೀಚಾರ್ಜ್ ಮಾಡುತ್ತದೆ.



4. **ದೈಹಿಕ ಮತ್ತು ಮಾನಸಿಕ ಶಿಸ್ತು:** ಪ್ರತಿದಿನದ ಧ್ಯಾನ ಮತ್ತು ಓದು ನಮ್ಮ ಆಲೋಚನಾ ಕ್ರಮವನ್ನು ಗಟ್ಟಿಗೊಳಿಸುತ್ತದೆ. ಉತ್ತಮ ಸಾಹಿತ್ಯದ ಓದು ನಮ್ಮನ್ನು ಮಹಾಪುರುಷರ ಸಂಕಷ್ಟಗಳ ಜೊತೆ ಕನೆಕ್ಟ್ ಮಾಡುತ್ತದೆ, ಆಗ ನಮ್ಮ ಕಷ್ಟಗಳು ನಗಣ್ಯವಾಗಿ ಕಾಣುತ್ತವೆ.
6. **ಸಂಬಂಧಗಳಲ್ಲಿನ ಪ್ರತಿಕೂಲತೆ;** ಇಂದಿನ ಕಾಲದಲ್ಲಿ ಸಂಬಂಧಗಳೂ ಕೂಡ ನಮ್ಮ ಪರವಾಗಿ ಇರುವುದಿಲ್ಲ. ನಂಬಿದವರು ಮೋಸ ಮಾಡಬಹುದು ಅಥವಾ ಪ್ರೀತಿಪಾತ್ರರು ನಮ್ಮನ್ನು ಅರ್ಥಮಾಡಿಕೊಳ್ಳದೆ ಇರಬಹುದು. ಇಂತಹ ಸಮಯದಲ್ಲೂ ಮನಸ್ಸು ಸನ್ನದ್ಧವಾಗಿರಬೇಕು. ಯಾರೋ ಒಬ್ಬರು ನಮ್ಮನ್ನು ಕಡೆಗಣಿಸಿದರು ಎಂಬ ಕಾರಣಕ್ಕೆ ನಮ್ಮ ಸ್ವಂತ ಮೌಲ್ಯವನ್ನು ನಾವು ಕಡಿಮೆ ಮಾಡಿಕೊಳ್ಳಬಾರದು. "ಇದು ಅವರ ದೃಷ್ಟಿಕೋನ, ನನ್ನದಲ್ಲ" ಎಂದು ಶಾಂತವಾಗಿರುವುದು ಅತ್ಯಂತ ದೊಡ್ಡ ಗೆಲುವು.

ಬದುಕು ಒಂದು ಸುಂದರ ರಂಗಮಂಚ

ಜೀವನವು ನಮಗೆ ಯಾವಾಗಲೂ ಸಿಹಿ ತಿನಿಸುಗಳನ್ನೇ ನೀಡುವುದಿಲ್ಲ. ಕೆಲವೊಮ್ಮೆ ಕಹಿ ಔಷಧವನ್ನೂ ನೀಡುತ್ತದೆ. ಆ ಔಷಧವು ನಮಗೆ ಇಷ್ಟವಿಲ್ಲದಿದ್ದರೂ ಅದು ನಮ್ಮ ಗುಣಮುಖಕ್ಕೆ ಅಗತ್ಯವಿರುತ್ತದೆ.

"ಮನಸು ಸದಾ ಸಹಜವಾಗಿ ಸನ್ನದ್ಧವಾಗಿರಬೇಕು" ಎಂಬುದರಲ್ಲಿ 'ಸಹಜವಾಗಿ' ಎಂಬ ಪದ ಬಹಳ ಮುಖ್ಯ. ನಾವು ಸನ್ನದ್ಧತೆಯನ್ನು ಪ್ರಯತ್ನಪಟ್ಟು ಮಾಡಬಾರದು, ಅದು ನಮ್ಮ ಸ್ವಭಾವದ ಭಾಗವಾಗಬೇಕು. ಸಮುದ್ರದ ಅಲೆಗಳು ಬರುವುದು ಹೇಗೆ ಸಹಜವೋ, ಅವುಗಳನ್ನು ಎದುರಿಸುವುದು ಅಷ್ಟೇ ಸಹಜವಾಗಿರಬೇಕು.

ಧೃತಿಗೆಡಬೇಡಿ, ಏಕೆಂದರೆ ನಿಮ್ಮ ಒಳಗಿರುವ ಶಕ್ತಿಯು ಹೊರಗಿನ ಸನ್ನಿವೇಶಗಳಿಗಿಂತ ಹೆಚ್ಚು ಬಲವಾದುದು. ಎದುರಾಗುವ ಪ್ರತಿಯೊಂದು ಅಡೆತಡೆಯನ್ನೂ ಒಂದು ಅನುಭವದ ಮೆಟ್ಟಿಲನ್ನಾಗಿ ಮಾಡಿಕೊಳ್ಳಿ, ನೆನಪಿಡಿ, ಶಾಂತ ಸಮುದ್ರದಲ್ಲಿ ಯಾರೂ ದಕ್ಷ ನಾವಿಕರಾಗಲು ಸಾಧ್ಯವಿಲ್ಲ; ಬಿರುಗಾಳಿಯನ್ನೇ ಎದುರಿಸಿದವನೇ ನಿಜವಾದ ಕ್ಯಾಪ್ಟನ್.

ಬನ್ನಿ, ನಮ್ಮ ಮನಸ್ಸನ್ನು ಅಲುಗಾಡದ ಹಿಮಾಲಯದಂತೆ ಮಾಡಿಕೊಳ್ಳೋಣ. ಆಗ ಯಾವುದೇ ಪ್ರತಿಕೂಲ ಗಾಳಿಯೂ ನಮ್ಮನ್ನು ತಣಿಸಬಲ್ಲದೇ ಹೊರತು ಉರುಳಿಸಲು ಸಾಧ್ಯವಿಲ್ಲ.



| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com

# ಘನ ಶರಣ ಬಹುರೂಪಿ ಚೌಡಯ್ಯ





| ವೀಣಾ ಹೇಮಂತ್‌ಗೌಡ ಪಾಟೀಲ್


ಚೌಡಯ್ಯನವರು ನಾಥ ಪರಂಪರೆಯನ್ನು ಅನುಸರಿಸುತ್ತಿದ್ದ ವ್ಯಕ್ತಿ. ಮೂಲತಹ ಮೈಸೂರು ಜಿಲ್ಲೆಯ ರೇಕಳಿಕೆ ಗ್ರಾಮದವರಾದ ಅವರು ಬಾಲ್ಯದಿಂದಲೇ ಆಧ್ಯಾತ್ಮ ಜೀವನಕ್ಕೆ ಮನಸೋತವರು. ತಮಗೆ ದೀಕ್ಷೆ ನೀಡಿದ ಗುರು ರೇಕನಾಥ ಹಾಗೂ ಜ್ಞಾನ ನೀಡಿದ ನಾಗಿನಾಥ ಗುರುಗಳ ಸ್ಮರಣಾರ್ಥವಾಗಿ ರೇಕಣ್ಣಪ್ರಿಯ ನಾಗಿನಾಥ ಎಂಬ ಅಂಕಿತ ನಾಮವನ್ನು ಹೊಂದಿದವರು. ಇವರ ಒಟ್ಟು 66 ವಚನಗಳು ಲಭ್ಯವಾಗಿದ. ಕಲ್ಯಾಣದ ಶರಣರಲ್ಲಿ ಇವರು ಒಬ್ಬರಾಗಿದ್ದು ವಿಧವಿಧದ ವೇಷಗಳನ್ನು ಹಾಕಿಕೊಂಡು ಆಯಾ ಪಾತ್ರಗಳಲ್ಲಿ ಅಭಿನಯಿಸುತ್ತ ಹಾಡಿಸುತ್ತಾ ಜನರನ್ನು ರಂಜಿಸುವುದು ಇವರ ಕಾಯಕವಾಗಿತ್ತು ಆದ್ದರಿಂದಲೇ ಇವರನ್ನು ಜನರು ಬಹುರೂಪಿ ಚೌಡಯ್ಯ ಎಂದು ಕರೆದರು.

ಗಣ ಸಹಸ್ರನಾಮ, ಗುರುರಾಜ ಚರಿತ್ರೆ, ಭೈರವೇಶ್ವರ ಕಥಾಮಣಿ ಸೂತ್ರ ರತ್ನಾಕರ ಎಂಬ ಗ್ರಂಥಗಳಲ್ಲಿ ಮಾತ್ರವಲ್ಲದೆ ಲಾವಣಿ ಪದ, ಸುಗ್ಗಿ ಹಾಡು, ಹಂತಿ ಪದ ಹಾಗೂ ಜಾನಪದಗಳಲ್ಲಿ ಇವರ ಕುರಿತ ಉಲ್ಲೇಖಗಳನ್ನು ನಾವು ಕಾಣುತ್ತೇವೆ.

ಇವರ ತಂದೆ ಜನವಶ್ಯ ಮತ್ತು ತಾಯಿ ಧರ್ಮವತಿ 12ನೇ ಶತಮಾನದ ಪ್ರಮುಖ ಶರಣರಲ್ಲಿ ಒಬ್ಬರಾದ ಇವರು ಚೋಳ ರಾಜರ ಸಂಸ್ಥಾನದಲ್ಲಿದ್ದ ಮೈಸೂರು ಸೀಮೆಯ ರೇಕಳಿಕೆ ಗ್ರಾಮದ ನಟುವಾಂಗ ಜನಾಂಗದವರು. ತಮ್ಮ ಕುಲದ ವೃತ್ತಿಯಾದ ವಿವಿಧ ಪಾತ್ರಗಳ ವೇಷಭೂಷಣಗಳನ್ನು ಹಾಕುವ ಬಹುರೂಪಿಯ ಕಾಯಕವನ್ನು ಮಾಡುತ್ತಿದ್ದರು

ಸ್ತ್ರೀ ಪ್ರಧಾನವಾದ ಕುಟುಂಬ ವ್ಯವಸ್ಥೆ ಇದ್ದ ಸಾಮಾಜಿಕ ಹಿನ್ನೆಲೆಯನ್ನು ಚೌಡಯ್ಯನವರು ಹೊಂದಿದ್ದರು. ಚೌಡಯ್ಯನವರ ತಾಯಿ ಭಿಕ್ಷೆಯ ರೂಪದಲ್ಲಿ ಮನೆಗೆ ಬಂದ ಶೈವ ಸನ್ಯಾಸಿಯ ಜೋಳಿಗೆಗೆ ಮಗುವನ್ನು ಹಾಕಿದಳು.ಹೀಗೆ ಜೋಳಿಗೆಗೆ ಬಂದ ಮಗುವನ್ನು ಶಿವನ ಪ್ರಸಾದ ಎಂದು ಭಾವಿಸಿ ಆ ಸನ್ಯಾಸಿಗಳು ತಮ್ಮ ಆಶ್ರಮದಲ್ಲಿ ಬೆಳೆಸಿ ಅದಕ್ಕೆ ಸಂಗೀತ ನಾಟ್ಯ ಗಾಯನಗಳನ್ನು ಕಲಿಸಿದರು. ರಾಮಕ್ರಿಯಾ ರಾಗ ಹಾಗೂ ಶಿವ ತಾಂಡವ ನೃತ್ಯದಲ್ಲಿ ಅದ್ಭುತ ಸಿದ್ಧಿಯನ್ನು ಚೌಡಯ್ಯನವರು ಪಡೆದರು.

ಮುಂದೆ ಅವರು ಕಲ್ಯಾಣದ ಶರಣರ ಕೀರ್ತಿಯನ್ನು ಕೇಳಿ ತಾನು ಕೂಡ ಕಲ್ಯಾಣಕ್ಕೆ ಬಂದು ನೆಲೆಸಿದರು.ಅಲ್ಲಿಯೇ ತಮ್ಮ ಬಹುರೂಪಿಯ ವೇಷವನ್ನು ಹಾಕುವ ಕಾಯಕವನ್ನು ಮಾಡಿ ಬಂದ ಹಣದಲ್ಲಿ ಶರಣ ದಾಸೋಹವನ್ನು ನಡೆಸಿದರು.



ಭಕ್ತಿ, ಕಾಯಕ ಮತ್ತು ದಾಸೋಹಗಳನ್ನು ತಮ್ಮ ಬದುಕಿನ ಅವಿಭಾಜ್ಯ ಅಂಗವನ್ನಾಗಿಸಿದರು ಬಹುರೂಪಿ ಚೌಡಯ್ಯ

ಗುರು ಎನ್ನ ಮುಟ್ಟಿ
ಗುರು ಶುದ್ಧವಾದನಯ್ಯ
ಲಿಂಗ ಎನ್ನ ಮುಟ್ಟಿ
ಲಿಂಗ ಶುದ್ಧವಾಯಿತ್ತಯ್ಯ
ಜಂಗಮ ಎನ್ನ
ಮುಟ್ಟಿ ಜಂಗಮ
ಶುದ್ಧವಾದನಯ್ಯ ಪ್ರಸಾದ
ಎನ್ನ ಮುಟ್ಟಿ ಪ್ರಸಾದ
ಶುದ್ಧವಾಯಿತ್ತಯ್ಯ
ಈ ಚತುರ್ವಿಧ ಎನ್ನ ಮುಟ್ಟಿ
ಶುದ್ಧವಾಯಿತು ಕಾಣಾ ರೇಕಣ್ಣ ಪ್ರಿಯ
ನಾಗಿನಾಥ

ಸತ್ಯ ಶುದ್ಧ ಕಾಯಕವನ್ನು ಮಾಡುವ ಭಕ್ತನ ಭಕ್ತಿಯ ಪರಾಕಾಷ್ಠೆಯನ್ನು ಹೇಳುವ ವಚನವಿದು. ನನ್ನೊಳಗಿನ ನಾನು ಎಂಬ ಸಮಷ್ಟಿ ಭಾವವನ್ನು ಹೊಂದಿದಾಗ ಗುರು,ಲಿಂಗ, ಜಂಗಮ ಮತ್ತು ಪ್ರಸಾದಗಳು ಶುದ್ಧವಾಗುತ್ತವೆ ಎಂದು ಹೇಳುವ ದಿಟ್ಟತನವನ್ನು ಚೌಡಯ್ಯನವರು ತೋರಿದ್ದಾರೆ.

ಅಲ್ಲಿಯ ಬಹುರೂಪ ಇಲ್ಲಿ ಬಂದಿತ್ತು
ಇಲ್ಲಿಯ ಬಹುರೂಪ ಎಲ್ಲಿ ಅಡಗಿತ್ತೋ
ಎನ್ನ ಬಹುರೂಪ ಬಲ್ಲವರಾರೋ
ನಾದ ಹರಿದು ಸ್ವರವು ಸೂಸಿದ ಬಳಿಕ
ಈ ಬಹುರೂಪ ಬಲ್ಲವರಾರೋ
ರೇಕಣ್ಣ ಪ್ರಿಯ ನಾಗಿನಾಥನಲ್ಲಿ

ಬಸವಣ್ಣನಿಂದ ಬದುಕಿತೀ ಲೋಕವೆಲ್ಲ

ಬಸವಣ್ಣನವರ ಹಾಗೂ ಕಲ್ಯಾಣದ ಇತರ ಶರಣ ಕುರಿತು ಅರಿತು ಇಲ್ಲಿಗೆ ಬಂದು ತಾವು ನೆಲೆ ನಿಂತಾಗ ತಮ್ಮ ಬಹುರೂಪಿಯ ಕಾಯಕವೂ ತಮ್ಮೊಂದಿಗೆ ಬಂದಿದೆ ಆ ಕಾಯಕದ ಜೊತೆಗೆ ಇಲ್ಲಿ ಶರಣರ ಸಾನಿಧ್ಯ ಅನುಭಾವ, ವಚನಗಳ ನಿರ್ವಚನ ಹೀಗೆ ಎಲ್ಲವೂ ತಮ್ಮೊಂದಿಗೆ ಬೆರೆತುಕೊಂಡಿದ್ದು ಇಲ್ಲಿಯ ಬಹುರೂಪ ಯಾರಿಗೆ ಗೊತ್ತು. ನಾದ ಹರಿದು ಸ್ವರ ಉಸುಸಿದ ಬಳಿಕ ಅಂದರೆ ದೇಹದ ಹಂಗು ತೊರೆದು ಪ್ರಾಣವು ಹೊರಟು ಹೋದಾಗ ಇಲ್ಲಿನ ಬಹುರೂಪದ ಅರಿವನ್ನು ಯಾರು ಅರಿಯುತ್ತಾರೆ ಎಂಬುದು ಅವರ ಪ್ರಶ್ನೆಯಾಗಿದೆ ಬಸವಣ್ಣನವರು ಹಾಕಿಕೊಟ್ಟ ಸರಳ ಜೀವನ ಮಾರ್ಗಗಳು ನಮಗೆಲ್ಲರಿಗೂ ದಾರಿ ದೀಪ ಎಂದು ಅವರು ಭಕ್ತಿಯಿಂದ ನುಡಿಯುತ್ತಾರೆ.

ಉಪೇಕ್ಷಿತ ವಚನಕಾರರು

ಮುಂದೆ ಕಲ್ಯಾಣ ಕ್ರಾಂತಿಯ ನಂತರ ವಚನಗಳ ಕಟ್ಟನ್ನು ರಕ್ಷಿಸುವ ಸಲುವಾಗಿ ಉಳವಿಯ ದಾರಿ ಹಿಡಿದು ಹೊರಟ ಶರಣರ ಗುಂಪಿನಲ್ಲಿ ಒಬ್ಬರಾಗಿ ಬಹುರೂಪಿ ಚೌಡಯ್ಯನವರು ಹೊರಟರು. ಮಾರ್ಗ ಮಧ್ಯದಲ್ಲಿ ಒಂದು ತಂಡವು ಮುರಗೋಡ ಮಾರ್ಗವಾಗಿ ನೇರ ಧಾರವಾಡಕ್ಕೆ ಹೋದರೆ ಮತ್ತೊಂದು ಗುಂಪು ಚೌಡಯ್ಯನವರ ನೇತೃತ್ವದಲ್ಲಿ ಹುಬ್ಬಳ್ಳಿಗೆ ಮಾರ್ಗವಾಗಿ ಹೊರಟ ಗುಂಪು ಮುಂದೆ ಹುಬ್ಬಳ್ಳಿಯಿಂದ ಕೇವಲ ಹತ್ತು ಕಿಲೋಮೀಟರ್ ದೂರದಲ್ಲಿ ಚೌಡಯ್ಯನವರು ತಮ್ಮ ಶರಣಗಣದೊಂದಿಗೆ ಉಳಿದುಕೊಂಡರು. ಅದುವೇ ಎಂದು ಭೈರಿ ದೇವರಕೊಪ್ಪ ಎಂದು ಕರೆಯಲ್ಪಡುವ ಬಹುರೂಪಿ ದೇವರಕೊಪ್ಪ. ಇಂದಿಗೂ ಕೂಡ ಅಲ್ಲಿ ಅಸ್ತಿತವಾಗಿರುವ ಹಲವಾರು ಗುಹೆಗಳನ್ನು ಬಸವ ಭಕ್ತರು ತೋರುತ್ತಾರೆ ಅತ್ಯಂತ ಶಾಂತವಾದ ವಾತಾವರಣದಲ್ಲಿ ಇರುವ ಈ ಗುಹೆಗಳಲ್ಲಿನ ಒಂದು ಗುಹೆಯಲ್ಲಿ ಚೌಡಯ್ಯನವರ ಸಮಾಧಿ ಇದೆ ಎಂದು ಹೇಳಲಾಗುತ್ತದೆ.

ಅಂತಹ ಘನ ಮಹಿಮ ಶರಣ ಬಹುರೂಪಿ ಚೌಡಯ್ಯನವರಿಗೆ ನಮ್ಮ ಶರಣು ಶರಣಾರ್ಥಿ

# ವ್ಯಾಮೋಹದ ಸ್ಪರ್ಶವಿಲ್ಲದ ಮಹಾತ್ಮ ಶ್ರೀ ಸಿದ್ದೇಶ್ವರ ಸ್ವಾಮೀಜಿ




| ಶಿವಬಸಪ್ಪ ಗು ಜಂಗಾಲಿ
ಲೇಖಕರು ಹಾಗೂ ಸಾಹಿತಿ

ಈ ಜಗತ್ತಿನಲ್ಲಿ ಮನುಷ್ಯನ ಬದುಕನ್ನು ಬಂಧಿಸುವ ಅನೇಕ ವ್ಯಾಮೋಹಗಳಿವೆ. ಹಣದ ವ್ಯಾಮೋಹ, ಅಧಿಕಾರದ ವ್ಯಾಮೋಹ, ಕೀರ್ತಿಯ ವ್ಯಾಮೋಹ, ಸಂಬಂಧಗಳ ವ್ಯಾಮೋಹ, ಹೆಸರಿನ ವ್ಯಾಮೋಹ ಇವೆಲ್ಲವು ಮನುಷ್ಯನ ಮನಸ್ಸನ್ನು ಕಟ್ಟಿಹಾಕುವ ಅದೃಶ್ಯ ಸರಪಳಿಗಳಾಗಿವೆ. ಸಾಮಾನ್ಯ ಮನುಷ್ಯನು ಇವುಗಳ ನಡುವೆ ಸಿಲುಕಿ ಬದುಕನ್ನು ಕಳೆಯುತ್ತಾನೆ. ಆದರೆ ಕೆಲವೇ ಕೆಲವು ಮಹಾತ್ಮರು ಈ ಎಲ್ಲ ವ್ಯಾಮೋಹಗಳ ಆಚೆ ನಿಂತು ಜೀವನದ ನಿಜವಾದ ಅರ್ಥವನ್ನು ಕಂಡುಕೊಳ್ಳುತ್ತಾರೆ. ಅಂತಹ ವಿರಳ ಮಹನೀಯರಲ್ಲಿ ಒಬ್ಬರು ಶ್ರೀ ಸಿದ್ದೇಶ್ವರ ಸ್ವಾಮೀಜಿ.

ಶ್ರೀ ಸಿದ್ದೇಶ್ವರ ಸ್ವಾಮೀಜಿಯವರ ಜೀವನವನ್ನು ಗಮನಿಸಿದರೆ, ಅಲ್ಲಿ ಆಡಂಬರ ಕಾಣುವುದಿಲ್ಲ, ಅಧಿಕಾರದ ಹಂಬಲ ಕಾಣುವುದಿಲ್ಲ, ಹೆಸರು-ಪ್ರತಿಷ್ಠೆಯ ಬೆನ್ನಟ್ಟುವಿಕೆ ಕಾಣುವುದಿಲ್ಲ. ಅವರ ಬದುಕು ಒಂದು ತೆರೆದ ಪುಸ್ತಕದಂತಿತ್ತು. ಸರಳತೆ ಅವರ ಆಭರಣವಾಗಿತ್ತು. ನಿಷ್ಕಾಮ ಸೇವೆ ಅವರ ಉಸಿರಾಗಿತ್ತು. ಆತ್ಮಜ್ಞಾನ ಅವರ ಸಂಪತ್ತಾಗಿತ್ತು.

ಇಂದಿನ ಕಾಲದಲ್ಲಿ ಅನೇಕರು ಧರ್ಮವನ್ನು ಕೂಡ ಒಂದು ಪ್ರದರ್ಶನವಾಗಿ ಮಾಡಿಕೊಂಡಿದ್ದಾರೆ. ವೇದಿಕೆಗಳು ದೊಡ್ಡದಾಗುತ್ತಿವೆ, ಪ್ರಚಾರ ಹೆಚ್ಚಾಗುತ್ತಿದೆ, ಆದರೆ ಅಂತರಂಗದ ಬೆಳಕು ಕ್ಷೀಣಿಸುತ್ತಿದೆ. ಇಂತಹ ಸಂದರ್ಭದಲ್ಲಿ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರು ತೋರಿಸಿದ ದಾರಿ ಒಂದು ದೀಪಸ್ತಂಭದಂತಿದೆ. ಅವರು ಮಾತಿಗಿಂತ ಬದುಕಿನ ಮೂಲಕವೇ ಜನರಿಗೆ ಪಾಠ ಕಲಿಸಿದರು.

ಅವರ ಪ್ರವಚನಗಳನ್ನು ಕೇಳಿದವರು ಒಂದು ವಿಷಯವನ್ನು ಸದಾ ಹೇಳುತ್ತಾರೆ ಸ್ವಾಮೀಜಿಯವರ ಮಾತುಗಳಲ್ಲಿ ಕೃತಕತೆ ಇರಲಿಲ್ಲ. ಅವರ ವಚನಗಳು ನೇರವಾಗಿ ಹೃದಯವನ್ನು ತಟ್ಟುತ್ತಿದ್ದವು. ಏಕೆಂದರೆ ಅವರು ಹೇಳುತ್ತಿದ್ದ ಪ್ರತಿಯೊಂದು ಮಾತಿನ ಹಿಂದೆ ಅನುಭವದ ಶಕ್ತಿ ಇತ್ತು. ಅವರು ಪುಸ್ತಕಗಳಿಂದ ಮಾತ್ರ ಜ್ಞಾನ ಪಡೆದವರಲ್ಲ; ಬದುಕಿನ ಸತ್ಯಗಳನ್ನು ಅರಿತ ಜ್ಞಾನಿಗಳಾಗಿದ್ದರು. ಸ್ವಾಮೀಜಿಯವರ ಜೀವನದ ಅತ್ಯಂತ ದೊಡ್ಡ ವೈಶಿಷ್ಟ್ಯವೆಂದರೆ, ಅವರಿಗೆ ಯಾವುದೇ ರೀತಿಯ ವ್ಯಾಮೋಹದ ಸ್ಪರ್ಶ ಇರಲಿಲ್ಲ. ಸಾವಿರಾರು ಜನರು ಅವರನ್ನು ಗೌರವಿಸಿದರು, ಲಕ್ಷಾಂತರ




ಜನರು ಅವರ ಮಾತುಗಳನ್ನು ಕೇಳಿದರು. ಆದರೂ ಅವರಲ್ಲಿ ಅಹಂಕಾರದ ಛಾಯೆಯು ಕಾಣಿಸಲಿಲ್ಲ. ಜನಪ್ರಿಯತೆ ಹೆಚ್ಚಾದಂತೆ ಅನೇಕರು ಬದಲಾಗುತ್ತಾರೆ. ಆದರೆ ಸ್ವಾಮೀಜಿಯವರು ಕೊನೆಯವರೆಗೂ ಅದೇ ಸರಳತೆಯನ್ನು ಉಳಿಸಿಕೊಂಡರು.

ಹಣವನ್ನು ಮನುಷ್ಯನ ಯಶಸ್ಸಿನ ಅಳತೆ ಎಂದು ನೋಡುವ ಈ ಕಾಲದಲ್ಲಿ, ಸ್ವಾಮೀಜಿಯವರು ಜೀವನದ ನಿಜವಾದ ಸಂಪತ್ತು ಮನಸ್ಸಿನ ಶಾಂತಿ ಎಂದು ಬೋಧಿಸಿದರು. ಬ್ಯಾಂಕ್ ಖಾತೆಗಳಲ್ಲಿ ಇರುವ ಹಣಕ್ಕಿಂತ ಮನಸ್ಸಿನೊಳಗಿನ ಸಂತೃಪ್ತಿ ದೊಡ್ಡದು ಎಂದು ಅವರು ತಿಳಿಸಿದರು. ಅವರ ಜೀವನವೇ ಆ ಸತ್ಯಕ್ಕೆ ಸಾಕ್ಷಿಯಾಗಿತ್ತು.

ಅಧಿಕಾರ ಮತ್ತು ಸ್ಥಾನಮಾನಕ್ಕಾಗಿ ಜನರು ಪರಸ್ಪರ ಹೋರಾಡುತ್ತಿರುವ ಸಮಾಜದಲ್ಲಿ, ಅವರು ವಿನಯವನ್ನು ಜೀವನದ ಶ್ರೇಷ್ಠ ಗುಣವೆಂದು ಪ್ರತಿಪಾದಿಸಿದರು. ಎಷ್ಟು ಜ್ಞಾನವಿದ್ದರು ವಿನಯವಿಲ್ಲದಿದ್ದರೆ ಅದು ಅಪೂರ್ಣ ಎಂದು ಅವರು ಹೇಳುತ್ತಿದ್ದರು. ಅವರ ಸರಳ ನಡೆ-ನುಡಿ ಈ ಸಂದೇಶವನ್ನು ಇನ್ನಷ್ಟು ಗಾಢಗೊಳಿಸುತ್ತಿತ್ತು. ಇಂದಿನ ಯುವಜನತೆ ಅನೇಕ ಗೊಂದಲಗಳ ನಡುವೆ ಬದುಕುತ್ತಿದೆ. ಸ್ಪರ್ಧೆ, ಒತ್ತಡ, ಆತಂಕ ಮತ್ತು ನಿರೀಕ್ಷೆಗಳ ನಡುವೆ ಮನಸ್ಸಿನ ನೆಮ್ಮದಿ ಕಳೆದುಹೋಗುತ್ತಿದೆ. ಅಂತಹ ಸಂದರ್ಭದಲ್ಲಿ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರ ಚಿಂತನೆಗಳು ಒಂದು ಔಷಧಿಯಂತೆ ಕಾರ್ಯನಿರ್ವಹಿಸುತ್ತವೆ. ಅವರು ಜೀವನವನ್ನು ಸರಳವಾಗಿ ನೋಡುವುದನ್ನು ಕಲಿಸಿದರು. ಅನಗತ್ಯ ಆಸೆಗಳನ್ನು ಕಡಿಮೆ ಮಾಡಿಕೊಳ್ಳುವುದನ್ನು ತಿಳಿಸಿದರು. ತೃಪ್ತಿಯೇ ನಿಜವಾದ ಸುಖ ಎಂದು ಬೋಧಿಸಿದರು.

ಅವರ ಮಾತುಗಳಲ್ಲಿ ಧರ್ಮದ ಹೆಸರಿನಲ್ಲಿ ಭಯ ಇರಲಿಲ್ಲ; ಪ್ರೀತಿಯಿತ್ತು. ಮೂಢನಂಬಿಕೆ ಇರಲಿಲ್ಲ; ವಿವೇಕವಿತ್ತು. ವಿಭಜನೆ ಇರಲಿಲ್ಲ; ಮಾನವೀಯತೆಯಿತ್ತು. ಅದಕ್ಕಾಗಿಯೇ ಅವರ ಚಿಂತನೆಗಳು ಎಲ್ಲ ವರ್ಗದ ಜನರಿಗೂ ಹತ್ತಿರವಾದವು.

ಒಬ್ಬ ಮಹಾತ್ಮನ ಮಹತ್ವವನ್ನು ಅಳೆಯುವುದು ಅವನ ಅನುಯಾಯಿಗಳ ಸಂಖ್ಯೆಯಿಂದಲ್ಲ; ಅವನು ಜನರ ಬದುಕಿನಲ್ಲಿ ತಂದ ಬದಲಾವಣೆಯಿಂದ. ಶ್ರೀ ಸಿದ್ದೇಶ್ವರ ಸ್ವಾಮೀಜಿಯವರು ಸಾವಿರಾರು ಜನರ ಮನಸ್ಸಿನಲ್ಲಿ ಆತ್ಮವಿಶ್ವಾಸದ ಬೆಳಕನ್ನು ಹಚ್ಚಿದರು. ಬದುಕಿನ ಅರ್ಥವನ್ನು ತಿಳಿಯುವ ದಾರಿಯನ್ನು ತೋರಿಸಿದರು. ಮನಸ್ಸಿನ ಶಾಂತಿಯ ಮಹತ್ವವನ್ನು ಅರಿವಿಗೆ ತಂದರು.

ವ್ಯಾಮೋಹಗಳೇ ಜೀವನವನ್ನು ನಡೆಸುತ್ತಿರುವಂತೆ ಕಾಣುವ ಈ ಯುಗದಲ್ಲಿ, ವ್ಯಾಮೋಹದ ಸ್ಪರ್ಶವಿಲ್ಲದೆ ಬದುಕುವುದು ಸಾಧ್ಯ ಎಂಬುದನ್ನು ತಮ್ಮ ಜೀವನದ ಮೂಲಕ ತೋರಿಸಿದ ಅಪರೂಪದ ಸಂತರು ಶ್ರೀ ಸಿದ್ದೇಶ್ವರ ಸ್ವಾಮೀಜಿ. ಅವರ ಜೀವನವು ಕೇವಲ ಒಬ್ಬ ವ್ಯಕ್ತಿಯ ಕಥೆಯಲ್ಲ; ಅದು ಒಂದು ಮೌಲ್ಯ, ಒಂದು ಚಿಂತನೆ, ಒಂದು ದಾರಿ.

ಇಂದು ಅವರು ನಮ್ಮ ನಡುವೆ ದೈಹಿಕವಾಗಿ ಇಲ್ಲದಿದ್ದರೂ, ಅವರ ಮಾತುಗಳು ಜೀವಂತವಾಗಿವೆ. ಅವರ ಸಂದೇಶಗಳು ಲಕ್ಷಾಂತರ ಹೃದಯಗಳಲ್ಲಿ ಬೆಳಕಾಗಿ ಉಳಿದಿವೆ. ಅವರ ಸರಳತೆ, ವಿನಯ, ಜ್ಞಾನ ಮತ್ತು ಮಾನವೀಯತೆ ಮುಂದಿನ ಪೀಳಿಗೆಗಳಿಗೂ ಮಾರ್ಗದರ್ಶಕವಾಗಿವೆ.

ಅಂತಹ ಮಹಾತ್ಮರನ್ನು ನೆನೆಯುವುದು ಎಂದರೆ ಕೇವಲ ಗೌರವ ಸಲ್ಲಿಸುವುದಲ್ಲ; ಅವರ ಮೌಲ್ಯಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವುದು. ವ್ಯಾಮೋಹಗಳನ್ನು ಕಡಿಮೆ ಮಾಡಿಕೊಂಡು, ಸರಳತೆಯನ್ನು ಅಳವಡಿಸಿಕೊಂಡು, ಮಾನವೀಯತೆಯನ್ನು ಬೆಳೆಸಿಕೊಂಡಾಗ ಮಾತ್ರ ಅವರ ಬದುಕಿನ ನಿಜವಾದ ಸಂದೇಶವನ್ನು ಅರ್ಥಮಾಡಿಕೊಂಡಂತಾಗುತ್ತದೆ.

ಆದ್ದರಿಂದಲೇ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರು ಕೇವಲ ಒಬ್ಬ ಸ್ವಾಮೀಜಿಯಲ್ಲ; ಅವರು ವ್ಯಾಮೋಹದ ಸ್ಪರ್ಶವಿಲ್ಲದ ಮಹಾತ್ಮ. ಅವರ ಜೀವನ ಒಂದು ಪಾಠ, ಅವರ ಚಿಂತನೆ ಒಂದು ಬೆಳಕು, ಅವರ ನೆನಪು ಒಂದು ಪ್ರೇರಣೆ.

# "ಛಲದ ಚೇತನ: ಮೈಕಲ್ ಜಾಕ್ಸನ್"




| ಡಾ.ಸುಧಾಕರ.ಜಿ.ಲಕ್ಕವಳ್ಳಿ

ಬಡತನದ ಕತ್ತಲು, ಅವಮಾನದ ಮುಳ್ಳುಹಾದಿ, ಕಣ್ಣೀರಿನ ಕಡಲು ಎಲ್ಲವನ್ನೂ ಮೆಟ್ಟಿ ಜಗತ್ತೇ ತಲೆಬಾಗುವಂತೆ ನಿಂತ ಚೇತನ ಮೈಕಲ್ ಜಾಕ್ಸನ್. ಅವರ ಬದುಕು ಯಶಸ್ಸಿನ ಗುಲಾಬಿ ಹಾದಿಯಲ್ಲ; ಅದು ಅಚಲ ಹೋರಾಟದ ಕೆಂಡದ ಕಥೆ. ಇಂದಿನ ಯುವ ಪೀಳಿಗೆಗೆ ಅದೊಂದು ಜೀವಂತ ಪಾಠ.

ಬಾಲ್ಯವೆಂದರೆ ಬಣ್ಣದ ಚಿಟ್ಟೆ. ಆದರೆ ಮೈಕಲ್‌ಗೆ ಅದು ಸ್ಟುಡಿಯೋದ ನಾಲ್ಕು ಗೋಡೆ. ಗೆಳೆಯರು ಆಟವಾಡುವ ಹೊತ್ತಿನಲ್ಲಿ ತಂದೆಯ ಕಠಿಣ ಶಿಸ್ತು, ದೈಹಿಕ ದಂಡನೆ, ಮಾನಸಿಕ ಒತ್ತಡ. ವರ್ಣಭೇದದ ವಿಷಕಾರಿದ ಅಮೆರಿಕದಲ್ಲಿ ಕಪ್ಪು ಕಲಾವಿದನಾಗಿ ಅವರು ಕುಡಿದ ಅವಮಾನದ ಲೋಟ ಒಂದೆರಡಲ್ಲ. ಆದರೆ ಪ್ರತಿಯೊಂದು

ಸ್ಫೂರ್ತಿ ಸುಧೆ - 44



ಗಾಯವನ್ನೂ ಅವರು ಸಂಗೀತದ ಸ್ವರವನ್ನಾಗಿ ಪರಿವರ್ತಿಸಿದರು.ನೋವನ್ನೇ ಸ್ಫೂರ್ತಿಯಾಗಿಸಿಕೊಂಡರು.

ಮೂನ್‌ವಾಕ್ ಹೆಜ್ಜೆಯಿಂದ ಭೂಮಿಯನ್ನೇ ತೇಲಿಸಿದರು. ಥ್ರಿಲ್ಲರ್ ಮೂಲಕ ಸಂಗೀತ ಲೋಕಕ್ಕೆ ಹೊಸ ವ್ಯಾಕರಣ ಬರೆದರು. ದೇಹವನ್ನು ಕಾಡಿದ ವಿಟಿಲಿಗೋ, ಬಿಡದ ಟೀಕೆ ಟಿಪ್ಪಣಿ. ಆದರೂ ವೇದಿಕೆ ಏರಿದರೆ ಅವರು ಬೆಂಕಿಯ ಮಿಂಚು. ಗಂಟೆಗಟ್ಟಲೆ ತಾಲೀಮು, ಪರಿಪೂರ್ಣತೆಯ ಹಪಾಹಪಿ. ಅನುಕರಣೆಯ ಹಾದಿ ತುಳಿಯದೆ ತಮ್ಮದೇ ಛಾಪು ಮೂಡಿಸಿದ ಛಲಗಾರ.

ನಿಮ್ಮನ್ನು ಜಗತ್ತು ಬಣ್ಣದಿಂದಲ್ಲ, ಕೌಶಲದಿಂದ ಗುರುತಿಸಬೇಕು ಎಂದು ಅವರು ಸಾಧಿಸಿ ತೋರಿದರು. ಶೂನ್ಯದಿಂದ ಶಿಖರಕ್ಕೇರಿದ ಆ ಪಯಣ ಕನಸುಗಾರರಿಗೆ ದಿವ್ಯ ದಾರಿದೀಪ. ಸೋಲು, ಟೀಕೆಗಳ ಬೆಟ್ಟವನ್ನು ಒಡೆದು ಸಾಧನೆಯ ಗಂಗೆಯನ್ನು ಹರಿಸಿದ ಮೈಕಲ್ ಜಾಕ್ಸನ್ ಸದಾ ಯುವ ಚೇತನಗಳಿಗೆ ಸ್ಫೂರ್ತಿಯ ಚಿಲುಮೆ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,